

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಡಿಸೆಂಬರ್ 13 ಮಂಗಳವಾರ 2022

ಸಂಪುಟ: 43 | ಸಂಚಿಕೆ: 236 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4



ಜನರ ವಂಚಿಸುತ್ತಿರುವ ಬ್ಲೇಡ್ ಕಂಪನಿಗಳ ಹತ್ತಿಕ್ಕಲು ಪ್ರತ್ಯೇಕ ನಿಗಾ ಘಟಕ ಸ್ಥಾಪನೆ

ಬಡ್ಡಿ ಆಸೆಗೆ ಬಡ, ಮಧ್ಯಮ ವರ್ಗದವರಿಂದ ಹಣ ಹೂಡಿಕೆ

■ ಮನೆ ಕುಸಿತ ಪರಿಹಾರ ಸಂಬಂಧ ಮಾರ್ಗಸೂಚಿ ಬದಲು; ಮನೆ ಕುಸಿದ ಕೂಡಲೇ ಡಿಸಿ ಮಾಹಿತಿ

■ ತಮಿಳುನಾಡು ಮಾದರಿ ಕಾನೂನು

– ಕಂದಾಯ ಸಚಿವ ಆರ್.ಅಶೋಕ್ ಪ್ರಕಟ



ಚೈನ್ ಲಿಂಕ್ ವಹಿವಾಟಿನ ಮೇಲೂ ಹದ್ದಿನ ಕಣ್ಣಿಡಲು ನಿರ್ಧಾರ

■ ಕಬಿನಿ ಅಣೆಕಟ್ಟೆಗೆ ಭೂಮಿ ಕಳೆದುಕೊಂಡವರಿಗೆ ಭೂಮಿ ಕಲ್ಪಿಸಲು ನಿರ್ಧಾರ; ಅರಣ್ಯ ಇಲಾಖೆ ತಕರಾರಿಗೂ ಪರಿಹಾರ

ಬೆಂಗಳೂರು,ಡಿ.12(ಕೆಎಂಶಿ)–ಬಡ ಹಾಗೂ ಮಧ್ಯಮ ವರ್ಗದ ಜನರನ್ನು ವಂಚಿಸುವ ಬ್ಲೇಡ್ ಕಂಪನಿಗಳ ಹತ್ತಿಕ್ಕಲು ತಮಿಳುನಾಡು ಮಾದರಿಯಲ್ಲೇ ಕಾನೂನು ತರುವುದಾಗಿ ಹೇಳಿರುವ ಕಂದಾಯ ಸಚಿವ ಆರ್.ಅಶೋಕ್, ಇದಕ್ಕಾಗಿ ಪ್ರತ್ಯೇಕ ನಿಗಾ ಘಟಕವನ್ನು ಸ್ಥಾಪಿಸುವುದಾಗಿ ತಿಳಿಸಿದ್ದಾರೆ.

ಇಂದಿಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ಬಿಗಿಯಾದ ಕಾನೂನು ಇದ್ದರೂ, ಒಂದಲ್ಲ ಒಂದು ಮಾರ್ಗದಲ್ಲಿ ಆಸೆಗಳನ್ನು ತೋರಿಸಿ, ಬ್ಲೇಡ್ ಕಂಪನಿಗಳು ಜನರಿಂದ ಕೋಟ್ಯಾಂತರ ರೂ. ಲೂಟಿ ಮಾಡುತ್ತಿವೆ. ಜನಸಾಮಾನ್ಯರಿಗೂ ಕಂಪನಿಗಳ ಬಗ್ಗೆ ತಿಳಿದಿದ್ದರೂ ದುರಾಸೆಯಿಂದ ತಾವು ಕಷ್ಟಪಟ್ಟು ದುಡಿದ ಹಣವನ್ನು ಸುರಿದು ಮೋಸಕ್ಕೆ ಒಳಗಾಗುತ್ತಾರೆ. ರಾಜ್ಯಾದ್ಯಂತ ಹೆಚ್ಚಿನ ಬಡ್ಡಿ ದರದ ಆಮಿಷವೊಡ್ಡಿ ಹಣ ಸಂಗ್ರಹಿಸುವ ಎಲ್ಲ ರೀತಿಯ ಚಟುವಟಿಕೆಗಳನ್ನು ಹತ್ತಿಕ್ಕುವುದು ಅನಿವಾರ್ಯವಾಗಿದ್ದು ಈ ಹಿನ್ನೆಲೆಯಲ್ಲಿ ಪ್ರತ್ಯೇಕ ನಿಗಾ ಘಟಕ ಸ್ಥಾಪನೆಯಾಗಲಿದೆ ಎಂದರು. ಚೈನ್ ಲಿಂಕ್‌ನಂತಹ ವಹಿವಾಟುಗಳ ಮೇಲೂ ಹದ್ದಿನ ಕಣ್ಣಿಡುವ ಅನಿವಾರ್ಯತೆ ಸೃಷ್ಟಿಯಾಗಿದ್ದು, ಇದು ಮೋಸವೆಂದು ಗೊತ್ತಿದ್ದರೂ ಇದರಲ್ಲಿ ಭಾಗಿಯಾಗುವುದು ಅನಿವಾರ್ಯವೆನ್ನುವಂತಹ ಪರಿಸ್ಥಿತಿಯನ್ನು ಹಲವರು ಅನುಸರಿಸುತ್ತಿದ್ದಾರೆ ಎಂದರು.

ಹೆಚ್ಚಿನ ಬಡ್ಡಿಯ ಆಸೆಗೆ ಬಡ–ಮಧ್ಯಮ ವರ್ಗದವರು ಖಾಸಗಿಯವರ ಬಳಿ ಬಂಡವಾಳ ಹೂಡಿಕೆ ಮಾಡುತ್ತಿದ್ದು ಬಹುತೇಕ ಪ್ರಕರಣಗಳಲ್ಲಿ ಹಾಕಿದ ಬಂಡವಾಳವೂ ಅವರ ಕೈ ಸೇರದ ಪರಿಸ್ಥಿತಿ ಸೃಷ್ಟಿಯಾಗುತ್ತಿದೆ ಎಂದು ವಿಷಾದಿಸಿದರು.

ಮನೆ ಕುಸಿತಕ್ಕೆ ಪರಿಹಾರ ಮಾರ್ಗ ಸೂಚಿ ಬದಲು: ಇನ್ನು ಮಳೆಗೆ ಕುಸಿಯುವ ಮನೆಗಳಿಗೆ ಪರಿಹಾರ ನೀಡುವ ವಿಷಯದಲ್ಲಿ ಮಾರ್ಗಸೂಚಿಯನ್ನು ಬದಲಿಸುವುದಾಗಿ ಇದೇ ಸಂದರ್ಭದಲ್ಲಿ ಅವರು ತಿಳಿಸಿದರು. ಮಳೆಗೆ ಸಿಲುಕಿ ತಮ್ಮ ಮನೆ ಕುಸಿದಿದೆ ಎಂದು ಹಲವು ತಿಂಗಳುಗಳ ನಂತರ ಹೇಳುವವರು ಹೆಚ್ಚಿದ್ದಾರೆ. ಆದರೆ ಮಳೆಗೆ ಮನೆ ಕುಸಿದ ಕೂಡಲೇ ಸಂಬಂಧಪಟ್ಟ ಜಿಲ್ಲಾಧಿಕಾರಿಗಳ ಗಮನಕ್ಕೆ ಅದು ಬರಬೇಕು ಮತ್ತು ಮಳೆಯಿಂದ ಮನೆ ಕಳೆದುಕೊಂಡವರು ಗರಿಷ್ಠ ಒಂದು ತಿಂಗಳ ಒಳಗಾಗಿ ಸರ್ಕಾರದ ಗಮನಕ್ಕೆ ತರಬೇಕು. ಹಾಗಾದಾಗ ಮಾತ್ರ ಸರ್ಕಾರ ಪರಿಹಾರ ಧನವನ್ನು ಒದಗಿಸುತ್ತದೆ ಎಂದರು. ಕಬಿನಿ ಅಣೆಕಟ್ಟೆನ ನಿರ್ಮಾಣ ಕಾರ್ಯದಿಂದ ಅರಣ್ಯದಲ್ಲಿದ್ದ ನೂರಾರು ಕುಟುಂಬಗಳು ನಿರಾಶ್ರಿತವಾಗಿದ್ದು, ಈ ಕುಟುಂಬಗಳಿಗೆ ಭೂಮಿ ನೀಡಲು 1070 ಎಕರೆ ಭೂಮಿಯನ್ನು ಅರಣ್ಯ ಪ್ರದೇಶದ ವ್ಯಾಪ್ತಿಯಿಂದ ಕಂದಾಯ ಇಲಾಖೆ ವ್ಯಾಪ್ತಿಗೆ ಪಡೆಯಲು ಸರ್ಕಾರ ಬಯಸಿದೆ ಎಂದು ಇದೇ ಸಂದರ್ಭದಲ್ಲಿ ಹೇಳಿದರು.

ಕಬಿನಿ ನಿರಾಶ್ರಿತರಿಗೆ ಭೂಮಿ: ಕಬಿನಿ ಅಣೆಕಟ್ಟು ನಿರ್ಮಾಣದ ಸಮಯದಲ್ಲಿ ನಿರಾಶ್ರಿತರಾದವರಿಗೆ ಏಳು ನೂರು ಎಕರೆ ಭೂಮಿಯನ್ನು ಒದಗಿಸಲು ತೀರ್ಮಾನಿಸಲಾಯಿತು. ಆದರೆ ಆ ಭೂಮಿಯನ್ನು ಪಡೆದವರಿಗೆ ಅರಣ್ಯ ಇಲಾಖೆ ಇದುವರೆಗೆ ಪೋಡಿ ಮಾಡಿಕೊಡಲು ಒಪ್ಪಿಗೆ ನೀಡಿಲ್ಲ.

ಸದರಿ ಭೂಮಿಯನ್ನು ಅರಣ್ಯ ಪ್ರದೇಶದ ವ್ಯಾಪ್ತಿಯಿಂದ ಕೈ ಬಿಡದೆ ತಾವು ಪೋಡಿ ಮಾಡಿಕೊಡಲು ಬರುವುದಿಲ್ಲ ಎಂದು ಅರಣ್ಯ ಇಲಾಖೆ ಪಟ್ಟು ಹಿಡಿದಿದ್ದು, ಇತ್ತೀಚೆಗೆ ಆ ಭಾಗದಲ್ಲಿ ನಡೆಸಿದ ಗ್ರಾಮ ವಾಸ್ತವ್ಯ ಕಾರ್ಯಕ್ರಮದ ಹಿನ್ನೆಲೆಯಲ್ಲಿ ಅರಣ್ಯ ಮತ್ತು ಕಂದಾಯ ಇಲಾಖೆಯ ಅಧಿಕಾರಿಗಳ ಸಭೆ ನಡೆಸಿ ಈ ವಿಷಯದ ಬಗ್ಗೆ ಚರ್ಚಿಸಲಾಗಿದೆ. ಈಗಾಗಲೇ ನೀಡಿರುವ ಏಳುನೂರು ಎಕರೆ ಮತ್ತು ಬಾಕಿ ಉಳಿದ 378 ಎಕರೆ ಭೂಮಿಯನ್ನು 211 ಕುಟುಂಬಗಳಿಗೆ ನೀಡಲು ಇರುವ ಸಮಸ್ಯೆಗಳ ಬಗ್ಗೆ ಪರಿಶೀಲನೆ ನಡೆಸಲಾಗಿದೆ ಎಂದರು. ಈಗಾಗಲೇ ಮಂಜೂರು ಮಾಡಿರುವ ▶ 2ನೇ ಪುಟಕ್ಕೆ



ಬಿಜೆಪಿ ತೊರೆಯಲು ಸಂದೇಶ್ ನಿರ್ಧಾರ


ಮೈಸೂರು,ಡಿ.12(ಎಂಟಿವೈ)–



ವಿಧಾನ ಪರಿಷತ್ ಸದಸ್ಯ ಅಡಗೂರು ಹೆಚ್.ವಿಶ್ವನಾಥ್ ಬಿಜೆಪಿ ತೊರೆಯಲಿದ್ದಾರೆ ಎಂಬ ಮಾತುಗಳು ಕೇಳಿ ಬರುತ್ತಿರುವ ಬೆನ್ನಲ್ಲೇ ಇದೀಗ ಮೈಸೂರು ಭಾಗದ ಮತ್ತೊಬ್ಬ ಪ್ರಭಾವಿ ನಾಯಕರೂ ಆಗಿರುವ ವಿಧಾನ ಪರಿಷತ್ ಮಾಜಿ ಸದಸ್ಯ ಸಂದೇಶ್ ನಾಗರಾಜ್ ಬಿಜೆಪಿ ನಾಯಕರ ನಡೆಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ವಿಧಾನಸಭಾ ಚುನಾವಣೆ ಸಮೀಪಿಸುತ್ತಿರುವಂತೆ ಪಕ್ಷಾಂತರ ಪರ್ವ ಆರಂಭವಾಗಿದ್ದು, ಮೈಸೂರು ಭಾಗದ 2 ಪ್ರಬಲ ಸಮುದಾಯಕ್ಕೆ ಸೇರಿರುವ ಈ ನಾಯಕರು ಬಿಜೆಪಿ ತೊರೆಯಲು ನಿರ್ಧರಿಸಿರುವುದು ಸಹಜವಾಗಿಯೇ ಬಿಜೆಪಿಗೆ ಹಿನ್ನಡೆಯಾಗಲಿದೆ ಎಂದು ವಿಶ್ಲೇಷಿಸಲಾಗುತ್ತಿದೆ.

ಬಿಜೆಪಿ ತೊರೆಯುತ್ತೇನೆ: ವಿಧಾನ ಪರಿಷತ್ ಮಾಜಿ ಸದಸ್ಯರಾದ ಸಂದೇಶ್ ನಾಗರಾಜು ಸೋಮವಾರ ಮಾಧ್ಯಮದವರೊಂದಿಗೆ ಮಾತನಾಡಿ, ನಾನು ಬಿಜೆಪಿಯನ್ನು ತೊರೆಯಲು ನಿರ್ಧರಿಸಿದ್ದೇನೆ. ಈಗಂತೂ ಬಿಜೆಪಿಯಲ್ಲಿ ಸಕ್ರಿಯನಾಗಿಲ್ಲ. ಕಳೆದ ವಿಧಾನ ಪರಿಷತ್ ಚುನಾವಣೆ ಸಂದರ್ಭದಲ್ಲಿ ನನ್ನನ್ನು ಬಿಜೆಪಿಗೆ ಸೇರಿಸಿಕೊಂಡರು. ಆಗ ನೀಡಿದ್ದ ಭರವಸೆ ಈಡೇರಿಸದೇ ನನಗೆ ಅನ್ಯಾಯ ಮಾಡಿದರು ಎಂದು ಕಿಡಿಕಾರಿದರು. ಬಿಜೆಪಿಯಲ್ಲಾದ ಅನ್ಯಾಯದಿಂದ ಬೇಸತ್ತಿದ್ದೇನೆ. ಬಿಜೆಪಿಯ ಸಹವಾಸ ▶ 9ನೇ ಪುಟಕ್ಕೆ



ಆಪರೇಷನ್‌ಗೆ ಒಳಗಾಗುವವರಿಗೆ
ಟಿಕೆಟ್‌ಗೆ ಶಿಫಾರಸು ಬೇಡ

● ರಾಜ್ಯ ಕಾಂಗ್ರೆಸ್ ನಾಯಕರಿಗೆ ವರಿಷ್ಠರ ಸೂಚನೆ ● ದೆಹಲಿಯಲ್ಲಿಂದು ಸುದೀರ್ಘ ಸಮಾಲೋಚನೆ ● ತವರು ರಾಜ್ಯದ ಚುನಾವಣೆಯ ಪ್ರತಿಷ್ಠೆಯಾಗಿ ಪರಿಗಣಿಸಿರುವ ಖರ್ಗೆ



ಬೆಂಗಳೂರು, ಡಿ.12(ಕೆಎಂಶಿ)–ಚುನಾವಣೆಗಳಲ್ಲಿ ಸ್ಪರ್ಧಿಸಿ, ಗೆದ್ದ ಬಳಿಕ ಬೇರೆ ಪಕ್ಷಗಳಿಗೆ ಜಿಗಿಯುವಂತಹ ಮಂದಿಗೆ ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಅವಕಾಶ ಬೇಡ. ಗೆದ್ದೇ ಗೆಲ್ಲುತ್ತೇವೆ ಎಂಬ ಕ್ಷೇತ್ರಗಳಲ್ಲಿ ಯಾರು ಅಭ್ಯರ್ಥಿ ಎಂಬುದನ್ನು ಮೌಖಿಕವಾಗಿ ತಿಳಿಸುವಂತೆ ಕಾಂಗ್ರೆಸ್ ವರಿಷ್ಠರು ರಾಜ್ಯ ನಾಯಕರಿಗೆ ಸೂಚಿಸಿದ್ದಾರೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಗಳಾದ ಕೆ.ಸಿ.ವೇಣುಗೋಪಾಲ್, ರಣದೀಪ್‌ಸಿಂಗ್ ಸುರ್ಜೇವಾಲ ದೆಹಲಿಯಲ್ಲಿಂದು ಕರ್ನಾಟಕ ಚುನಾವಣೆಗೆ ಸಂಬಂಧಿಸಿದಂತೆ ರಾಜ್ಯ ಮುಖಂಡರೊಟ್ಟಿಗೆ ಸುದೀರ್ಘ ಸಮಾಲೋಚನೆ ನಡೆಸಿ, ಕೆಲವು ಸಲಹೆ–ಸೂಚನೆ ಗಳನ್ನು ನೀಡಿದ್ದಾರೆ. ಮಲ್ಲಿಕಾರ್ಜುನ ಖರ್ಗೆಯವರು ರಾಷ್ಟ್ರೀಯ ಅಧ್ಯಕ್ಷರಾದ ನಂತರ ಗುಜರಾತ್ ಹಾಗೂ ಹಿಮಾಚಲ ಪ್ರದೇಶ ವಿಧಾನಸಭೆಗೆ ನಡೆದ ಚುನಾವಣೆಯಲ್ಲಿ ಅರ್ಧ ಯಶಸ್ಸು ಕಂಡಿದ್ದಾರೆ. ಈ ಚುನಾವಣೆಯ ನಂತರ ತಮ್ಮ ಸ್ವಂತ ರಾಜ್ಯ ಕರ್ನಾಟಕ ವಿಧಾನಸಭೆಗೆ ಏಪ್ರಿಲ್–ಮೇ 2023ಕ್ಕೆ ಚುನಾವಣೆ ಜರುಗಲಿದೆ. ಖರ್ಗೆ ಅವರು ತಮ್ಮ ಸ್ವಂತ ರಾಜ್ಯದಲ್ಲಿ ಕಾಂಗ್ರೆಸ್ ಅನ್ನು ಅಧಿಕಾರಕ್ಕೆ ತರುವುದನ್ನು ಪ್ರತಿಷ್ಠೆಯಾಗಿ ತೆಗೆದುಕೊಂಡಿದ್ದು, ನಾಲ್ಕೈದು ತಿಂಗಳ ಮುನ್ನವೇ ಬಿಜೆಪಿ ವರಿಷ್ಠರ ಮಾದರಿಯಲ್ಲೇ ಚುನಾವಣಾ ತಂತ್ರಗಾರಿಕೆ ಆರಂಭಿಸಿದ್ದಾರೆ. ತಮ್ಮ ಐದು ದಶಕಗಳ ಅನುಭವದ ಆಧಾರದ ಮೇಲೆ ಮುಂಬರುವ ವಿಧಾನಸಭಾ ಚುನಾವಣೆಯನ್ನು ಹೇಗೆ ಎದುರಿಸಬೇಕು, ನಾವು ಅಧಿಕಾರದ ಚುಕ್ಕಾಣಿ ಹಿಡಿಯಲು ಮಾಡಬೇಕಾದ ಕಾರ್ಯತಂತ್ರ, ರಾಜ್ಯದಲ್ಲಿ ನಮಗಿರುವ ಅವಕಾಶವನ್ನು ಹೇಗೆ ಸದುಪಯೋಗ ಮಾಡಿಕೊಳ್ಳಬೇಕೆಂಬುದರ ಬಗ್ಗೆ ಇಲ್ಲಿನ ನಾಯಕರಿಗೆ ಸುದೀರ್ಘ ಪಾಠ ಮಾಡಿದ್ದಾರೆ.

ಖರ್ಗೆ ಅವರ ಮಾತಿಗೆ ರಾಜ್ಯ ಉಸ್ತುವಾರಿ ನೋಡಿಕೊಂಡಿದ್ದ, ಹಾಗೂ ಈಗ ನೋಡಿಕೊಳ್ಳುತ್ತಿರುವ ವೇಣುಗೋಪಾಲ್ ಮತ್ತು ಸುರ್ಜೇವಾಲ್ ಧನಿಗೂಡಿಸಿ, ▶ 9ನೇ ಪುಟಕ್ಕೆ


75 ದಿನ ಭಾರೀ ಹೋರಾಟ

ಸಭೆ ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿದ ಸುರ್ಜೇವಾಲ, ಖರ್ಗೆ ಅವರ ನೇತೃತ್ವದಲ್ಲಿ ಚುನಾವಣಾ ತಯಾರಿ ಬಗ್ಗೆ ಸಮಾಲೋಚನೆ ನಡೆಸಿದ್ದೇವೆ. ಬೊಮ್ಮಾಯಿ ನೇತೃತ್ವದ ಭ್ರಷ್ಟಾಚಾರ ಸರಕಾರದ ವಿರುದ್ಧ, 40% ಕಮಿಷನ್ ವಿರುದ್ಧ ಕಾಂಗ್ರೆಸ್ ಹೋರಾಟ ಮುಂದುವರೆಸಲಿದ್ದೇವೆ. ಮುಂದಿನ 75 ದಿನಗಳು ಉಗ್ರ ಹೋರಾಟ ನಡೆಯಲಿದೆ ಎಂದು ಸ್ಪಷ್ಟಪಡಿಸಿದರು. ಬಿಜೆಪಿಯನ್ನು ಆಡಳಿತದಿಂದ ಕಿತ್ತೊಗೆಯಲು ಮಾರ್ಗಸೂಚಿ ರಚಿಸಿದ್ದೇವೆ. ಕೃಷ್ಣಾ, ಮಹದಾಯಿ ಕುರಿತು ಹುಬ್ಬಳ್ಳಿಯಲ್ಲಿ ಜನವರಿ 2ರಂದು ಸಮಾವೇಶ ಮಾಡಲಿದ್ದೇವೆ. ಚಿತ್ರದುರ್ಗದಲ್ಲಿ ಜ.8 ರಂದು SC, ST ಸಮಾವೇಶ ನಡೆಯಲಿದೆ. ಬಳಿಕ ಹಿಂದುಳಿದ ವರ್ಗಗಳ ಸಮಾವೇಶ ಮಾಡಲಿದ್ದೇವೆ ಎಂದು ಮಾಹಿತಿ ನೀಡಿದರು. ಇನ್ನು ಜನವರಿ ಮೊದಲ ವಾರದಿಂದ ಜಿಲ್ಲಾ ಕೇಂದ್ರಗಳಲ್ಲಿ ನಾಯಕರ ಒಗ್ಗಟ್ಟಿನ ಜಂಟಿಯಾತ್ರೆ ನಡೆಯಲಿದ್ದು, 224 ಕ್ಷೇತ್ರದಲ್ಲಿ ಯಾತ್ರೆ ಮೂಲಕ ಪ್ರಚಾರ ನಡೆಸಲಿದ್ದೇವೆ. ಪಟ್ಟಕ್ಕಿಂತ ಕಾಂಗ್ರೆಸ್ ಪಕ್ಷ ಮುಖ್ಯ. ಪಕ್ಷದ ನಾಯಕರ ಮೇಲೆ ವಿಶ್ವಾಸವಿದೆ. ಅಧಿಕಾರಕ್ಕಾಗಿ ಯಾವುದೇ ಭಿನ್ನಮತ ಇರುವುದಿಲ್ಲ. ಕೃಷ್ಣ ನದಿ ನೀರಿನ ಬಗ್ಗೆ ವಿಜಾಪುರದಲ್ಲಿ ಡಿಸೆಂಬರ್ 30ಕ್ಕೆ ಸಮಾವೇಶ ಮಾಡುತ್ತೇವೆ ಎಂದು ತಿಳಿಸಿದರು.

ಇಂದು ಚಾ.ನಗರ ಜಿಲ್ಲೆಗೆ ಮುಖ್ಯಮಂತ್ರಿ ಬೊಮ್ಮಾಯಿ ಭೇಟಿ

ಚಾ.ನಗರ, ಹನೂರಲ್ಲಿ ಬೃಹತ್ ವೇದಿಕೆ

ಚಾಮರಾಜನಗರ, ಡಿ.12– ಮುಖ್ಯ



ಮಂತ್ರಿ ಬಸವರಾಜ ಬೊಮ್ಮಾಯಿ ಅವರು ನಾಳೆ (ಡಿ.13) ಜಿಲ್ಲಾ ಕೇಂದ್ರವಾದ ಚಾಮರಾಜನಗರ ಮತ್ತು ಹನೂರಿಗೆ ಭೇಟಿ ನೀಡಿ ವಿವಿಧ ಅಭಿವೃದ್ಧಿ ಕಾರ್ಯಗಳಿಗೆ ಚಾಲನೆ ನೀಡಲಿದ್ದಾರೆ. ನಾಳೆ ಬೆಳಗ್ಗೆ 9.30ಕ್ಕೆ ಬೆಂಗಳೂರಿನ ಹೆಚ್‌ಎಎಲ್ ವಿಮಾನ ನಿಲ್ದಾಣದಿಂದ ವಿಶೇಷ ವಿಮಾನದ ಮೂಲಕ ಮೈಸೂರಿಗೆ 10.05 ಗಂಟೆಗೆ ಆಗಮಿಸಲಿದ್ದಾರೆ. 10.15ಕ್ಕೆ ಮೈಸೂರು ವಿಮಾನ ನಿಲ್ದಾಣದಿಂದ ರಸ್ತೆ ಮೂಲಕ ಚಾಮರಾಜನಗರ ಡಾ.ಬಿ.ಆರ್. ಅಂಬೇಡ್ಕರ್ ಕ್ರೀಡಾಂಗಣಕ್ಕೆ ಬೆಳಗ್ಗೆ 11.15ಕ್ಕೆ ಆಗಮಿಸಿ, ಇಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಚಾಮರಾಜನಗರ ಮತ್ತು ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ವಿವಿಧ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ ಹಾಗೂ ಉದ್ಘಾಟನೆ ನೆರವೇರಿಸಲಿದ್ದಾರೆ.

ವಾಣಿಜ್ಯ ಸಂಕೀರ್ಣ ಗುತ್ತಿಗೆ ಕರಾರು ಉಲ್ಲಂಘನೆ

ಕೋರ್ಟ್ ಆದೇಶ ಜಾರಿಗೆ ಹೋದ ಕೆಎಸ್‌ಆರ್‌ಟಿಸಿ ಅಧಿಕಾರಿಗಳಿಗೆ ಮಚ್ಚು ತೋರಿಸಿ ದಂಪತಿ ಧಮ್ಕಿ

● ಸಾತಗಳ್ಳಿ ಕೆಎಸ್‌ಆರ್‌ಟಿಸಿ ನಿಲ್ದಾಣದಲ್ಲಿ ಮಹಿಳೆ ರಂಪಾಟ: ಕೆಲ ಕಾಲ ಭಯದ ವಾತಾವರಣ ● ಕಕ್ಕಾಬಿಕ್ಕಿಯಾಗಿ ಅಸಹಾಯಕರಂತೆ ಸಾಲಾಗಿ ನಿಂತ ಅಧಿಕಾರಿಗಳು ● ಮಹಿಳೆಯ ಪತಿಯಿಂದಲೂ ಅಧಿಕಾರಿಗಳಿಗೆ ಅವಾಚ್ಯ ಪದಗಳಿಂದ ನಿಂದನೆ; ಹಲ್ಲೆ ಯತ್ನ ● ಉದಯಗಿರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು



ಮೈಸೂರು, ಡಿ. 12– ಕೆಎಸ್‌ಆರ್‌ಟಿಸಿಗೆ ಸೇರಿದ ವಾಣಿಜ್ಯ ಸಂಕೀರ್ಣವನ್ನು ಗುತ್ತಿಗೆ ಪಡೆದಿದ್ದವನಿಗೆ ನ್ಯಾಯಾಲಯದ ಆದೇಶವನ್ನು ಜಾರಿ ಮಾಡಲು ತೆರಳಿದ ಕೆಎಸ್‌ಆರ್‌ಟಿಸಿ ಅಧಿಕಾರಿಗಳಿಗೆ ದಂಪತಿ ರಾಜಾರೋಷವಾಗಿ ಧಮ್ಕಿ ಹಾಕಿದ್ದಾರೆ. ಅದರಲ್ಲೂ ಮಹಿಳೆಯೊಬ್ಬಳು ಸಾರ್ವಜನಿಕರ ಎದುರಲ್ಲೇ ಮಚ್ಚು ತೋರಿಸಿ, ಬೆದರಿಕೆ ಹಾಕಿದರೆ, ಆಕೆಯ ಪತಿ ಅಧಿಕಾರಿಗಳಿಗೆ ಅವಾಚ್ಯ ಶಬ್ಧಗಳಿಂದ ಹರಿಹಾಯ್ದ ಘಟನೆ ಮೈಸೂರಿನ ಸಾತಗಳ್ಳಿ ಬಸ್ ನಿಲ್ದಾಣದಲ್ಲಿ ಶನಿವಾರ ನಡೆದಿದೆ.

ವಾಣಿಜ್ಯ ಸಂಕೀರ್ಣ ಗುತ್ತಿಗೆ ಪಡೆದಿದ್ದ ಬನ್ನಿಮಂಟಪ ಸಿ ಲೇಔಟ್ ನಿವಾಸಿ ಶಫೀಕ್ ಅಹಮದ್ ಪತ್ನಿ, ಸೈಯ್ಯದ್ ಮುನ್ನೀಸಾ ಎಂಬಾಕೆಯೇ ಅಧಿಕಾರಿಗಳಿಗೆ ಲಾಂಗ್ ತೋರಿಸಿ, ಬೆದರಿಕೆ ಹಾಕಿದವಳಾಗಿದ್ದು, ಅದೇ ವೇಳೆ ಶಫೀಕ್ ಅಹಮದ್ ಕೂಡ ▶ 9ನೇ ಪುಟಕ್ಕೆ

> “ ಸಾತಗಳ್ಳಿ ಬಸ್ ನಿಲ್ದಾಣದಲ್ಲಿ ಶನಿವಾರ ಸಾರಿಗೆ ಅಧಿಕಾರಿಗಳಿಗೆ ಮಾರಕಾಸ್ತ್ರ ತೋರಿಸಿ, ಬೆದರಿಸಿದ ಘಟನೆ ನಡೆದಾಗ ಸ್ಥಳದಲ್ಲಿ ಪೊಲೀಸರು ಇರಲಿಲ್ಲ. ಪೊಲೀಸರು ಮತ್ತು ಸಾರಿಗೆ ಸಿಬ್ಬಂದಿ ಒಂದೇ ಬಣ್ಣದ ಸಮವಸ್ತ್ರ ಧರಿಸುವುದರಿಂದ ವಿಡಿಯೋ ನೋಡುವ ಸಾರ್ವಜನಿಕರಿಗೆ ಗೊಂದಲ ಉಂಟಾಗಬಹುದು. ಈ ಸಂಬಂಧ ಉದಯಗಿರಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಆರೋಪಿಗಳು ತಲೆಮರೆಸಿಕೊಂಡಿದ್ದು, ಅವರ ಪತ್ತೆಗಾಗಿ ತಂಡವನ್ನು ರಚಿಸಲಾಗಿದೆ. ಸಾರಿಗೆ ಅಧಿಕಾರಿ ದೂರು ನೀಡಿದಾಗ ಕೊಲೆ ಪ್ರಯತ್ನದ ಅಂಶ ನಮೂದಿಸಿರಲಿಲ್ಲ. ಹೀಗಾಗಿ ಎಫ್‌ಐಆರ್‌ನಲ್ಲಿ ಐಪಿಸಿ ಸೆಕ್ಷನ್ 307 ನಮೂದಾಗಿಲ್ಲ. ಆದರೆ ಈಗ ಐಪಿಸಿ ಸೆಕ್ಷನ್ 307ನ್ನು (ಕೊಲೆ ಪ್ರಯತ್ನ) ಸೇರಿಸಿಕೊಳ್ಳಲಾಗಿದೆ.
> –ರಮೇಶ್, ಮೈಸೂರು ನಗರ ಪೊಲೀಸ್ ಆಯುಕ್ತ.



ಕಾಂಗ್ರೆಸ್ ರೌಡಿಗಳನ್ನು ಹುಟ್ಟು ಹಾಕುವ ಫ್ಯಾಕ್ಟರಿ!

ಕಾಂಗ್ರೆಸ್ ವಿರುದ್ಧ ಹರಿಹಾಯ್ದ ಸಚಿವ ಕೆ.ಸಿ.ನಾರಾಯಣಗೌಡ



ಮೈಸೂರು,ಡಿ.12(ಆರ್‌ಕೆಬಿ)–ರೌಡಿಗಳನ್ನು ಹುಟ್ಟು ಹಾಕಿದವರೇ ಕಾಂಗ್ರೆಸ್‌ನವರು. ರೌಡಿಗಳನ್ನು ಹುಟ್ಟು ಹಾಕುವ ಫ್ಯಾಕ್ಟರಿ ಎಲ್ಲಿದೆ. ಅದರ ಹಿನ್ನೆಲೆ ಏನು ಎಂಬುದು ಎಲ್ಲರಿಗೂ ಗೊತ್ತಿದೆ. ಗೂಂಡಾಗಿರಿ ಎಲ್ಲಿಂದ ಬಂದಿದೆ ಎಂಬುದು ನಿಮಗೆ ಗೊತ್ತಿಲ್ಲವೇ. ಕಾಂಗ್ರೆಸ್‌ನಲ್ಲೇ ಗೂಂಡಾಗಿಲ್ಲವೇ? ಅವರನ್ನಾಕೆ ಪಕ್ಷದಿಂದ ಓಡಿಸಲಿಲ್ಲ ಎಂದು ಕ್ರೀಡಾ ಸಚಿವ ಡಾ.ಕೆ.ಸಿ. ನಾರಾಯಣಗೌಡ ಜೆಡಿಎಸ್–ಕಾಂಗ್ರೆಸ್ ವಿರುದ್ಧ ಹರಿಹಾಯ್ದರು.

ಮೈಸೂರಿನಲ್ಲಿ ಸೋಮವಾರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಜೆಡಿಎಸ್–ಕಾಂಗ್ರೆಸ್‌ನವರು ಗೂಂಡಾಗಿರಿ ಮಾಡುವುದರಲ್ಲಿ ನಂಬರ್ ಒನ್. ನಮ್ಮ 17 ಜನರನ್ನು ಯಾರೂ ಹೊತ್ತುಕೊಂಡು ಹೋಗಿರಲಿಲ್ಲ. ಅದು ಸುಳ್ಳು. ನಮಗೆ ಭಯ ಇತ್ತು. ಅದಕ್ಕಾಗಿ ನಮಗೆ ಭದ್ರತೆ ಬೇಕಾಗಿತ್ತು. ಭದ್ರತೆ ತೆಗೆದುಕೊಂಡಿದ್ದೇವೆಯೇ ವಿನಃ ಯಾರ ಒತ್ತಡವೂ ಇಲ್ಲ. ಮೋದಿ ಕೆಲಸ ನೋಡಿ ನಾವು ಬಿಜೆಪಿ ಸೇರಿದ್ದೇವೆ. ಇಲ್ಲಿ ನಮಗೆಲ್ಲಾ ಒಳ್ಳೆಯ ಸ್ಥಾನಮಾನ ಕೊಟ್ಟಿದ್ದಾರೆ. ಕೆಲಸ ಮಾಡುವ ಒಳ್ಳೆಯ ಅವಕಾಶ ಸಿಕ್ಕಿದೆ. ನಮಗೆ ಸ್ವಾತಂತ್ರ್ಯವನ್ನೂ ಕೊಟ್ಟಿದ್ದಾರೆ. ಹಾಗಾಗಿ ನಾವ್ಯಾಕೆ ಬಿಜೆಪಿ ಬಿಟ್ಟು ಹೋಗುತ್ತೇವೆ. ಇದೆಲ್ಲಾ ಸುಳ್ಳು, ಸುಮ್ಮನೆ ನಮ್ಮ ನಡುವೆ ಗೊಂದಲ ಎಬ್ಬಿಸಲು ಜೆಡಿಎಸ್–ಕಾಂಗ್ರೆಸ್ ಪ್ರಯತ್ನಿಸುತ್ತಿವೆ ಎಂದು ಟೀಕಿಸಿದರು. ನಾವು ಒಂದು ಸಾರಿ ಮನೆಯನ್ನು ಬಿಟ್ಟು ಬಂದರೆ, ಮತ್ತೆ ಆ ಮನೆಗೆ ಹೋದರೆ ಗೌರವ ಇರುತ್ತದೆಯೇ? ಅದನ್ನು ನಾವು ಎಷ್ಟೂ ನಿರೀಕ್ಷೆ ಮಾಡಿಲ್ಲ. ಸುಮ್ಮನೆ ಜೆಡಿಎಸ್–ಕಾಂಗ್ರೆಸ್‌ನವರು ಹುಟ್ಟು ಹಾಕುತ್ತಿರುವ ಊಹಾಪೋಹ ಅದು ಎಂದು ನಾರಾಯಣಗೌಡ ಸ್ಪಷ್ಟಪಡಿಸಿದರು.

ಟೇಬಲ್ ಟೆನಿಸ್‌ನಲ್ಲಿ ಮೈಸೂರು ಬಾಲಕನ ಅಪ್ರತಿಮ ಸಾಧನೆ



ಮೈಸೂರು,ಡಿ.12– 12 ವರ್ಷದ ಬಾಲಕ ಶಶಾಂಕ್ ಕೇಶವ್‌ರಾವ್ ಓಎಂಟಿಟಿಎ (ಓಲಿಂಪಿಕ್ ಮರ್ಷಿಗ್ ಟೇಬಲ್ ಟೆನಿಸ್ ಕ್ಲಬ್), ಮೈಸೂರು ಟೇಬಲ್ ಟೆನಿಸ್‌ನಲ್ಲಿ 13 ವರ್ಷದೊಳಗಿನ ಬಾಲಕರ ವಿಭಾಗದಲ್ಲಿ ನೂತನ ಕರ್ನಾಟಕ ರಾಜ್ಯ ಚಾಂಪಿಯನ್ ಆಗಿ ಹೊರಹೊಮ್ಮಿದ್ದಾನೆ.

ಬೆಂಗಳೂರಿನ ಕೆನರಾ ಯೂನಿಯನ್‌ನಲ್ಲಿ ನಡೆದ ಕೆಟಿಟಿಎ–ಸಿವಿಲ್ ಶಾಸ್ತ್ರಿ ರಾಜ್ಯ ಚಾಂಪಿಯನ್‌ಶಿಪ್‌ನಲ್ಲಿ ರೋಚಕ ಫೈನಲ್ ಪಂದ್ಯದಲ್ಲಿ ಬೆಂಗಳೂರಿನ ಅರ್ಣವ್ ಎನ್ (ಭಾರತದಲ್ಲಿ ಅಗ್ರ 8ರ ರ‍್ಯಾಂಕ್ ಹೊಂದಿರುವವರು) ಅವರನ್ನು 4–1 ಸೆಟ್‌ಗಳಿಂದ ಸೋಲಿಸಿ, ಚಾಂಪಿಯನ್‌ಶಿಪ್ ಆದರು. ಕಳೆದ ಬಾರಿ, 2007ರಲ್ಲಿ ಮೈಸೂರಿನ ಈತನ ಕೋಚ್ ಅಕ್ಷಯ್ ಮಹಂತ ಈ ಪ್ರಶಸ್ತಿಯನ್ನು ಗೆದ್ದಿದ್ದು, ಅಂದಿನಿಂದ 15 ವರ್ಷಗಳ ಅಂತರದ ಬಳಿಕ ಮೈಸೂರು ಹುಡುಗ ಮತ್ತೊಮ್ಮೆ ಈ ಪ್ರತಿಷ್ಠಿತ ಸಾಧನೆ ಮೆರೆದಿದ್ದಾರೆ.

ಈಗ ಅವರು ಮುಂಬರುವ ವಲಯ ಮತ್ತು ರಾಷ್ಟ್ರೀಯ ಚಾಂಪಿಯನ್‌ಶಿಪ್‌ಗಳಲ್ಲಿ ಕರ್ನಾಟಕ ತಂಡಕ್ಕಾಗಿ ಆಡಲಿದ್ದಾರೆ. ಶಶಾಂಕ್ ಅವರು ಮೈಸೂರಿನ ವಿವೇಕಾನಂದನಗರದ ಆದಿತ್ಯ ಮಕ್ಕಳ ಚಿಕಿತ್ಸಾಲಯದ ಮಕ್ಕಳ ತಜ್ಞರಾದ ಡಾ.ಸುಮಾರಾವ್ ಮತ್ತು ಡಾ.ಪ್ರಶಾಂತ್‌ರಾವ್ ಅವರ ದ್ವಿತೀಯ ಪುತ್ರ. ಕೌಟಿಲ್ಯ ವಿದ್ಯಾಲಯದಲ್ಲಿ 7ನೇ ತರಗತಿ ಓದುತ್ತಿದ್ದಾನೆ. ಕಳೆದ 4 ವರ್ಷಗಳಿಂದ ಮುಖ್ಯ ತರಬೇತುದಾರ ಅಕ್ಷಯ್ ಮಹಂತ ಅವರಲ್ಲಿ ತರಬೇತಿ ಪಡೆಯುತ್ತಿದ್ದಾನೆ. ಅವರು ಸಹ ಕಳೆದ ದಶಕದಲ್ಲಿ ಬಹು ರಾಜ್ಯ ಮಟ್ಟದ ಚಾಂಪಿಯನ್ ಮತ್ತು ರಾಷ್ಟ್ರೀಯ ಮಟ್ಟದ ಪದಕ ವಿಜೇತರಾಗಿದ್ದಾರೆ.



ಮೈಸೂರಿನ ದೇವರಾಜ ಮೊಹಲ್ಲಾ, ದೊಡ್ಡವಕ್ಕಲಗೇರಿ, ಕೆ.ಆರ್.ಆಸ್ಪತ್ರೆ ರಸ್ತೆಯಲ್ಲಿರುವ ಮನೆ ಮಂಚಮ್ಮ ದೇವಸ್ಥಾನದ ಜೀರ್ಣೋದ್ಧಾರ ಕಾಮಗಾರಿಗೆ ಶಾಸಕ ಎಲ್.ನಾಗೇಂದ್ರ ಭೂಮಿಪೂಜೆ ನೆರವೇರಿಸಿದರು. ಪಾಲಿಕೆ ಸದಸ್ಯ ಎಂ.ಡಿ.ನಾಗರಾಜ್, ಕೆಆರ್‌ಯುಡಿಎಲ್ ಇಂಜಿನಿಯರ್ ಅರ್ಚನ, ದೇವಸ್ಥಾನದ ಟ್ರಸ್ಟ್ ಅಧ್ಯಕ್ಷರೂ ಆದ ಮಾಜಿ ಮೇಯರ್ ಬಿ.ಕೆ.ಪ್ರಕಾಶ್, ಗಂಗಣ್ಣ, ರಮೇಶ್, ವೆಂಕಟೇಶ, ಪುಟ್ಟಣ್ಣ, ಮಂಜಣ್ಣ, ಸೋಮಣ್ಣ, ಮಾದೇಶ್, ಸುರೇಶ್, ಶ್ರೀಕಂಠ, ರಾಮು, ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ನಿರ್ದೇಶಕರಾದ ಹರೀಶ್‌ಕುಮಾರ್, ಎಸ್.ಅರವಿಂದ, ಪಡುವಾರಹಳ್ಳಿ ಎಂ.ರಾಮಕೃಷ್ಣ, ಶಾಂತಿ, ಶಿವಕುಮಾರಗೌಡ, ರವಿಕಿರಣ್, ಕಾಂತ, ರವಿ, ಬಾಬು, ಚೆಲುವರಾಜು, ಹೆಚ್.ನವೀನ, ಯಶವಂತ, ವಿಜಿ, ಸುರೇಂದ್ರ, ಶೇಖರ್, ಮಂಜುಗೌಡ, ಮತ್ತಿತರರು ಹಾಜರಿದ್ದರು.

ಅಂಚೆ ಇಲಾಖೆ ಪಿಂಚಣಿ ಅದಾಲತ್‌ನಲ್ಲಿ 20 ದೂರು

ಮೈಸೂರು,ಡಿ.12(ಆರ್‌ಕೆಬಿ)–ಅಂಚೆ ಇಲಾಖೆ ವತಿಯಿಂದ ಸೋಮವಾರ ಮೈಸೂರಿನ ಯಾದವಗಿರಿ ಹಿರಿಯ ಅಂಚೆ ಅಧೀಕ್ಷಕರ ಕಚೇರಿಯಲ್ಲಿ ಏರ್ಪಡಿಸಿದ್ದ ಪಿಂಚಣಿ ಅದಾಲತ್‌ನಲ್ಲಿ ಸುಮಾರು 20 ಅರ್ಜಿಗಳು ಸಲ್ಲಿಕೆಯಾಗಿದ್ದವು. ಈ ಪೈಕಿ ಪಿಂಚಣಿ ವಿಳಂಬವಾಗುತ್ತಿರುವುವು ಹಾಗೂ ಹಿರಿಯ ನಾಗರಿಕರಿಗಾಗಿ ಪ್ರತ್ಯೇಕ ಕೌಂಟರ್ ತೆರೆಯಬೇಕೆಂಬ ಬಗ್ಗೆ ಪ್ರಸ್ತಾಪವಾಗಿದ್ದವು. ಈ ಎಲ್ಲ ದೂರುಗಳನ್ನು ಆಲಿಸಿದ ಹಿರಿಯ ಅಂಚೆ ಅಧೀಕ್ಷಕರು, ಸಮಸ್ಯೆ ಸರಿಪಡಿಸುವ ಭರವಸೆ ನೀಡಿದರು. ಸರ್ವರ್ ಕಾರಣದಿಂದ ಪಿಂಚಣಿ ವಿಳಂಬವಾಗುತ್ತಿದ್ದುದನ್ನು ಸರಿಪಡಿಸಲಾಗಿದೆ. ಹಿರಿಯ ನಾಗರಿಕರಿಗೆ ಪ್ರತ್ಯೇಕ ಕೌಂಟರ್ ತೆರೆಯುವ ಬೇಡಿಕೆಗೆ ಸಂಬಂಧಿಸಿದಂತೆ ಅದರ ಸಾಧಕ, ಬಾಧಕಗಳನ್ನು ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ಹಿರಿಯ ಅಂಚೆ ಅಧೀಕ್ಷಕ ಎ.ಕೆ.ನಾಯಕ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ತಾತ್ಕಾಲಿಕ ಅತಿಥಿ ಉಪನ್ಯಾಸಕರ ಹುದ್ದೆಗೆ ಅರ್ಜಿ ಆಹ್ವಾನ

ಮೈಸೂರು,ಡಿ.12–ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು (ಕಾವಾ), ಸಂಸ್ಥೆಯ 2022–23ನೇ ಶೈಕ್ಷಣಿಕ ಸಾಲಿಗೆ ಸಂಬಂಧಪಟ್ಟ ಸಂಪನ್ಮೂಲ ವ್ಯಕ್ತಿಗಳಾಗಿ ಬೋಧನೆ ಮಾಡಲು ಇಚ್ಛಿಸುವ ಅಭ್ಯರ್ಥಿಗಳು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿಗದಿಪಡಿಸಿದ ಸಂಚಿತ ಸಂಭಾವನೆ, ಗೌರವಧನ ಆಧಾರದ ಮೇಲೆ ಕಾರ್ಯನಿರ್ವಹಿಸಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಡಿ.17 ಅರ್ಜಿ ಸ್ವೀಕರಿಸಲು ಕೊನೇ ದಿನ. ಡಿ.19ರಂದು ಬೆಳಗ್ಗೆ 11 ಗಂಟೆಗೆ ಸಂದರ್ಶನವನ್ನು ಸಂಸ್ಥೆಯಲ್ಲಿ ನಡೆಸಲಾಗುವುದು. ಆಸಕ್ತ ಅಭ್ಯರ್ಥಿಗಳು ಕರ್ನಾಟಕ ಸರ್ಕಾರದ ಅಂತರ್ಜಾಲ ವಿಳಾಸ www.mysore.nic.in ಮತ್ತು www.cavamysore.karnataka.gov.in ಅಂತರ್ಜಾಲದ ಮೂಲಕ ಮಾಹಿತಿಯನ್ನು ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಕಾರ್ಯಾಲಯದ ದೂ.ಸಂಖ್ಯೆ: 0821–2438931 ಅನ್ನು ಸಂಪರ್ಕಿಸಬಹುದು.

ಒಂದನೇ ಪುಟದಿಂದ

ಪ್ರತ್ಯೇಕ ನಿಗಾ ಘಟಕ ಸ್ಥಾಪನೆ

ಏಳುನೂರು ಎಕರೆ ಭೂಮಿಯನ್ನು ಅರಣ್ಯ ಪ್ರದೇಶದ ವ್ಯಾಪ್ತಿಯಿಂದ ಕೈ ಬಿಡುವ ಸಂಬಂಧ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವುದಾಗಿ ಅರಣ್ಯ ಇಲಾಖೆಯ ಅಧಿಕಾರಿಗಳು ಒಪ್ಪಿದ್ದಾರೆ. ಇದೇ ರೀತಿ ಮುನ್ನೂರಾ ಎಪ್ಪತ್ತು ಎಕರೆ ಭೂಮಿಯನ್ನು ಅರಣ್ಯ ಪ್ರದೇಶದ ವ್ಯಾಪ್ತಿಯಿಂದ ಕೈ ಬಿಡುವಂತೆ ರಾಜ್ಯ ಸರ್ಕಾರ ಕೇಂದ್ರಕ್ಕೆ ಪ್ರಸ್ತಾವನೆ ಸಲ್ಲಿಸಲಿದೆ ಎಂದು ವಿವರ ನೀಡಿದರು. ಸದರಿ ಭೂಮಿಗಾಗಿ ಜೇನುಕುರುಬರು ಮತ್ತು ಹಾಡಿಯ ಜನ ನಿರಂತರವಾಗಿ ಹೋರಾಟ ನಡೆಸುತ್ತಾ ಬಂದಿದ್ದು ಇತ್ತೀಚೆಗೆ ಒಬ್ಬಾತನ ಕೊಲೆಯೂ ಆಗಿದೆ ಮತ್ತು ಈ ಸಂಬಂಧ ಸಿಓಡಿ ತನಿಖೆ ನಡೆಸಲಾಗುತ್ತಿದೆ ಎಂದು ನುಡಿದರು.

ಆಸ್ತಿ ನೋಂದಣಿ ಪ್ರಕ್ರಿಯೆಯನ್ನು ಒಂದು ವಾರದೊಳಗೆ ಪೂರ್ಣಗೊಳಿಸುವ ಕುರಿತು ಕಾನೂನಿಗೆ ತಿದ್ದುಪಡಿ ತರಲಾಗಿದ್ದು ಮುಂದಿನ ವಿಧಾನಮಂಡಲ ಅಧಿವೇಶನದಲ್ಲಿ ಮಂಡಿಸುವುದಾಗಿ ಇದೇ ಸಂದರ್ಭದಲ್ಲಿ ಅವರು ಹೇಳಿದರು.

ಲಂಬಾಣಿ ತಾಂಡ ಕಂದಾಯ ಗ್ರಾಮ: ಲಂಬಾಣಿ ತಾಂಡಾಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಲು ಸರ್ಕಾರ ನಿರ್ಧರಿಸಿದ್ದು,ಈ ಹಿನ್ನೆಲೆಯಲ್ಲಿ ಅವರಿಗೆ ತಾವಿರುವ ಜಾಗದ ಹಕ್ಕನ್ನು ನೀಡುವ ಪ್ರಕ್ರಿಯೆ ನಡೆಯುತ್ತಿದೆ. ಇದಕ್ಕೆ ಪೂರಕವಾಗಿ ಸದ್ಯದಲ್ಲೇ ಯಾದಗಿರಿಯಲ್ಲಿ ಲಂಬಾಣಿ ಸಮಾವೇಶ ನಡೆಯಲಿದ್ದು,ಈ ಸಮಾವೇಶದಲ್ಲಿ ಭಾಗವಹಿಸುವಂತೆ ಪ್ರಧಾನಮಂತ್ರಿ ನರೇಂದ್ರಮೋದಿ ಅವರನ್ನು ಕೋರಲಾಗಿದೆ ಎಂದರು.

'2ಎ' ಪಟ್ಟಿಗೆ ಸೇರಿಸಲು ಒತ್ತಾಯಿಸಿ

ಕ್ಷತ್ರಿಯ ಮರಾಠ ಸಮಾಜ ಪ್ರತಿಭಟನೆ



ಮೈಸೂರು,ಡಿ.12(ಪಿಎಂ)–ಕ್ಷತ್ರಿಯ ಮರಾಠ ಸಮುದಾಯವನ್ನು ಪ್ರವರ್ಗ '3ಬಿ'ಯಿಂದ '2ಎ'ಗೆ ಸೇರ್ಪಡೆಗೊಳಿಸಬೇಕೆಂದು ಒತ್ತಾಯಿಸಿ ಕರ್ನಾಟಕ ಕ್ಷತ್ರಿಯ ಮರಾಠ ಪರಿಷತ್ ಜಿಲ್ಲಾ ಘಟಕದ ವತಿಯಿಂದ ಸೋಮವಾರ ಪ್ರತಿಭಟನಾ ಮೆರವಣಿಗೆ ನಡೆಸಲಾಯಿತು.

ಮೈಸೂರಿನ ನ್ಯಾಯಾಲಯ ಎದುರಿನ ಗಾಂಧಿ ಪುತ್ಥಳಿ ಬಳಿಯಿಂದ ಜಿಲ್ಲಾಧಿಕಾರಿ ಕಚೇರಿವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಲಾಯಿತು. ಕೃಷ್ಣರಾಜಬುಲೇವಾರ್ಡ್ ರಸ್ತೆ ಮೂಲಕ ಜಿಲ್ಲಾಧಿಕಾರಿ ಕಚೇರಿ ಆವರಣ ತಲುಪಿ, ಪ್ರತಿಭಟನೆ ನಡೆಸಲಾಯಿತು. ನಮ್ಮಲ್ಲಿ ಸುಮಾರು 33 ಪಂಗಡಗಳಿದ್ದು, ಈ ಪೈಕಿ 27 ಪಂಗಡಗಳನ್ನು ಈಗಾಗಲೇ ಪ್ರವರ್ಗ '2ಎ'ಗೆ ಸೇರ್ಪಡೆ ಮಾಡಲಾಗಿದೆ. ಇದರಲ್ಲಿ ನಮ್ಮ ಕ್ಷತ್ರಿಯ ಮರಾಠ ಸಮುದಾಯ ಸೇರಿದಂತೆ ಕೆಲ ಪಂಗಡಗಳನ್ನು ಕೈಬಿಡಲಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ನಮ್ಮ ಜನಾಂಗವು ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಹಾಗೂ ರಾಜಕೀಯವಾಗಿ ಹಿಂದುಳಿದಿದ್ದು, 2ಎಗೆ ಸೇರಿಸಿ ಮುಖ್ಯವಾಹಿನಿ ಬರಲು ಅನುವು ಮಾಡಿಕೊಡಬೇಕು. ನಮ್ಮ ಜನಾಂಗದ ಜ್ವಲಂತ ಸಮಸ್ಯೆಗಳನ್ನು ಅರಿತು 2ಎಗೆ ಸೇರಿಸಬೇಕೆಂದು ಒತ್ತಾಯಿಸಿದರು. ಬಳಿಕ ಡಿಸಿ ಕಚೇರಿಗೆ ಮನವಿ ಸಲ್ಲಿಸಿ ಪ್ರತಿಭಟನೆ ಕೈಬಿಡಲಾಯಿತು. ಪರಿಷತ್‌ನ ಜಿಲ್ಲಾಧ್ಯಕ್ಷ ಕೇಶವನಾಥ್‌ರಾವ್ ಜಾಧವ್, ಪ್ರಧಾನ ಕಾರ್ಯದರ್ಶಿ ಜಿ.ಜ್ಞಾನಪ್ರಕಾಶ್ ಪವಾರ್, ಸಂಘಟನಾ ಕಾರ್ಯದರ್ಶಿ ದಿವಾಕರ್ ಕೋಲೆ, ಮುಖಂಡರಾದ ತುಕಾರಾಂ, ಮೀರಾ ಬಾಯಿ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.



ಕಳೆದ ಡಿ.9, 10ರಂದು ಉಡುಪಿಯ ಅಜ್ಜರಕಾಡು ಮಹಾತ್ಮಗಾಂಧಿ ಸ್ಟೇಡಿಯಂನಲ್ಲಿ ನಡೆದ ಮೊದಲ ದಕ್ಷಿಣ ಭಾರತ–ಶ್ರೀಲಂಕಾ ಮಾಸ್ಟರ್ಸ್ ಅಥ್ಲೆಟಿಕ್ಸ್ ಓಪನ್ ಚಾಂಪಿಯನ್‌ಶಿಪ್‌ನಲ್ಲಿ 5 ಸಾವಿರ, 3 ಸಾವಿರ ರೇಸ್ ವಾಕ್‌ನಲ್ಲಿ ಸುಬ್ಬಶೆಟ್ಟಿ (70 ವರ್ಷದ ವಿಭಾಗದಲ್ಲಿ–ಕಂಚು), 3 ಸಾವಿರ ರೇಸ್ ವಾಕ್‌ನಲ್ಲಿ ಡಾ.ಕೆ.ಎಸ್.ರಘುನಂದನ್ (35 ವಯೋಮಿತಿ ವಿಭಾಗ) ಹಾಗೂ ಪಿ.ಜಿ.ಚಂದ್ರಶೇಖರ್ 3 ಸಾವಿರ ರೇಸ್ ವಾಕ್‌ನಲ್ಲಿ (75 ವರ್ಷ ವಯೋಮಿತಿ) ಚಿನ್ನದ ಪದಕ ಪಡೆದಿದ್ದಾರೆ.

ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

ಮೈಸೂರು,ಡಿ.12–ಕರ್ನಾಟಕ ವೀರಶೈವ ಲಿಂಗಾಯಿತ ಅಭಿವೃದ್ಧಿ ನಿಗಮ ನಿಯಮಿತದಿಂದ ಬಸವ ಬೆಳಗು, ವಿದೇಶ ವಿದ್ಯಾವಿಕಾಸ, ಜೀವಜಲ, ಸ್ವಾವಲಂಬಿ ಸಾರಥಿ ಯೋಜನೆಗಳಿಗೆ ಉತ್ತೇಜನ ಮತ್ತು ಕಾಯಕಕಿರಣ ಯೋಜನೆಗಳಿಗೆ ಸಾಲ ಹಾಗೂ ಸಹಾಯಧನ ಸೌಲಭ್ಯ ಪಡೆಯಲು ಇಚ್ಛಿಸುವ ವೀರಶೈವ ಲಿಂಗಾಯತ ಸಮುದಾಯದ ಅರ್ಹ ಫಲಾಪೇಕ್ಷಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದ್ದು, ಡಿ.15ರವರೆಗೆ ವಿಸ್ತರಿಸಿದೆ. ಅರ್ಹ ಫಲಾಪೇಕ್ಷಿ ಗಳಿಗೆ ಹತ್ತಿರದ ಗ್ರಾಮ ಒನ್, ಬೆಂಗಳೂರು ಒನ್, ಕರ್ನಾಟಕ ಒನ್ ನಾಗರಿಕ ಸೇವಾ ಕೇಂದ್ರಗಳಲ್ಲಿ ದಾಖಲೆಗಳೊಂದಿಗೆ ಸೇವಾ ಸಿಂಧು ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸಲು https://kvldcl.karnataka.gov.in, ಮಾಹಿತಿ ಪಡೆಯಬಹುದು. ದೂ.ಸಂ:080–22865522, 0821–2341194.

ಅರೆಸೇನಾ ಪಡೆ ನಿವೃತ್ತ ಯೋಧರ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ

ನಾಳೆ ಬೆಂಗಳೂರಲ್ಲಿ ಸಾಂಕೇತಿಕ ಧರಣಿ

ಮೈಸೂರು, ಡಿ.12(ಎಂಟಿವೈ)– ಕೇಂದ್ರೀಯ ಅರೆಸೇನಾ ಪಡೆಗಳ ಮಾಜಿ ಯೋಧರ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ, ನಾಳೆ (ಮಂಗಳವಾರ) ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಹುತಾತ್ಮ ಯೋಧರಿಗೆ ಶ್ರದ್ಧಾಂಜಲಿ ಸಭೆ ನಡೆಸಿ ಸಾಂಕೇತಿಕವಾಗಿ ಧರಣಿ ನಡೆಸಲಾಗುತ್ತದೆ ಎಂದು ಕೇಂದ್ರೀಯ ಅರೆಸೇನಾ ಪಡೆಗಳ ಮಾಜಿ ಯೋಧರ ಕ್ಷೇಮಾಭಿವೃದ್ಧಿ ಸಂಘದ ಜಿಲ್ಲಾಧ್ಯಕ್ಷ ಸಿ.ವಿ.ಯಶೋಧರ ಮೂರ್ತಿ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೇಂದ್ರೀಯ ಅರೆಸೇನಾ ಪಡೆಗಳ ಯೋಧರು ಸೈನ್ಯದಲ್ಲಿ ಮುಂಚೂಣಿ ಯೋಧರಾಗಿ ಸೇವೆ ಸಲ್ಲಿಸುವವರೇ ಆಗಿದ್ದಾರೆ. ಅರೆಸೇನಾ ಪಡೆಗಳಾದ ಗಡಿ ಭದ್ರತಾಪಡೆ, ಬಿಎಸ್‌ಎಫ್, ಸಿಆರ್‌ಪಿಎಫ್, ಸಿಐಎಸ್‌ಎಫ್, ಇಂಡೋ–ಟಿಬೆಟಿಯನ್ ಭದ್ರತಾ ಪಡೆ, ಸಶಸ್ತ್ರ ಸೀಮಾ ಪಡೆ, ಅಸ್ಸಾಂ ರೈಫಲ್ಸ್‌ನಲ್ಲಿ ಸೇವೆ ಸಲ್ಲಿಸುತ್ತಾರೆ. ಭಾರತೀಯ ಸೇನಾಪಡೆಯಂತೆ ಅರೆಸೇನಾ ಪಡೆಯೂ ಸೇವೆ ಸಲ್ಲಿಸುತ್ತಿದ್ದರೂ, ನಿವೃತ್ತಿಯಾದ ನಂತರ ಸೌಲಭ್ಯದಿಂದ ವಂಚಿತರಾಗುತ್ತಿದ್ದೇವೆ. ಸೈನಿಕರು ನಿವೃತ್ತಿಯಾದಾಗ ಸಿಗುವಂತೆ ಅರೆ ಸೈನಿಕರಿಗೆ ಸೌಲಭ್ಯ ಸಿಗುತ್ತಿಲ್ಲ ಎಂದು ವಿಷಾದಿಸಿದರು.

ಸರ್ಕಾರ ಕೂಡಲೇ ಅರೆಸೇನಾ ಪಡೆಗಳ ಮಾಜಿ ಯೋಧರಿಗೂ ನೇಮಕಾತಿಯಲ್ಲಿ ಮೀಸಲಾತಿ ನೀಡಬೇಕು. ಅಧಿಕಾರಿಗಳು ಹುದ್ದೆಗಳಿಗೂ ನಿವೃತ್ತರಿಗೆ ಅವಕಾಶ ನೀಡಬೇಕು. ವಿವಿಧ ಸೌಲಭ್ಯ ಒದಗಿಸುವ ನಿಟ್ಟಿನಲ್ಲಿ ಅರೆ ಸೈನಿಕ ಕಲ್ಯಾಣ ಮಂಡಳಿ ರಚಿಸಬೇಕು. ಹುತಾತ್ಮ ಯೋಧರ ಕುಟುಂಬದ ಆಶ್ರಿತರಿಗೆ ಸೌಲಭ್ಯ ನೀಡಬೇಕು. 2004ರ ನಂತರ ನೇಮಕವಾದ ಯೋಧರಿಗೆ ಹಳೇ ಪಿಂಚಣಿ ಯೋಜನೆ ಜಾರಿಗೊಳಿಸಬೇಕು. ನಿವೃತ್ತ ಅರೆ ಸೈನಿಕರಿಗೆ ಭೂಮಿ ಮಂಜೂರು ಮಾಡಬೇಕು, ಮನೆ ನಿರ್ಮಾಣಕ್ಕೆ 10 ಲಕ್ಷ ರೂ. ಸಹಾಯಧನ ನೀಡಬೇಕು ಎಂದು ಆಗ್ರಹಿಸಿದರು.

ಡಿ.13ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಹುತಾತ್ಮರಾದವರಿಗೆ ಶ್ರದ್ಧಾಂಜಲಿ ಸಲ್ಲಿಸಿ, 1 ದಿನ ಸಾಂಕೇತಿಕ ಧರಣಿ ನಡೆಸಿ ಅರೆಸೇನಾ ಪಡೆಗಳ ಮಾಜಿ ಯೋಧರ ಬೇಡಿಕೆ ಈಡೇರಿಕೆ ಮನವಿ ಸಲ್ಲಿಸಲಾಗುವುದು. ಅಲ್ಲದೆ, ಮುಂದಿನ ದಿನಗಳಲ್ಲಿ ಹೋರಾಟ ಮುಂದುವರೆಸುತ್ತೇವೆ ಎಂದರು. ಗೋಷ್ಠಿಯಲ್ಲಿ ಸಂಘದ ಪದಾಧಿಕಾರಿಗಳಾದ ಅಬ್ದುಲ್ ಲತೀಶ್, ಲೋಕೇಶ್, ಇನ್ನಿತರರು ಉಪಸ್ಥಿತರಿದ್ದರು.

ಆದ್ಯವೀರ್ ಒಡೆಯರ್ ಹುಟ್ಟುಹಬ್ಬ ಆಚರಣೆ



ಮೈಸೂರು,ಡಿ.12(ಎಂಟಿವೈ)–ಮೈಸೂರು ಅರಮನೆಯಲ್ಲಿ ಸೋಮವಾರ ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಹಾಗೂ ತ್ರಿಷಿಕಾ ಕುಮಾರಿ ಒಡೆಯರ್ ಅವರ ಪುತ್ರ ಆದ್ಯವೀರ್ ಒಡೆಯರ್ ಹುಟ್ಟುಹಬ್ಬ ಕಾರ್ಯಕ್ರಮ ರಾಜಮನೆತನದವರ ಹಿರಿಯರ ಉಪಸ್ಥಿತಿಯಲ್ಲಿ ಶಾಸ್ತ್ರೋಕ್ತವಾಗಿ ನೆರವೇರಿತು.

ಅರಮನೆಯ ಕನ್ನಡಿ ತೊಟ್ಟಿಯಲ್ಲಿ ರಾಜವಂಶಸ್ಥರಾದ ಪ್ರಮೋದಾದೇವಿ ಒಡೆಯರ್ ಅವರ ಸಮ್ಮುಖದಲ್ಲಿ ಆದ್ಯವೀರ್ ಒಡೆಯರ್ ಅವರ 5ನೇ ವರ್ಷದ ಹುಟ್ಟುಹಬ್ಬ ಆಚರಿಸಲಾಯಿತು. ರಾಜವಂಶಸ್ಥರ ಸಂಪ್ರದಾಯದಂತೆ ವಿವಿಧ ಪೂಜಾ ಕಾರ್ಯ ಜರುಗಿದವು. ಆಯುಷ್ಯ ಹೋಮ ನೆರವೇರಿಸಲಾಯಿತು. ಬಳಿಕ ಪರಕಾಲ ಮಠ, ಚಾಮುಂಡಿಬೆಟ್ಟ, ನಂಜನಗೂಡು, ಉತ್ತನಹಳ್ಳಿಯ ತ್ರಿಪುರ ಸುಂದರಿ ಅಮ್ಮನ ದೇವಾಲಯ, ಅರಮನೆಯ ಆವರಣದಲ್ಲಿರುವ ಎಲ್ಲಾ ದೇವಾಲಯಗಳಿಂದ ಪ್ರಸಾದ ತಂದು ಆದ್ಯವೀರ್ ಒಡೆಯರ್ ಅವರಿಗೆ ನೀಡಿ, ಶುಭ ಹಾರೈಸಿದರು.

ರೈತ ವಿರೋಧಿ ಧೋರಣೆ ಖಂಡಿಸಿ ಡಿ.17ರಂದು ರೈತರ ಪ್ರತಿಭಟನೆ

ಮೈಸೂರು,ಡಿ.12(ಎಂಟಿವೈ)– ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ರೈತ ವಿರೋಧಿ ಧೋರಣೆ ಖಂಡಿಸಿ ಡಿಸೆಂಬರ್ 17ರಂದು ಮೈಸೂರಲ್ಲಿ ಬೃಹತ್ ಪ್ರತಿಭಟನಾ ಮೆರವಣಿಗೆ ಹಮ್ಮಿಕೊಳ್ಳಲಾಗಿದೆ ಎಂದು ಸಾಮೂಹಿಕ ನಾಯಕತ್ವದ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಮುಖಂಡ ವಿದ್ಯಾಸಾಗರ್ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ರೈತರನ್ನು ಕಡೆಗಣಿಸಿವೆ. ರೈತರ ಸಮಸ್ಯೆಗಳನ್ನು ಬಗೆಹರಿಸಲು ವಿಫಲವಾಗಿವೆ. ಸುಳ್ಳು ಭರವಸೆ ನೀಡುವ ಮೂಲಕ ರೈತರನ್ನು ದಿಕ್ಕು ತಪ್ಪಿಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಸರ್ಕಾರದ ರೈತ ವಿರೋಧಿ ನೀತಿ ಖಂಡಿಸಿ ಡಿ.17ರಂದು ಬೆಳಗ್ಗೆ 11 ಗಂಟೆಗೆ ಗನ್‌ಹೌಸ್ ವೃತ್ತದಿಂದ ಪ್ರತಿಭಟನಾ ಮೆರವಣಿಗೆ ಆರಂಭವಾಗಲಿದೆ. ನ್ಯೂ ಸಯ್ಯಾಜಿರಾವ್ ರಸ್ತೆ, ಸಂತೇಪೇಟೆ ರಸ್ತೆ, ಡಿ.ದೇವರಾಜ ಅರಸ್ ರಸ್ತೆ ಮೂಲಕ ಜಿಲ್ಲಾಧಿಕಾರಿ ಕಚೇರಿ ತಲುಪಿ ಧರಣಿ ನಡೆಸಲಾಗುತ್ತದೆ ಎಂದರು.

ಸರ್ಕಾರ ಕೂಡಲೇ 1 ಟನ್ ಕಬ್ಬಿಗೆ 4,500 ರೂ., ದರ ನಿಗದಿ ಮಾಡಬೇಕು. ಭತ್ತದ ಕಟಾವು ಆರಂಭವಾಗಿದ್ದು, ಖರೀದಿ ಕೇಂದ್ರ ತೆರೆಯಬೇಕು. ರೈತರಿಗೆ ಪ್ರತಿ ಲೀಟರ್ ಹಾಲಿಗೆ 45 ರೂ. ನೀಡಬೇಕು. ಕಾಡು ಪ್ರಾಣಿಗಳ ದಾಳಿಯಿಂದ ವ್ಯಕ್ತಿ ಸತ್ತರೆ 25 ಲಕ್ಷ ರೂ., ಆಡು, ಕುರಿ ಸತ್ತರೆ 20 ಸಾವಿರ ರೂ., ಹಸು, ಎಮ್ಮೆ, ಎತ್ತು, ಕೋಣ ಸತ್ತರೆ 1 ಲಕ್ಷ ರೂ. ಪರಿಹಾರ ನೀಡಬೇಕು. ಜಲ್ ಜೀವನ್ ಮಿಷನ್ ಅಡಿಯಲ್ಲಿ ಮನೆಗಳಿಗೆ ಕುಡಿಯುವ ನೀರಿನ ಸಂಪರ್ಕಕ್ಕೆ ಮೀಟರ್ ಅಳವಡಿಸುವುದನ್ನು ಕೈಬಿಡಬೇಕು. ರೈತರ ಪಂಪ್‌ಸೆಟ್‌ಗಳಿಗೆ ಮೀಟರ್ ಅಳವಡಿಸಬಾರದು ಎಂದು ಒತ್ತಾಯಿಸಿ ಹಕ್ಕೋತ್ತಾಯ ಪತ್ರ ನೀಡಲಾಗುತ್ತದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಸಾಮೂಹಿಕ ನಾಯಕತ್ವದ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಮುಖಂಡರಾದ ಮಂಜು ಕಿರಣ್, ಇಮ್ಮಾವು ರಘು, ಕಳ್ಳಿಪುರ ಮಹದೇವಸ್ವಾಮಿ, ಕೃಷ್ಣೇಗೌಡ, ಇದ್ದರು.



ಹೊಳೆನರಸೀಪುರ ತಾಲೂಕಿನ ಶ್ರವಣೂರು ಗ್ರಾಮದಲ್ಲಿರುವ ಕ್ರಾಂತಿ ವೀರ ಸಂಗೊಳ್ಳಿ ರಾಯಣ್ಣ ಪ್ರತಿಮೆಗೆ ಕರ್ನಾಟಕ ಪ್ರದೇಶ ಕುರುಬರ ಸಂಘದ ರಾಜ್ಯಾಧ್ಯಕ್ಷ ಬಿ.ಸುಬ್ರಹ್ಮಣ್ಯ ಮಾಲಾರ್ಪಣೆ ಮಾಡಿದರು. ಈ ವೇಳೆ ಅರಕಲಗೂಡು ಕಾಂಗ್ರೆಸ್ ಮುಖಂಡ ಶೇಷೇಗೌಡ, ಕೆ.ಆರ್.ಪೇಟೆ ತಾಲೂಕು ಕುರುಬರ ಸಂಘದ ಅಧ್ಯಕ್ಷ ಪುರುಷೋತ್ತಮ್, ಖಜಾಂಚಿ ರುಕ್ಮಾಂಗದ, ಕುರುಬರ ಸಂಘದ ಮಾಜಿ ನಿರ್ದೇಶಕ ಅನಿಲ್‌ಕುಮಾರ್, ಚಂದ್ರೇಗೌಡ, ಮಹೇಶ್, ತಾತನಹಳ್ಳಿ ಗ್ರಾಪಂ ಅಧ್ಯಕ್ಷ ಹೇಮಂತ್, ಅಭಿಷೇಕ್, ಮಹೇಶ್ ಗೌಡ, ಕಾಂಜೀಗೌಡ ಸೇರಿದಂತೆ ಮುಖಂಡರು, ಗ್ರಾಮಸ್ಥರು ಇದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

13.12.2022 ಮಂಗಳವಾರ, ಮಳೆ ನಕ್ಷತ್ರ: ಜ್ಯೇಷ್ಠ, 03.12.2022 ರಿಂದ 15.12.2022
ಶ್ರೀ ಶುಭಕೃತ ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಮಾರ್ಗಶಿರ ಮಾಸ,
ಕೃಷ್ಣ ಪಕ್ಷ, ತಿಥಿ: ಪಂಚಮಿ, ನಕ್ಷತ್ರ : ಆಶ್ಲೇಷಾ, ರಾಹುಕಾಲ: ಮಧ್ಯಾಹ್ನ 3 ರಿಂದ 4.30ರವರೆಗೆ

■ **ಶ್ರೀ ಪಂಚಮುಖಿ ಆಂಜನೇಯಸ್ವಾಮಿ ದೇವಸ್ಥಾನ :** 22ನೇ ವರ್ಷದ ಹನುಮ ಜಯಂತಿ ಮಹೋತ್ಸವ, ಬೆಳಗ್ಗೆ 9ಕ್ಕೆ ಆಶ್ಲೇಷಾ ಬಲಿದಾನ, ಆಶ್ಲೇಷಾ ಬಲಿಹೋಮ, ನಿತ್ಯಾರಾಧನೆ, ಹೂವಿನ ಅಲಂಕಾರ, ವಿಶೇಷ ಪೂಜೆ, ಮಹಾಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಮಧ್ಯಾಹ್ನ 1ಕ್ಕೆ ಅನ್ನಸಂತರ್ಪಣೆ, ಸ್ಥಳ: ದೇವಸ್ಥಾನದ ಆವರಣ, ಇರ್ವಿನ್ ರಸ್ತೆ, ಬೆಳಗ್ಗೆಯಿಂದ.

■ **ಮೈಸೂರು ಮಕ್ಕಳ ಕೂಟ, ಎಂಎಂಕೆ ಮತ್ತು ಎಸ್‌ಡಿಎಂ ಮಹಾವಿದ್ಯಾಲಯ:** ವಿದ್ಯಾರ್ಥಿ ಸಂಘದ ಉದ್ಘಾಟನಾ ಸಮಾರಂಭ, ಉದ್ಘಾಟನೆ: 6ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶ ಫೆಲಿಕ್ಸ್ ಆಲ್ಫೋನ್ಸ್ ಅಂತೋಣಿ, ಗೌರವ ಅತಿಥಿಗಳು: ಮಹಾವಿದ್ಯಾಲಯ ನಿವೃತ್ತ ಪ್ರಾಂಶುಪಾಲ ಪ್ರೊ.ಬಾಲಚಂದ್ರಗೌಡ, ಅಧ್ಯಕ್ಷತೆ: ಕಾಲೇಜು ಪ್ರಿನ್ಸಿಪಾಲ್ ಪ್ರೊ.ಸಾಯಿನಾಥ ಮಲ್ಲಿಗೆಮಾಡು, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 9ಕ್ಕೆ.

■ **ಶ್ರೀ ಶ್ರೀ ನಾಗಾನಂದ ದತ್ತಾತ್ರೇಯ ಮಠ:** ಶ್ರೀ ಶುಭಕೃತ ಸಂವತ್ಸರದ ಭಗವಾನ್ ಶ್ರೀ ದತ್ತಾತ್ರೇಯ ಸ್ವಾಮಿಯವರ 47ನೇ ವರ್ಷದ ಸಪ್ತಾಹ, ಹೋಮ, ಪೂರ್ಣಾಹುತಿ, ಬೆಳಗ್ಗೆ 9ಕ್ಕೆ ಗುರುಪಾದುಕೆ ಉತ್ಸವ, ಬೆಳಗ್ಗೆ 11ಕ್ಕೆ ಭಜನೆ, ಮಧ್ಯಾಹ್ನ 12ಕ್ಕೆ ಭಜನೆ, ಶ್ರೀ ಗುರು ದತ್ತಾತ್ರೇಯ ಉತ್ಸವ, ಔದಂಬರ ಪೂಜೆ, ಮಹಾಮಂಗಳಾರತಿ, ಮಧ್ಯಾಹ್ನ 1.30ಕ್ಕೆ ಉತ್ಸವ, ಮಹಾಮಂಗಳಾರತಿ, ಪ್ರವಚನ, ಸ್ಥಳ: ಮಠದ ಆವರಣ, ಕೆ.ಆರ್.ಮಿಲ್ ಕಾಲೋನಿ ಹಿಂಭಾಗ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಡಯಾಬಿಟಿಸ್ ಮತ್ತು ಸಂಧಿವಾತ ಕಾಯಿಲೆಗಳಿಗೆ ಉಚಿತ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಆಲನಹಳ್ಳಿ, ಬೆಳಗ್ಗೆ 9ರಿಂದ.

■ **ಎನ್‌ಜೆಎಸ್ ಚಾರಿಟಬಲ್ ಟ್ರಸ್ಟ್, ಮೈಸೂರು ವೀರಶೈವ ಸಜ್ಜನ ಸಂಘ :** ಉಚಿತ ಆರೋಗ್ಯ ತಪಾಸಣಾ ಶಿಬಿರ, ಸ್ಥಳ: ಕಂಠಿ ಮಲ್ಲಣ್ಣನವರ ಕಲ್ಯಾಣ ಮಂದಿರ, ಕಬೀರ್ ರಸ್ತೆ, ಬೆಳಗ್ಗೆ 9.30 ರಿಂದ.

■ **ಯುವರಾಜ ಕಾಲೇಜು:** ರಕ್ತದಾನ ಶಿಬಿರ, ಸ್ಥಳ: ಮಹಾರಾಜ–ಯುವರಾಜ ಹೆಲ್ತ್ ಸೆಂಟರ್, ಬೆಳಗ್ಗೆ 10ರಿಂದ.

■ **ಜವಳಿ ಮಂತ್ರಾಲಯ, ನವದೆಹಲಿ, ಕೈಮಗ್ಗ ಮತ್ತು ಜವಳಿ ಇಲಾಖೆ ಕರ್ನಾಟಕ :** ವಿಶೇಷ ಕೈಮಗ್ಗ ಮೇಳ, ಕೈಮಗ್ಗ ಉತ್ಪನ್ನಗಳ ಬೃಹತ್ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್, ಹೆಬ್ಬಾಳು ಕೈಗಾರಿಕಾ ಪ್ರದೇಶ, ಬೆಳಗ್ಗೆ 10 ಗಂಟೆಯಿಂದ.

■ **ಡಯೋಸಿಸ್ ಆಫ್ ಮೈಸೂರು:** ಪ್ರತಿಭಾನ್ವಿತ ಕ್ಯಾಥೋಲಿಕ ವಿದ್ಯಾರ್ಥಿಗಳಿಗೆ ಸನ್ಮಾನ ಸಮಾರಂಭ, ಅಧ್ಯಕ್ಷತೆ: ಬಿಷಪ್ ರೆ. ಡಾ.ಕೆ.ಅಂತೋಣಿ ವಿಲಿಯಮ್, ಮುಖ್ಯ ಅತಿಥಿಗಳು: ಕರ್ನಾಟಕ ಹೈಕೋರ್ಟ್ ನಿವೃತ್ತ ನ್ಯಾಯಾಧೀಶ ಜಾನ್ ಮೈಕೇಲ್ ಕುನ್ಹ, ಕೆಆರ್‌ಸಿಇ ಬೆಂಗಳೂರು ಕಾರ್ಯದರ್ಶಿ ಫ್ರಾನ್ಸಿಸ್ ಅಸ್ಸಿಸಿ ಡಿಆಲ್‌ಮೇಡಾ, ಡಾ.ಥಾಮಸ್ ಅಂತೋಣಿ ವಾಜಪಿಳ್ಳೈ, ಆಲ್ಫ್ರೆಡ್ ಜಾನ್ ಮೆಂಡೋಂಕಾ, ಡೊಮಿನಿಕ್ ವಾಸ್, ಸ್ಥಳ: ಸೇಂಟ್ ಫಿಲೋಮಿನಾ ಕಾಲೇಜು ಒಳಾಂಗಣ, ಬನ್ನಿಮಂಟಪ, ಬೆಳಗ್ಗೆ 10ಕ್ಕೆ.

■ **ಪಿಜಿಎಲ್ ಸಂಸ್ಮರಣಾ ವೇದಿಕೆ :** ಸಂಜೆ 6ಕ್ಕೆ ಮೃದಂಗ ವಿದ್ವಾಂಸರಾದ ವಿದ್ವಾನ್ ಟಿ.ಎಸ್. ಚಂದ್ರಶೇಖರ್ ಅವರಿಗೆ ಗೌರವ ಸಮರ್ಪಣೆ, ಸಂಜೆ 6.30 ರಿಂದ ವಿದ್ವಾನ್ ಆರ್.ಎಸ್. ನಂದಕುಮಾರ್ ಅವರಿಂದ ಗಾಯನ, ವಿದ್ವಾನ್ ವೀಣಾ ಸುರೇಶ್–ಪಿಟೀಲು, ವಿದ್ವಾನ್ ಟಿ.ಎಸ್. ಚಂದ್ರಶೇಖರ್–ಮೃದಂಗ, ವಿದ್ವಾನ್ ಎಂ.ಆರ್. ಮಂಜುನಾಥ್– ಘಟ, ಸ್ಥಳ: ಶ್ರೀ ನಾದಬ್ರಹ್ಮ ಸಂಗೀತ ಸಭಾ, ಜೆಎಲ್‌ಬಿ ರಸ್ತೆ.

■ **ಅಭ್ಯುದಯ ಮಹಿಳಾ ಸಮಾಜ:** ವಿವಿಧ ಜಾನಪದ ಮತ್ತು ಸಂಗೀತ ವಿದ್ವಾಂಸರಿಂದ ಜನಪದ ಗೀತೆ –ಸುಗಮ ಸಂಗೀತ ಕಾರ್ಯಾಗಾರ, ಸ್ಥಳ: ಅಭ್ಯುದಯ ಮಹಿಳಾ ಸಮಾಜ, ಜೆ.ಪಿ.ನಗರ, ಸಂಜೆ 4ರಿಂದ.

■ **ಶ್ರೀ ರಾಘವೇಂದ್ರ ಸ್ವಾಮಿ ಸೇವಾ ಸಮಿತಿ :** ಪಂಡಿತ್ ಡಾ.ಬೆ.ನಾ.ವಿಜಯೇಂದ್ರಾಚಾರ್ ಅವರಿಂದ 'ಮಹಾಭಾರತದ ಉದ್ಯೋಗ ಪರ್ವ' ಕುರಿತು ಪ್ರವಚನ, ಸ್ಥಳ: ಜಯಲಕ್ಷ್ಮೀಪುರಂನಲ್ಲಿರುವ ಶ್ರೀ ರಾಘವೇಂದ್ರ ಮಠದ ಆವರಣ, ಸಂಜೆ 5 ಗಂಟೆಯಿಂದ.

ಬಿಳುಗಲಿ ಗ್ರಾಮದಲ್ಲಿಂದು, ನಂಜನಗೂಡು ತಾಲೂಕು

■ **ಶ್ರೀ ನಟರಾಜ ಮಹಿಳಾ ವಸತಿ ಪ್ರಥಮ ದರ್ಜೆ ಕಾಲೇಜು :** ಎನ್‌ಎಸ್‌ಎಸ್ ವಾರ್ಷಿಕ ಶಿಬಿರ, ಅಧ್ಯಕ್ಷತೆ : ಮಹಿಳಾ ಮತ್ತು ಶಿಶು ಅಭಿವೃದ್ಧಿ ಅಧಿಕಾರಿ ಶ್ರೀಮತಿ ಮಂಜುಳ, ಚಿಂತಕ ಶಂಕರ್ ದೇವನೂರು ಅವರಿಂದ ಜೀವನ ಮೌಲ್ಯಗಳು ಕುರಿತು ಉಪನ್ಯಾಸ, ಸಂಜೆ 4ಕ್ಕೆ.

ಮುಳ್ಳೂರು ಗ್ರಾಮದಲ್ಲಿಂದು, ಮೈಸೂರು ತಾಲೂಕು

■ **ಬಾಸುದೇವ ಸೋಮಾನಿ ಕಾಲೇಜು:** ಎನ್‌ಎಸ್‌ಎಸ್ ವಾರ್ಷಿಕ ವಿಶೇಷ ಶಿಬಿರ, ಉದ್ಘಾಟನೆ: ಮೈಸೂರು ವಿವಿ ಕುಲಸಚಿವ ಪ್ರೊ.ಜ್ಞಾನಪ್ರಕಾಶ್, ಮುಖ್ಯ ಅತಿಥಿಗಳು: ಡಾ.ಪುಟ್ಟಸ್ವಾಮಿ, ಪ್ರಭಾ ಪುಟ್ಟಸ್ವಾಮಿ, ಕುಬೇರ್ ಪಿ.ಗೌಡ, ಜಿ.ಕೆ.ಬಸವೇಗೌಡ, ಅಧ್ಯಕ್ಷತೆ: ಕಾಲೇಜು ಪ್ರಾಂಶುಪಾಲ ಡಾ.ಮಹದೇವಸ್ವಾಮಿ, ಮಧ್ಯಾಹ್ನ 3ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಶ್ರದ್ಧೆಯ ಶಿಲ್ಪ–ಮೈಸೂರು ಸುತ್ತಲಿನ ದೇಗುಲಗಳ ಪರಿಚಯ, ಪ್ರಸ್ತುತಿ–ಡಾ. ಟಿ.ಎಸ್.ಗೋಪಾಲ್, 6.40 ಅರಿವಿನ ಶಿಖರ– ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ ಸರಣಿ, ಗಾಯನ– ಜಿ.ಪುಷ್ಪಲತಾ, ವ್ಯಾಖ್ಯಾನ–ಡಾ.ಪ್ರದೀಪ್‌ಕುಮಾರ್ ಹೆಬ್ರಿ, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ–ದೂರ ಸರಿದರು ಕಾದಂಬರಿಯ ಪ್ರಸ್ತುತಿ– ಉಮೇಶ್, 8.30 ಉಲಿ ಉಯ್ಯಾಲೆ ಸರಣಿಯ 7ನೇ ಕಾರ್ಯಕ್ರಮ 'ಜನಪದ', ಲೇಖನ–ಕುರುವ ಬಸವರಾಜ್, ಪ್ರಸ್ತುತಿ–ಪ್ರಭುಸ್ವಾಮಿ ಮಳಿಮಠ, 10.00 ಅವಧರಿಸು ಬಾ ಅಮರನಾರೇಯಣ–ಕಾರ್ಯಕ್ರಮ ಸರಣಿ ಸಂಶೋಧನೆ, ಆಲೇಖ ಮತ್ತು ಸಂಗೀತ ನಿರ್ದೇಶನ–ಟಿ.ಎಸ್.ವಸಂತಮಾಧವಿ ಪರಿಕಲ್ಪನೆ ಮತ್ತು ನಿರೂಪಣೆ–ಡಾ.ಎನ್.ರಘು **ಮಧ್ಯಾಹ್ನ:** 12.30 ದೇವರ ನಾಮ–ಶ್ಯಾಮಲ ಜಿ.ಭಾವೆ, ಕೆ.ಆರ್.ಸವಿತಾ ಮತ್ತು ಆರ್.ರಶ್ಮಿ, 12.45 ಮಾನವ ಹಕ್ಕುಗಳು–ಮೈಸೂರು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ದೇವರಾಜ ಭೂತೆ ಅವರೊಂದಿಗೆ ಸಂದರ್ಶನ, ಸಂದರ್ಶಕರು–ದಿವಾಕರ ಹೆಗಡೆ, 1.20 ಭಾವಗೀತೆಗಳು–ಇಂದ್ರಾಣಿ ಅನಂತ ರಾಂ, 3.00 ಕೇಶವ ಚಂದ್ರ–ವೇಣುವಾದನ, 4.00 ಕಥಾ ಕಲಕ್ಷೇಪ 'ಹನುಮದ್ ವ್ರತ', ಪ್ರಸ್ತುತಿ–ವಿದ್ವಾನ್ ಭದ್ರಗಿರಿ ಅಚ್ಯುತದಾಸರು, 6.50ಕೃಷಿರಂಗ–ಕಿಸಾನ್‌ವಾಣಿ– ಸುಧಾರಿತ ಪದ್ಧತಿಯಲ್ಲಿ ಹೈನು ಉದ್ಯಮ ಕುರಿತು ಸುರೇಶ್ ಅವರೊಂದಿಗೆ ಸಂದರ್ಶನ, 9.30 ಎನ್.ಭಾರತಿ–ವೀಣಾವಾದನ, 10.30 ಸವಿನೆನಪು

ಬಹುರೂಪಿ ರಾಷ್ಟ್ರೀಯ ರಂಗೋತ್ಸವ ಕಾರ್ಯಕ್ರಮ



■ **ವನರಂಗ :** ದಕ್ಷಿಣ ಕನ್ನಡದ ಶ್ರೀ ಮಂಜುನಾಥ ಮತ್ತು ತಂಡದಿಂದ ಕಂಗೀಲು, ಡಾ. ಮಳವಳ್ಳಿ ಮಹದೇವಸ್ವಾಮಿ ಅವರಿಂದ ಮಂಟೇಸ್ವಾಮಿ ಹಾಡು, ಸಂಜೆ 5ಕ್ಕೆ.

■ **ಶ್ರೀರಂಗ ಮಂದಿರ (ಚಲನಚಿತ್ರೋತ್ಸವ) :** ಬೆಳಗ್ಗೆ 10.30ರಿಂದ ಗೌರ್ ಇನ್ ಮೈ ಗಾರ್ಡನ್ (ಇ), ನಿರ್ದೇಶನ: ರೀಟಾ ಬ್ಯಾನರ್ಜಿ, ಝುರಿಯಾ (ಹಿ), ನಿರ್ದೇಶನ : ಬಿಜು ತೊಪ್ಪು, ಮಧ್ಯಾಹ್ನ 12ರಿಂದ ದಿ ಸ್ಟೋರಿ ಆಫ್ ಜೆಲ್ಲಿ ಕಟ್ಟು (ಇ), ನಿರ್ದೇಶನ: ಕರೀಮ್ ಜಲಾಲ್ ಮತ್ತು ಹರಿಶಂಕರ್, ಸೀಡ್ಸ್ ಆಫ್ ಲೈಫ್ (ಇ), ನಿರ್ದೇಶನ: ಉಷಾ ಆಲಬುಕರ್ಕಿ, ಮಧ್ಯಾಹ್ನ 2ರಿಂದ ಮೆರ್ಕು ತೊಡರ್ಚಿ ಮಲೈ (ತ), ನಿರ್ದೇಶನ : ಲೆನಿನ್ ಭಾರತಿ.

■ **ಭೂಮಿಗೀತ :** ಬೆಂಗಳೂರಿನ ವಿಮೂವ್ ಥಿಯೇಟರ್ ತಂಡದಿಂದ ಬೈ2ಕಾಫಿ (ಕ) ನಾಟಕ ಪ್ರದರ್ಶನ, ರಚನೆ, ನಿರ್ದೇಶನ : ಅಭಿಷೇಕ್ ಅಯ್ಯಂಗಾರ್,

■ **ಸಂಸತ್ ರಂಗಮಂದಿರ:** ಬೆಂಗಳೂರಿನ ಸ್ನೇಹರಂಗ ತಂಡದಿಂದ ತುಕ್ಕೋಜಿ (ಕ) ನಾಟಕ ಪ್ರದರ್ಶನ, ರಚನೆ: ಪೂರ್ಣಚಂದ್ರ ತೇಜಸ್ವಿ, ನಿರ್ದೇಶನ: ವಾಲ್ಟರ್ ಡಿಸೋಜಾ, ರಂಗರೂಪ: ಹೆಚ್.ಸಿ. ರಮೇಶ್‌ಚಂದ್.

■ **ಕಲಾಮಂದಿರ :** ಮಂಗಳೂರಿನ ಅರೆಹೊಳೆ ಪ್ರತಿಷ್ಠಾನ ತಂಡದಿಂದ ಉಡಿಯೊಳಗಣ ಕಿಚ್ಚು (ಕ) ನಾಟಕ ಪ್ರದರ್ಶನ, ನಿರ್ದೇಶನ : ಪ್ರಶಾಂತ್ ಉದ್ಯಾವರ.

■ **ಬಿ.ವಿ. ಕಾರಂತ ರಂಗಚಾವಡಿ :** ಶ್ರೀರಂಗಪಟ್ಟಣದ ಆಯಾಮ ಅಕಾಡೆಮಿ ಆಫ್ ಫೈನ್ ಆರ್ಟ್ಸ್ ತಂಡದಿಂದ ದೇಸಿ ವೈಭವ ನೃತ್ಯ ರೂಪಕ, ಸಂಜೆ 4ರಿಂದ.

ಜನಸಂಖ್ಯಾನುಸಾರ ಮೀಸಲಾತಿಗೆ ಆಗ್ರಹಿಸಿ ಜ.23ರಂದು ಬೆಂಗಳೂರಲ್ಲಿ ಒಕ್ಕಲಿಗರ ಮಹಾ ಸಂಗಮ ಸಮಾವೇಶ

ಮೈಸೂರು,ಡಿ.12(ಎಂಟಿವೈ)– ಒಕ್ಕಲಿಗ ಸಮುದಾಯಕ್ಕೆ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಪ್ರಮಾಣ ಹೆಚ್ಚಿಸುವಂತೆ ಆಗ್ರಹಿಸಿ ಜ.23ರಂದು ಬೆಂಗಳೂರಲ್ಲಿ ಒಕ್ಕಲಿಗರ ಮಹಾ ಸಂಗಮ ಸಮಾವೇಶ ಆಯೋಜಿಸಲಾಗಿದೆ ಎಂದು ರಾಜ್ಯ ಒಕ್ಕಲಿಗರ ಮೀಸಲಾತಿ ಹೋರಾಟ ಸಮಿತಿ ಪ್ರಧಾನ ಸಂಚಾಲಕ ಆಡಿಟರ್ ನಾಗರಾಜ್ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸರ್ಕಾರ ಜನಸಂಖ್ಯೆಯಲ್ಲಿ ಶೇ.3ರಷ್ಟಿರುವ ಮೇಲ್ವರ್ಗಕ್ಕೆ ಆರ್ಥಿಕವಾಗಿ ಹಿಂದುಳಿದಿದ್ದಾರೆ ಎಂದು ಸಬೂಬು ನೀಡಿ ಶೇ.10ರಷ್ಟು ಮೀಸಲಾತಿ ನೀಡಿದೆ. ಮೇಲ್ವರ್ಗಕ್ಕೆ ಮೀಸಲಾತಿ ನೀಡುವಲ್ಲಿ ಪ್ರದರ್ಶಿಸಿದ ಕಾಳಜಿ ಒಕ್ಕಲಿಗ ಸಮುದಾಯದ ಮೇಲೆ ತೋರುತ್ತಿಲ್ಲ. ರಾಜ್ಯದ ಜನಸಂಖ್ಯೆಯಲ್ಲಿ ಒಂದು ಕೋಟಿಗಿಂತಲೂ ಹೆಚ್ಚಿನ ಜನರು ಇರುವ ಒಕ್ಕಲಿಗ ಸಮುದಾಯವನ್ನು ಬೇಕಂತಲೇ ಕಡೆಗಣಿಸಿದೆ. ಕಳೆದ 30 ವರ್ಷದಿಂದಲೂ ಕೇವಲ ಶೇ.4ರಷ್ಟು ಮೀಸಲಾತಿ ನೀಡಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಕೂಡಲೇ ಜನಸಂಖ್ಯೆಗೆ ಅನುಗುಣವಾಗಿ ಶೇ.12ರಷ್ಟು ಮೀಸಲಾತಿ ನೀಡಬೇಕು ಎಂದು ಆಗ್ರಹಿಸಿದರು.

ಮೀಸಲಾತಿ ಪ್ರಮಾಣ ಹೆಚ್ಚಳಕ್ಕೆ ಆಗ್ರಹಿಸಿ ಜ.23ರಂದು ಬೆಂಗಳೂರಿನಲ್ಲಿ ಮಹಾ ಒಕ್ಕಲಿಗರ ಮಹಾ ಸಂಗಮ ಸಮಾವೇಶ ಆಯೋಜಿಸಲು ನಿರ್ಧರಿಸಲಾಗಿದೆ. ಅದಕ್ಕೂ ಮುನ್ನ ಮೈಸೂರಲ್ಲೇ ಆದಿಚುಂಚನಗಿರಿ ಕ್ಷೇತ್ರದ ನಿರ್ಮಲಾನಂದನಾಥ ಸ್ವಾಮೀಜಿ ನೇತೃತ್ವದಲ್ಲಿ ಸಮುದಾಯ ಮುಖಂಡರೊಂದಿಗೆ ಪೂರ್ವಾಭಾವಿಯಾಗಿ ಸಭೆ ನಡೆಸಲು ಆಲೋಚಿಸಲಾಗಿದೆ. ಒಂದು ವೇಳೆ ಸರ್ಕಾರ ಮೀಸಲಾತಿ ಹೆಚ್ಚಳಕ್ಕೆ ಒಪ್ಪದಿದ್ದರೆ ವಿಧಾನಸೌಧಕ್ಕೆ ಮುತ್ತಿಗೆ ಸೇರಿದಂತೆ ವಿವಿಧ ಸ್ವರೂಪದ ಹೋರಾಟ ನಡೆಸುತ್ತೇವೆ ಎಂದು ಎಚ್ಚರಿಸಿದರು.

ನಮ್ಮೂರು ನಮ್ಮೋರು ಸಮಾಜ ಸೇವಾ ಟ್ರಸ್ಟ್ ಅಧ್ಯಕ್ಷ ಸತೀಶ್‌ಗೌಡ ಮಾತನಾಡಿ, ಪ್ರಸ್ತುತ ಒಕ್ಕಲಿಗ ಸಮುದಾಯಕ್ಕೆ ರಾಜ್ಯ ಸರ್ಕಾರ ನೀಡುತ್ತಿರುವ ಶೇ.4ರಷ್ಟು ಮೀಸಲಾತಿ ಸಾಲದ್ದಾಗಿದೆ. 30 ವರ್ಷದಿಂದಲೂ ಮೀಸಲಾತಿ ಪ್ರಮಾಣ ಹೆಚ್ಚಿಸಿಲ್ಲ. ಆದರೆ ಜನಸಂಖ್ಯೆ ಮಾತ್ರ ಹೆಚ್ಚಾಗಿದೆ. ಕೇಂದ್ರ ಸರ್ಕಾರ ಓಬಿಸಿ ಪಟ್ಟಿಯಲ್ಲಿ ನಗರ ಪ್ರದೇಶದ ಒಕ್ಕಲಿಗರಿಗೆ ಮೀಸಲಾತಿಯಲ್ಲಿ ವಂಚಿಸಿದೆ. ನಗರಗಳು ಬೆಳೆದಂತೆ ನಗರಗಳ ಆಸುಪಾಸಿನ ಗ್ರಾಮಗಳಲ್ಲಿ ವಾಸಿಸುತ್ತಿದ್ದ ಒಕ್ಕಲಿಗರು ನಗರ ಅಭಿವೃದ್ಧಿಗಾಗಿ ಭೂಮಿಯನ್ನು ಕಳೆದುಕೊಂಡು ಉದ್ಯೋಗ ಅರಸಿ ನಗರಕ್ಕೆ ಬರುತ್ತಿದ್ದಾರೆ. ಕೂಲಿ ಕೆಲಸ, ಸೆಕ್ಯೂರಿಟಿ ಕೆಲಸ ಮಾಡುತ್ತಾ ಬದುಕು ಕಟ್ಟಿಕೊಂಡಿದ್ದಾರೆ. ಈ ಹಿನ್ನೆಲೆಯಲ್ಲಿ ನಗರದಲ್ಲಿ ವಾಸಿಸುವ ಒಕ್ಕಲಿಗ ಸಮುದಾಯಕ್ಕೂ ಮೀಸಲಾತಿ ದೊರೆಯಬೇಕು ಎಂದು ಒತ್ತಾಯಿಸಿದರು. ಗೋಷ್ಠಿಯಲ್ಲಿ ಗಂಗಾಧರ್, ಚೇತನ್, ರಾಜಕೀಯ ರವಿ, ಯಮುನಾ ಇದ್ದರು.

ನಕ್ಕರೆ ಅದೇ ಸ್ವರ್ಗ

ಪತ್ನಿ : ನನ್ನನ್ನು ಮದುವೆಯಾದ ಮೇಲೆ ಸಂತೋಷವಾಗಿದ್ದೀರಾ ತಾನೇ?
ಪತಿ : ಸಂತೋಷವಾಗಿಯೇ ಇದ್ದೀನಿ
ಪತ್ನಿ : ಮದುವೆಗೆ ಮುಂಚೆ ಹೇಗಿದ್ರಿ?
ಪತಿ : ಇನ್ನೂ ಹೆಚ್ಚು ಸಂತೋಷವಾಗಿದ್ದೆ!

ಮೈಸೂರು ಮಿತ್ರ
ಮಂಗಳವಾರ, 13 ಡಿಸೆಂಬರ್ 2022
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........
ಅವಿವೇಕ ಕತ್ತಲಿನಂತಾದರೆ ವಿವೇಕ ಬೆಳಕಿನಂತೆ – ಭಾರವಿ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಸೌಟು ಬಲ್ಲದೆ ಸಾರಿನ ರುಚಿ?

ನಿಮ್ಮ ಪತ್ರಗಳು

ಉಚಿತ ನೇತ್ರ ಚಿಕಿತ್ಸಾ ಯೋಜನೆ ಜಾರಿ ಉತ್ತಮ ಕೆಲಸ

ಮಾನ್ಯರೆ,

ಸರ್ಕಾರದ ಉಚಿತ ನೇತ್ರ ಚಿಕಿತ್ಸಾ ಯೋಜನೆಗೆ ಹೊಸ ವರ್ಷದಲ್ಲಿ ಚಾಲನೆ ನೀಡುತ್ತಿರುವುದು ಶ್ಲಾಘನೀಯ. ರಾಜ್ಯವನ್ನು ನೇತ್ರ ದೋಷಮುಕ್ತ ಮಾಡಲು 60 ವರ್ಷ ಮೇಲ್ಪಟ್ಟವರಿಗೆ ಮಾತ್ರ ಕಣ್ಣಿನ ತಪಾಸಣೆ ಮಾಡಿದರೆ ಸಾಲದು, ರಾಜ್ಯದ ಪ್ರತಿಯೊಬ್ಬರಿಗೂ ಕಣ್ಣಿನ ತಪಾಸಣೆ ಮಾಡಿದರೆ ನೇತ್ರ ದೋಷಮುಕ್ತ ರಾಜ್ಯ ಮಾಡಲು ನೆರ ವಾಗುತ್ತದೆ. ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರ ಸರ್ಕಾರದಲ್ಲಿ ಅತ್ಯಂತ ಹೆಸರು ಗಳಿಸಿದ್ದ ಯಶಸ್ವಿನಿ (ಆರೋಗ್ಯಕ್ಕೆ ಸಂಬಂಧಿಸಿದ) ಯೋಜನೆಯನ್ನು ನಂತರ ಬಂದ ಸರ್ಕಾರಗಳು ಸ್ಥಗಿತಗೊಳಿಸಿದ್ದವು. ಈಗಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಪುನಃ ಯಶಸ್ವಿನಿ ಯೋಜನೆಯನ್ನು ಜಾರಿಗೆ ತಂದಿರುವುದು ಉತ್ತಮ ಕೆಲಸ. ದೆಹಲಿ ಸರ್ಕಾರ ಉಚಿತ ಆರೋಗ್ಯ (15 ಲಕ್ಷ ರೂ.ಗಳ ತನಕ ಉಚಿತ) ಮತ್ತು ಉಚಿತವಾದ ಉತ್ತಮ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಿ ಬಾರೀ ಹೆಸರು ಗಳಿಸಿರುವುದು ಎಲ್ಲರಿಗೂ ತಿಳಿದಿರುವ ಸಂಗತಿ. ನಮ್ಮ ಸರ್ಕಾರವು ಚಿಂತನೆ ಮಾಡಿ ಯಶಸ್ವಿನಿ ಯೋಜನೆಯಲ್ಲಿ ಆರೋಗ್ಯಕ್ಕೆ ಸಂಬಂಧಿಸಿದ ಎಲ್ಲಾ ಕಾಯಿಲೆಗಳಿಗೂ ಮತ್ತು ಉತ್ತಮ ಶಿಕ್ಷಣಕ್ಕೆ ದೆಹಲಿ ಸರ್ಕಾರದಂತೆ ಕಾರ್ಯಕ್ರಮ ರೂಪಿಸಿಕೊಂಡರೆ ನಮ್ಮ ರಾಜ್ಯದ ಪ್ರತಿಯೊಬ್ಬ ಪ್ರಜೆಗೂ ಅನುಕೂಲವಾಗುತ್ತದೆ ಮತ್ತು ಸರ್ಕಾರಕ್ಕೂ ಒಳ್ಳೆಯ ಹೆಸರು ಬರುವುದರಲ್ಲಿ ಯಾವುದೇ ಸಂಶಯವಿಲ್ಲ.

–ಬೆಸಗರಹಳ್ಳಿ ರವಿಪ್ರಸಾದ್, ಕೆ.ಸಿ.ನಗರ, ಮೈಸೂರು.

ದರ ಪ್ರದರ್ಶನ ಮಾಡಿ

ಮಾನ್ಯರೆ,

ಕಳೆದ ವರ್ಷ ಮನೆ ಬಾಡಿಗೆ ಕರಾರಿನ ಪತ್ರ ಪಡೆಯಲು ನೋಟರಿ ಬಳಿ ನನ್ನ ಮಿತ್ರರು ಹೋದಾಗ 600 ರೂ. ಶುಲ್ಕ ಪಡೆಯಲಾಗಿದೆ. ಹೀಗೆ ಈ ವಿಷಯವನ್ನು ವಿಮಾ ಎಜೆಂಟ್ ಒಬ್ಬರ ಬಳಿ ಹೇಳಿದಾಗ ಇಲ್ಲ ಅದಕ್ಕೆ 100 ರೂ. ಶುಲ್ಕ ಎಂದರು. ನಾನು ಇಲ್ಲಿಯವರೆಗೂ ಹಲವಾರು ಸಂದರ್ಭಗಳಲ್ಲಿ ನೋಟರಿ ಆಫೀಸಿಗೆ ಹೋಗಿ ಅವರು ಕೇಳಿದಷ್ಟು ಹಣ ಕೊಟ್ಟು ಬಂದಿರುತ್ತೇನೆ. ಯಾವುದಕ್ಕೂ ರಶೀತಿ ಇಲ್ಲ. ಗ್ರಾಹಕರಿಂದ ಹೆಚ್ಚು ಸುಲಿಗೆ ಮಾಡಬಾರದೆಂದು ಕಿರಾಣಿ ಅಂಗಡಿ, ಹೋಟೆಲ್ ಮುಂತಾದ ಕಡೇ ದರದ ಪಟ್ಟಿ ಹಾಕಬೇಕೆಂಬ ನಿಯಮವಿತ್ತು. ಈಗ ಅದು ಮರೆಯಾಗುತ್ತಿದೆ. ಗ್ರಾಹಕರು ಎಲ್ಲೆಲ್ಲಿ ಕೆಲಸಕ್ಕೆ ಶುಲ್ಕದ ರೂಪದಲ್ಲಿ ಹಣ ಕೊಡುತ್ತಾರೋ ಅಲ್ಲಿ ದರ ಪಟ್ಟಿ ಹಾಕುವುದನ್ನು ಕಡ್ಡಾಯಗೊಳಿಸಬೇಕು. ಸಂಬಂಧಪಟ್ಟವರು ನೋಟರಿ ಕಚೇರಿಯಲ್ಲಿ ಇಂತಹ ಕೆಲಸಕ್ಕೆ ಇಷ್ಟು ಹಣ ಎಂಬ ಫಲಕ ಹಾಕುವಂತೆ ಕಡ್ಡಾಯ ಮಾಡಬೇಕೆಂದು ಮನವಿ.

–ಅಕ್ಕಿಹೆಬ್ಬಾಳ್ ವೆಂಕಟೇಶ್, ಮೈಸೂರು

ರಸ್ತೆ ಬದಿಯಲ್ಲೇ ಚರಂಡಿ ಕೊಳಚೆ ನೀರು



ಮಾನ್ಯರೆ,

ನಂಜನಗೂಡು ತಾಲೂಕು ಹಲ್ಲೆರೆ ಗ್ರಾಮದ ಪರಿಶಿಷ್ಟ ಜನಾಂಗದ ಬೀದಿಯಲ್ಲಿ ಚರಂಡಿ ಕೊಳಚೆ ನೀರು ತುಂಬಿ ರಸ್ತೆಯಲ್ಲೇ ಹರಿಯುವುದರಿಂದ ಸುತ್ತಮುತ್ತ ದುರ್ವಾಸನೆ ಬೀರುತ್ತಿದೆ. ಅಲ್ಲೇ ಗ್ರಾಮ ಪಂಚಾಯಿತಿ ಇದ್ದರೂ ಜನತೆಗೆ ಇಲ್ಲದಂತಾಗಿದೆ. ಚರಂಡಿ ಸ್ವಚ್ಛತೆ ಮಾಡದೇ ಅವುಗಳ ತುಂಬಾ ಕೊಳಚೆ ನೀರು ತುಂಬಿ, ಗಬ್ಬೆದ್ದು ನಾರುತ್ತಿದ್ದು, ಇದರಿಂದ ಅಕ್ಕಪಕ್ಕದಲ್ಲಿ ವಾಸ ಮಾಡುವ ಕುಟುಂಬಕ್ಕೆ ರೋಗ ರುಜಿನಗಳು ಹರಡುವ ಸಂಭವವಿದೆ. ನಿವಾಸಿಗಳು ದುರ್ವಾಸನೆಯಿಂದ ಮೂಗು ಮುಚ್ಚಿ ವಾಸ ಮಾಡುವ ಪರಿಸ್ಥಿತಿ ಉಂಟಾಗಿದೆ. ಹಲವು ಬಾರಿ ಚರಂಡಿ ಸ್ವಚ್ಛತೆಗಾಗಿ ಪಂಚಾಯಿತಿ ಅಧಿಕಾರಿಗಳಿಗೆ ಮನವಿ ಮಾಡಿದರೂ ಅಧಿಕಾರಿಗಳು ನಿರ್ಲಕ್ಷ್ಯ ವಹಿಸುತ್ತಿದ್ದಾರೆ. ಇನ್ನಾದರೂ ಸಂಬಂಧಪಟ್ಟ ಅಧಿಕಾರಿಗಳು ಸ್ವಚ್ಛತೆಯನ್ನು ಕಾಪಾಡಿ ನಿವಾಸಿಗಳಿಗೆ ಹರಡುವ ರೋಗಗಳನ್ನು ತಡೆಗಟ್ಟಲು ಮುಂದಾಗಬೇಕು ಎಂದು ಮನವಿ.

– ಮಹದೇವಯ್ಯ, ಹಲ್ಲರೆ, ನಂಜನಗೂಡು ತಾ.

ವಿದ್ಯುತ್ ದರ ಇಳಿಕೆ ಸ್ವಾಗತಾರ್ಹ

ಮಾನ್ಯರೆ,

ಪ್ರಸ್ತುತ ದಿನಗಳಲ್ಲಿ ಪ್ರತಿಯೊಂದು ವಸ್ತುವಿನ ಬೆಲೆ ಗಗನಕ್ಕೇರಿದ್ದು ಸಾಮಾನ್ಯ ಜನ ವಿಶೇಷವಾಗಿ ಬಡ ವರ್ಗದ ಜನ ಅದರಲ್ಲೂ ಅಂದದ್ದು ದುಡಿದು ತಿನ್ನುವ ಜನಕ್ಕೆ ಜೀವನ ನಡೆಸುವುದು ದುಸ್ಥರವಾದ ಇಂತಹ ಸಮಯದಲ್ಲಿ ರಾಜ್ಯದ ಇಂಧನ ಇಲಾಖೆ ವಿದ್ಯುತ್ ದರ ಕಡಿತಗೊಳಿಸುವುದಾಗಿ ತಿಳಿಸಿರುವುದು ಸಂತಸದ ವಿಷಯವಾಗಿದೆ.

ಸದಾ ವಿದ್ಯುತ್ ದರ ಏರಿಸುವ ಇಂಧನ ಇಲಾಖೆ ಹೊಸ ವರ್ಷಕ್ಕೆ ಮುಂಚೆಯೆ ಸಿಹಿ ಸುದ್ದಿ ನೀಡಿರುವ ಕ್ರಮ ಸ್ವಾಗತಾರ್ಹವಾಗಿದೆ. ಗೃಹ ಬಳಕೆ ಸೇರಿದಂತೆ ಎಲ್ಲಾ ಬಗೆಯ ಗ್ರಾಹಕರುಗಳಿಗೆ ಅನುಕೂಲವಾಗಲಿ ಎಂಬ ಸದುದ್ದೇಶದಿಂದ ಪ್ರತಿ ಯೂನಿಟ್‌ಗೆ 70 ಪೈಸೆಯಿಂದ 2 ರೂ.ವರೆಗೆ ದರ ಕಡಿಮೆ ಮಾಡುವುದಾಗಿ ಹೇಳಿರುವುದು ಮಧ್ಯಮ ವರ್ಗದ ಜನಕ್ಕೆ ಸಂತಸದ ಸಂಗತಿಯಾಗಿದೆ.

ಪ್ರತಿ ವರ್ಷ ನಡೆಸುವ ದರ ಪರಿಷ್ಕರಣೆಯಲ್ಲಿ ಇಂಧನ ಇಲಾಖೆ ದರ ಕಡಿಮೆ ಮಾಡುವುದಾಗಿ ತಿಳಿಸಿದೆ. ಇದು ಕೇವಲ ಗೃಹ ಬಳಕೆದಾರರಿಗೆ ಮಾತ್ರವಲ್ಲದೆ ಎಚ್.ಟಿ, ಕೈಗಾರಿಕಾ, ವಾಣಿಜ್ಯ ಮತ್ತು ಎಲ್ ಟಿ ಗ್ರಾಹಕರಿಗೂ ಅನ್ವಯಿಸುತ್ತದೆ.

ಇಂಧನ ಇಲಾಖೆಯ ಮೂಲಗಳ ಪ್ರಕಾರ ಗ್ರಾಮೀಣ ಭಾಗದ ಗ್ರಾಹಕರುಗಳಿಗೆ ರಿಯಾಯಿತಿಯ ಭಾಗವಾಗಿ, ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಹಕರುಗಳಿಗೆ 25 ಪೈಸೆಯಷ್ಟು ಮತ್ತು 50 ಯೂನಿಟ್ ಬಳಸುವ ಲೈಫ್‌ಲೈನ್ ಗ್ರಾಹಕರಿಗೆ ವಿಧಿಸುತ್ತಿದ್ದ ದಂಡವನ್ನು ಕಡಿಮೆ ಮಾಡಲಾಗುವುದೆಂದು ತಿಳಿಸಲಾಗಿದೆ. ದಂಡ ವಿಧಿಸುವುದನ್ನು 50, 200 ಮತ್ತು ಹೆಚ್ಚು ಯೂನಿಟ್ ಬಳಸುವ ಗ್ರಾಹಕರಿಗೆ ವಿನಾಯಿತಿ ನೀಡಲಾಗುತ್ತದೆ ಎಂದೂ ಇಂಧನ ಇಲಾಖೆ ತಿಳಿಸಿದೆ. ಇಂಧನ ಇಲಾಖೆಯ ಈ ಕ್ರಮ ಸ್ವಾಗತಾರ್ಹವಾಗಿದ್ದು ರಾಜ್ಯದ ಜನತೆಯ ಪರವಾಗಿ ಇಂಧನ ಇಲಾಖೆಗೆ ಅಭಿನಂದನೆಗಳು.

–ರಾಮಸ್ವಾಮಿ ಭಟ್, ಚಿಕ್ಕಮಗಳೂರು.



ಡಾ. ಗುಬ್ಬಿಗೂಡು ರಮೇಶ್
ಮೊ : 97429 34512

ದೀಪ ಸಾಲು

ಎದೆಯ ಭೂಪಟದಲ್ಲಿ ಬಿಟ್ಟು ಹೋದ ಆತ್ಮಚರಿತ್ರೆಗಳು

ಇತ್ತೀಚೆಗೆ ಹಿರಿಯರೊಬ್ಬರು ಪರಿಚಯವಾದರು. ಬ್ಯಾಂಕ್ ಉದ್ಯೋಗಿ ಸತ್ಯನಾರಾಯಣ ಅಂತ. ವಯಸ್ಸು 70 ದಾಟಿರಬಹುದು. ಮಗ, ಮಗಳು, ಸೊಸೆ, ಮೊಮ್ಮಕ್ಕಳು, ಪತ್ನಿಯ ಜೊತೆ ವಿಶ್ರಾಂತ ಜೀವನ ನಡೆಸುತ್ತಿದ್ದಾರೆ. ಬಹಳ ಶಿಸ್ತಿನ ಮನುಷ್ಯ. ಮಾತುಕತೆ, ವ್ಯವಹಾರ, ನಡವಳಿಕೆಗಳಲ್ಲಿ ಸ್ವಲ್ಪ ಖಡಕ್ಕೆ! ಕಳೆದ 3 ತಿಂಗಳಿನಿಂದ ಅವರು ನನ್ನ ಸಂಪರ್ಕಕ್ಕೆ ಐದಾರು ಸಲ ಸಿಕ್ಕಿ ಮಾತಾಡಿದ್ದರು. ಅವರ ತಂದೆ–ತಾಯಿ ಈಗ ಬದುಕಿಲ್ಲ. ಅಣ್ಣತಮ್ಮಂದಿರೆಲ್ಲ ದೊಡ್ಡ ದೊಡ್ಡ ಕೆಲಸಗಳಲ್ಲಿ ಬೇರೆ ಬೇರೆ ಊರುಗಳಲ್ಲಿ ವಾಸವಾಗಿದ್ದಾರೆ. ಇದು ಬಹುಪಾಲು ಹಿರಿಯರ ವಿಶ್ರಾಂತ ಬದುಕು ಹೀಗೆ ಇರಬಹುದು. ಸ್ವಲ್ಪ ಅನುಕೂಲತೆಗಳಿರುವ ಹಿರೀಕರ ಬದುಕುಗಳು ಸ್ವಲ್ಪ ಹೆಚ್ಚು ಕಮ್ಮಿ ಹೀಗಿಯೇ?

ನಾನು ಹೇಳ ಹೊರಟಿರುವುದು ಅದನ್ನಲ್ಲ! ಅದೇನೆಂದರೆ ಆ ಹಿರಿಯರು ಪ್ರತಿ ಬಾರಿ ಮಾತಾಡುವಾಗಲೂ 'ನೋಡಿ ರಮೇಶ್ ನಮ್ಮ ತಂದೆಯವರು ಹೇಳ್ತಾ ಇದ್ರು' ಅಂತಾನೇ ಮಾತು ಶುರು ಮಾಡೋರು. ಸಾಕಷ್ಟು ಬಾರಿ ಅವರ ತಂದೆ ತಾಯಿಗಳನ್ನು ಅವರ ಮಾತಿನಲ್ಲಿ ತರೋರು. ಮಾತಾಡುವ ಪ್ರತೀ ಸಂದರ್ಭಗಳಲ್ಲೂ ಅವರ ತಂದೆತಾಯಿ ಕಾಲದ ಯಾವುದೋ ಒಂದು ಘಟನೆಯನ್ನೋ, ಅವರಾಡಿದ ಮಾತನ್ನೋ, ನೆನಪಿಸಿಕೊಂಡು ಮಾತಿನ ಮಧ್ಯಕ್ಕೆ ತಂದು ಇವತ್ತಿನ ನಮ್ಮ ಮಾತುಕತೆಯನ್ನು ಮುಗಿಸುತ್ತಿದ್ದರು. ಕುತೂಹಲಕ್ಕೆ ನಿಮ್ಮ ತಂದೆ ಏನಾಗಿದ್ದರು ಎಂದು ಕೇಳಿದೆ! ಆ ಕಾಲಕ್ಕೆ ಅವರು ಎಸ್ಸೆಸೆಲ್ಸಿ ಫೇಲು, ಕೋಲಾರದ ಎ.ಸಿ. ಕಚೇರಿಯಲ್ಲಿ ಸಣ್ಣ ನೌಕರಿಯಲ್ಲಿದ್ದರು ಅಷ್ಟೆ. ನಮ್ಮಪ್ಪನ ಕಾಲದಲ್ಲಿ ನಮಗೆಲ್ಲ ಅಷ್ಟೇನೂ ಅನುಕೂಲಗಳಿರಲಿಲ್ಲ. ಆದರೂ ನಮ್ಮ ತಂದೆ ನಮಗೆಲ್ಲಾ ಹೇಳೋರು ನಮಗೆ ಏನೂ ಅನುಕೂಲ ಇಲ್ಲ ಎಂದು ಕೊರಗುತ್ತಾ ಕೂರಬೇಡಿ. ಏನೆಲ್ಲಾ ಬೇಕು ಅನ್ನಿಸುತ್ತೋ ಅದನ್ನು ಪಡೆಯೋಕೆ ವಾಮಮಾರ್ಗ ಹಿಡಿಯಬೇಡಿ. ನಾನು ನಿಮಗೆ ಆಸ್ತಿ ಹಣ, ಅನುಕೂಲಗಳನ್ನು ಮಾಡಲಾರೆ. ವಿದ್ಯೆ, ವಿನಯ, ಸಂಸ್ಕಾರಗಳನ್ನು ಮಾತ್ರ ಕೊಡೋದಿಕ್ಕೆ ಸಾಧ್ಯ ಆಗುತ್ತೇ. ಅದನ್ನಷ್ಟೇ ಕೊಡುತ್ತೇನೆ. ನಿಮ್ಮ ಮುಂದಿನ ತಲೆಮಾರಿಗೆ ನೀವೂ ಅದನ್ನೇ ಹಂಚುತ್ತಾ ಹೋಗಿ! ನೀವು ಬಯಸಿದ್ದೆಲ್ಲಾ ನಿಮ್ಮನ್ನೇ ಹುಡುಕಿಕೊಂಡು ಬರುತ್ತೆ, ಆತುರ ಬೇಡ! ನಿಂತು ಹೊರಡಿ, ಎನ್ನುತ್ತಿದ್ದರು ಅಂತ ಅವರು ಹೇಳ್ತಾ ಇದ್ರು.

ಇವತ್ತು ನಮ್ಮೆಲ್ಲರಿಗೂ ಆಸ್ತಿ, ಅನುಕೂಲ, ಸಾಮಾಜಿಕ ಸ್ಥಾನಮಾನ ಹೀಗೆ ಎಲ್ಲವೂ ಇದೆ ಇವರೆ, ಆದರೆ ಮಕ್ಕಳಿಗೆ ನಮ್ಮ ಹಿರಿಯರು ಬಾಳಿದ ಬಾಳ್ವೆಯನ್ನು ಆಗಾಗ ಹೇಳಬೇಕು ಅನ್ನಿಸುತ್ತೆ ಎಂದರು. ಯಾಕೆ ಆ ಹಿರಿಯರ ಮಾತುಗಳು ನನಗೆ ಇಲ್ಲಿ ಮುಖ್ಯ ಎನ್ನಿಸಿತು ಎಂದರೆ ಲಕ್ಷಾಂತರ ಕೋಟ್ಯಾಂತರ ಬೆಲೆಬಾಳುವ ಆಸ್ತಿ, ಅನುಕೂಲಗಳನ್ನು ಮಕ್ಕಳಿಗಾಗಿ ಮಾಡಿಡಲು ತಮ್ಮ ಆರೋಗ್ಯ ಲೆಕ್ಕಸದೆ ದುಡಿದು ಸುಣ್ಣವಾಗಿ ಹೋದ ಅಪ್ಪಂದಿರ ಬಗ್ಗೆ ಕೆಲವರು ನಿಷ್ಠೂರವಾಗಿ ಮಾತಾಡುವ ಪರಿ ನಮಗೆ ಗೊತ್ತಿದೆ. ನಮ್ಮಪ್ಪ, ನಮ್ಮ ಅಣ್ಣನಿಗೆ ಎರಡೆಕರೆ ಜಾಗ ಜಾಸ್ತಿ ಕೊಟ್ಟ, ಯಾಕೆ ಕೊಡಬೇಕಿತ್ತು? ಆ ಇನ್ನೊಂದು ಕಟ್ಟಡವನ್ನು ತಂಗಿಯ ಹೆಸರಿಗೆ ಏಕೆ ಬರೆಯಬೇಕಿತ್ತು. ಅವಳಿಗೆ ಒಳ್ಳೇ ಕಡೆ ಸಂಬಂಧ ನೋಡಿ ಮದುವೆ ಮಾಡಿರ್ಲಿಲ್ವ, ನಮ್ಮ ಚಿಕ್ಕಪ್ಪ ಚಿಕ್ಕಪ್ಪನ ಮಕ್ಕಳಿಗೆ ನಮ್ಮಪ್ಪ ಆ ಕಾಲದಲ್ಲಿ ಅವನಿಗೆ ಮಕ್ಕಳು ಜಾಸ್ತಿ ಅಂತ ಬಾಡಿಗೆ ಬರೋ ಅಂಗಡಿ ಮನೇನ ಯಾಕೆ ಬಿಟ್ಟುಕೊಡಬೇಕಿತ್ತು? ಹೀಗೆ ಮಾತಾಡುವವರನ್ನು ಸಾಕಷ್ಟು ನೋಡಿದ್ದೇವೆ.

ಯಾಕೆ ಹೀಗೆ ಮಾತುಗಳು ಹುಟ್ಟುತ್ತವೆ ಎಂದರೆ ಅಪ್ಪನಿಂದ ಮಕ್ಕಳಿಗೆ ಅನುಕ್ರಮವಾಗಿ ಆಸ್ತಿ ಮತ್ತು ಅನುಕೂಲಗಳು ಸಕ್ರಮವಾಗಿ ವರ್ಗಾವಣೆಯಾಗಿರುತ್ತವೆ. ಆದರೆ ಕೆಲವರಿಗೆ ಮಾತ್ರ ಆಸ್ತಿ ಅನುಕೂಲಗಳ ಜೊತೆ ಅಪ್ಪ ಅಮ್ಮನ ನೀತಿ–ನ್ಯಾಯ, ಸಂಸ್ಕಾರ, ಮಾತು, ಬವಣೆ, ಬದುಕು ಎಲ್ಲವೂ ಎದೆಯ ಭೂಪಟದಲ್ಲಿ ಅಚ್ಚೊತ್ತಿದಂತೆ ಸಂಸ್ಕಾರದ ರೂಪದಲ್ಲಿ ಬಂದಿರುತ್ತದೆ. ಅದು ವಂಶವಾಹಿನಿಯಂತೆ ಬದುಕಿಗೊಂದು ಸಂಸ್ಕಾರ, ಸಾಕೆಂಬುವ ಸಿರಿತನ, ಹಂಚುಣ್ಣುವ ದೊಡ್ಡತನದ ಜೊತೆಗೆ ಪ್ರತಿಭೆ, ಕಲೆ, ಅಂಗಸೌಷ್ಠವ ಇತ್ಯಾದಿಗಳು ಜೀನ್ಸ್‌ನ ಜೊತೆ ವರ್ಗಾವಣೆಯಾಗಿರುತ್ತದೆ. ಆ ಮನುಷ್ಯ ಒಂದು ಘಂಟೆ ಮಾತಾಡುವಾಗಲು, ಐದಾರು ಬಾರಿಯಾದರೂ ಅವರ ತಂದೆ–ತಾಯಿ ಕಟ್ಟಿಕೊಟ್ಟ, ಹೇಳುತ್ತಿದ್ದ ಮಾತುಗಳನ್ನು ಮತ್ತೆ ಮತ್ತೆ ನೆನೆಸಿಕೊಳ್ಳುತ್ತಿದ್ದಾಗ ನನಗೂ ಅಂಥದೇ ಮರುಕಳಿಸಿ ನಿಮಗೂ ಅಂಥದೇನಾದರೂ ಇದ್ದರೆ ನೆನಪಿಸೋಣವೆಂದು ಈ ಅಂಕಣ ಬರೆದೆ. ಇದೊಂದು ಆತ್ಮೀಯ ಪತ್ರದ ಒಕ್ಕಣೆಯಂತಿರಬೇಕು. ಮಾಹಿತಿ ಕೋಶದಂತಿರಬಾರದೆಂದೆನಿಸಿ ಬರೆಯಲು ಕುಳಿತಾಗ ಬಿಟ್ಟೂ ಬಿಡದೆ ಡಾ.ರಾಜ್‌ಕುಮಾರ್ ನೆನಪಾದರು.



ಮೀಡಿಯಾಗಳಲ್ಲಿ ಡಾ.ರಾಜ್‌ಕುಮಾರ್ ಅವರ ಆರಂಭದ ಸಂದರ್ಶನಗಳಿಂದ ಹಿಡಿದು ಕಡೆಯ ಸಂದರ್ಶನಗಳವರೆಗೆ ಒಂದಲ್ಲಾ ಒಂದು ಸಂದರ್ಶನಗಳನ್ನು ನಾವೂ ನೀವೂ ನೋಡಿರುತ್ತೇವೆ. ಯಾವುದಾದರೊಂದು ಸಂದರ್ಶನವನ್ನು ನೆನಪಿಸಿಕೊಳ್ಳಿ, ನಮ್ಮಪ್ಪಾಜಿ ಹೇಳ್ತಿದ್ರು, ಹುಬ್ಬನ್ನ ಪಾತ್ರಕ್ಕೆ ತಕ್ಕಂತೆ ಸರಿ ಮಾಡ್ಕೋಬೇಕು ಕಂದ, ರಂಗಭೂಮಿನೇ ದೇವರು, ತಿನ್ನೋ ಅನ್ನನ ಚೆಲ್ಲಬಾರ್ದು ಕಂದ ಅಂತ ನಮ್ಮಪ್ಪಾಜಿ ಯಾವಾಗಲೂ ಹೇಳೋರು ಅಂತ ಸಾಕಷ್ಟು ಸಂದರ್ಶನಗಳಲ್ಲಿ ಡಾ.ರಾಜ್‌ಕುಮಾರ್ ಅವರು ಮಾತಾಡಿದ್ದುಂಟು. ಅದು ಅಭಿನಯ ಇರಲಿ, ಜೀವನ ಇರಲಿ, ಜೀವನ ಮೌಲ್ಯಗಳಿರಲಿ ಸಂದರ್ಭಕ್ಕೆ ಒದಗಿ ಬರುವ ಅದು ಯಾವುದೇ ಇರಲಿ, ಅಲ್ಲೆಲ್ಲಾ ಅಪ್ಪಾಜಿ ಹೇಳುತ್ತಿದ್ದ ಮಾತುಗಳನ್ನು ನೆನಪಿಸಿಕೊಳ್ಳುತ್ತಿದ್ದ ಅವರ ಸಂದರ್ಶನಗಳು ನೆನಪಾಗಿ ಹೋಯ್ತು. ಇವತ್ತಿಗೆ ರಂಗಭೂಮಿ, ಸಿನಿಮಾಗಳಲ್ಲಿ ಸಿಂಗಾನಲ್ಲೂರು ಪುಟ್ಟಸ್ವಾಮಯ್ಯನವರಿಗಿಂತ ರಾಜ್‌ಕುಮಾರ್ ಹೆಚ್ಚು ಯಶಸ್ಸನ್ನು ನೋಡಿದವರು. ಅಂಥಾ ಕಾಲದಲ್ಲೂ ಅವರು ಅವರ ತಂದೆ ಹೇಳುತ್ತಿದ್ದ ಮಾತುಗಳನ್ನು ನೆನೆಸಿಕೊಳ್ಳುತ್ತಾ ವಿನಯದಿಂದ ಬೆಳೆದರು. ಅವರ ಮಕ್ಕಳು ಈಗಲೂ ಅದನ್ನೇ ಮುಂದು ವರೆಸಿಕೊಂಡು, ಅಪ್ಪಾಜಿ ಹೇಳ್ತಿದ್ರು ಅಂತ ಮಾತಾಡ್ತಾರೆ. ಅಂದರೆ ಸಬ್ ರಿಜಿಸ್ಟ್ರಾರ್ ಕಛೇರಿಯಲ್ಲಿ ರಿಜಿಸ್ಟರ್ ಆಗದೆ, ಮನಸ್ಸೆಂಬ ಹಾಳೆಗಳ ಮೇಲೆ ಹೆಬ್ಬೆಟ್ಟು ಒತ್ತಿ ಬರೆದುಕೊಟ್ಟ ಶುದ್ಧ ಕ್ರಯಪತ್ರದ ಸಂಸ್ಕಾರ ಫಲವೇ ನಮ್ಮ ಜೀವನಾನುಭವ. ರಾಷ್ಟ್ರಕವಿ ಕುವೆಂಪು ಅವರು ಬಾಲಕರಾಗಿದ್ದಾಗಿನಿಂದ ರಾಷ್ಟ್ರಕವಿಯಾಗುವವರೆಗಿನ ನೆನಪಿನ ದೋಣಿಯೆಂಬ ಆತ್ಮ ಚರಿತ್ರೆಯಲ್ಲಿ ಬರೆಯುತ್ತಾರೆ. ಅವರ ಕುಪ್ಪಳ್ಳಿಯ ಮನೆಯಲ್ಲಿ ಕೂಡು ಕುಟುಂಬವಿತ್ತು. ಅಪ್ಪ ಅಮ್ಮ ಒಕ್ಕಲು ಸಂಸ್ಕೃತಿಯ ಶ್ರೀಮಂತಿಕೆಯಲ್ಲಿ ಬಾಳಿದವರು. ತನ್ನ ತಂದೆ ತಾಯಿಯ ಬಗ್ಗೆ ನೆಲದ ಒಡಲಿನಂಥಾ ಮಾತುಗಳನ್ನು ಅವರು ಬರೆಯುತ್ತಾರೆ. ಇದೊಂಥರ 'ಮೈ ಆಟೋಗ್ರಾಫ್' ಥರ. ಯಾರನ್ನೂ ಬಿಡದ ಎಲ್ಲರನ್ನೂ ಕೂಡ ತನ್ನ ತೊಳ್ತೆಕ್ಕೆಯೊಳಕ್ಕೆ ತಂದು ಕೊಳ್ಳುತ್ತಾ ಹೃದಯ ಹೃದಯಗಳಲ್ಲಿ ತೇಲುವ ನೆನಪಿನ ದೋಣಿ. ಪಿತೃ ಪಕ್ಷದ ದಿನ ಎಡೆ ಹಾಕಿ ಧೂಪ ಹಾಕುವುದು ಶಾಸ್ತ್ರ ಸಂಪ್ರದಾಯ. ಆದರೆ ಅನುದಿನ ನಮ್ಮನ್ನು ರೂಪಿಸಿ ನಮ್ಮನ್ನು ಗೆಲ್ಲಿಸುವ ಸಾಪೇಕ್ಷ ಸಂಸ್ಕಾರವೇ ಆತ್ಮ ಸಾಕ್ಷಾತ್ಕಾರಗಳು. ನಮ್ಮ ಹಿರಿಯರು ಒಂದಲ್ಲಾ ಒಂದು ವಿಧದಲ್ಲಿ ನಮಗಾಗಿ ಬಿಟ್ಟುಹೋದ ಆತ್ಮಚರಿತ್ರೆಗಳು. ಸಾಮಾನ್ಯವಾಗಿ ಸಾಧಕರ, ಪ್ರಖ್ಯಾತರ ಆತ್ಮಚರಿತ್ರೆಗಳನ್ನು ಓದುವಾಗ ಅವರ ಸಾಧನೆಗಳನ್ನು ಪಕ್ಕಕ್ಕಿಟ್ಟು ಅವರ ಬದುಕಿಗೆ ಇಷ್ಟೆಲ್ಲಾ ಸಾಧಿಸಲು ಆ ಸಾಧಿಸುವ ಛಲ, ಸಾಧಿಸಿದ ಶಕ್ತಿ, ಸಾಧಿಸುವ ಗುಣ ಎಲ್ಲಿಂದ ಬಂತು? ಹೇಗೆ ಬಂತೆಂದು ಅದೇ ಆತ್ಮಚರಿತ್ರೆಯಲ್ಲಿನ ಪುಟಗಳಲ್ಲಿ ಅವರ ವೈಯಕ್ತಿಕ ಬದುಕಿನ ಮೇಲೆ ಕಣ್ಣಾಡಿಸಿ ನೋಡುವ ಚಾಳಿ ನನಗೆ. ಅಲ್ಲಿ ಗೋಚರಿಸಿದ ಈ ಆತ್ಮ ಸಾಕ್ಷಾತ್ಕಾರ ಸತ್ಯವೇ ಅವರ ಪೂರ್ವಜರು ಕೊಟ್ಟ ಆತ್ಮಚರಿತ್ರೆಗಾಗುವಷ್ಟು ಅಲಿಖಿತ ಸಂಸ್ಕಾರ ಮತ್ತು ಜೀವ ತುಂಬಿದ ಅನುಭವದ ಸಾರ. ಅಲ್ಲಿ ಸಿಗುವ ಈ ಸಂಸ್ಕಾರಗಳನ್ನೇ ನಾವು ಹಳೆಯ ಚಿನ್ನ ಎಂದು ಕರೆಯುವುದು. ಡಾ.ಗುರುರಾಜ ಕರ್ಜಗಿಯವರು ಕಾಲೇಜಿನಲ್ಲಿ ಪ್ರಾಂಶುಪಾಲರಾಗಿದ್ದಾಗ ಅವರ ವಿದ್ಯಾರ್ಥಿಗಳನ್ನು ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಅವರ ಮನೆಗೆ ಕರೆದುಕೊಂಡು ಹೋಗಿದ್ದರಂತೆ ಕಾರಣ ಇಷ್ಟೆ. ಮಾಸ್ತಿ ಕನ್ನಡದ ಹೆಸರಾಂತ ಸಾಹಿತಿಗಳು, ಬೆಂಗಳೂರಿನ ಬಸವನಗುಡಿಯಲ್ಲಿ ಅವರ ಮನೆ. ಸುಮಾರು ಇಪ್ಪತ್ತೈದು ಮೂವತ್ತು ಜನ ವಿದ್ಯಾರ್ಥಿಗಳಿದ್ದರಂತೆ. ಎಲ್ಲ ವಿದ್ಯಾರ್ಥಿಗಳಿಗೂ ಮಾಸ್ತಿಯವರು ತಮ್ಮ ಮನೆಯಲ್ಲಿ ಚೌಚೌ ಬಾತ್, ಕಾಫಿ ಮಾಡಿಸಿ ತಣಿಸಿದ್ದರಂತೆ. ಕರ್ಜಗಿಯವರು ಹೀಗೆ ಮಾತಾಡುತ್ತಾ 'ಸಾರ್ ನೀವು ತುಂಬಾನೇ ತೊಂದ್ರೆ ತಗೊಂಡ್ರಿ, ಕಾಫಿತಿಂಡಿ ಅಂತ' ಎಂದರಂತೆ. ಆ ಮಾತಿಗೆ ಮಾಸ್ತಿಯವರು ಹೇಳಿದರಂತೆ ನೋಡಿ ಸ್ವಾಮಿ ತೊಂಬತ್ತು ವರ್ಷದ ಹಿಂದೆ ಈ ಭೂಮಿ ಮೇಲೆ ಒಂದು ಹುಳ ಹುಟ್ಟಿತು, ಅದಕ್ಕೆ ಅಳುವುದೊಂದನ್ನು ಬಿಟ್ಟು ಬೇರೇನೂ ಬರುತ್ತಿರಲಿಲ್ಲ. ಮುಂದೆ ಅದೇ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಎಂಬ ಹೆಸರಿನಿಂದ ಹೆಸರಾಗಿ ಅದನ್ನು ನೋಡುವುದಕ್ಕೆ ದೂರದ ಊರಿನಿಂದ ಜನ ಬಂದು ಹೋಗುತ್ತಾರೆ ಎಂದರೆ, ಅದು ಭಗವಂತನ ಕೃಪೆ ಅಲ್ಲವೇ? ಕಾಫಿ ತಿಂಡಿ ಕೊಡಲಿಕ್ಕೆ. ಈಗ ನಮಗೆಲ್ಲಾ ಅನುಕೂಲವಿದೆ. ನಾನು ಪುಟ್ಟ ಹುಡುಗನಾಗಿದ್ದಾಗ ನಮ್ಮ ಮನೆಯಲ್ಲಿ ತುಂಬಾ ಬಡತನ, ಯಾರೋ ಹಿರಿಯರೊಬ್ಬರು ಒಂದು ದಿನ ಮಧ್ಯಾಹ್ನ ನಮ್ಮ ಮನೆಗೆ ಬಂದರು. ಅವರಿಗೆ ತಿನ್ನಲಿಕ್ಕೆ ಏನನ್ನಾದರೂ ಕೊಡಲು ಮನೆಯಲ್ಲಿ ಏನೂ ಇರಲಿಲ್ಲ. ಅಂಗಡಿಗೆ ಹೋಗಿ ತಂದು ಕೊಡಲು ಕೈಯ್ಯಲ್ಲಿ ಕಾಸಿಲ್ಲ. ಆಗ ನಮ್ಮ ತಂದೆ ದೇವರಮನೆಯಲ್ಲಿ ದೇವರಪೂಜೆಗೆ ಅಂತ ಇಟ್ಟುಕೊಂಡಿದ್ದ ತಾಮ್ರದ ತಟ್ಟೆ, ತೀರ್ಥದ ಬಟ್ಟಲು. ಎರಡನ್ನೂ ಬಂದಿರುವ ಆ ಹಿರಿಯರಿಗೆ ಗೊತ್ತಾಗದ ಹಾಗೆ ಹಿಂಬಾಗಿಲಿನಿಂದ ತೆಗೆದುಕೊಂಡು ಹೋಗಿ ಹತ್ತಿರದ ಗಿರವಿ ಅಂಗಡಿಯಲ್ಲಿ ಅಡವಿಟ್ಟು ಒಂದು ಅಚ್ಚು ಬೆಲ್ಲವನ್ನು ಮನೆಗೆ ತಂದರು. ಹಾಗೆ ತಂದವರೇ ಆ ಬೆಲ್ಲದ ನೀರಿನಲ್ಲಿ ಪಾನಕ ಮಾಡಿ ಆ ಹಿರಿಯರಿಗೆ ಕೊಟ್ಟು ಇಷ್ಟೇ ಸ್ವಾಮಿ ಇರೋದು ಎಂದರು. ಇದು ನಮ್ಮ ತಂದೆ ಕಲಿಸಿದ ಸಂಸ್ಕಾರ. ಇವತ್ತು ಮನೆಗೆ ಏನೆಲ್ಲಾ ಇದೆ ಇದ್ದಾಗ ಮಾಡೋದರಲ್ಲೇನು ಬಂತು ಬಿಡಿ ಎಂದರಂತೆ.

ಇವತ್ತು ಸಾವಿರ ಕೋಟಿ, ಲಕ್ಷ ಕೋಟಿ ನೂರಾರು ಎಕರೆ ಜಮೀನು, ಮನೆ, ಕಟ್ಟಡ, ಆಸ್ತಿಪಾಸ್ತಿಗಳೆಲ್ಲ ಮನುಷ್ಯನ ಬಾಹ್ಯ ಶ್ರೀಮಂತಿಕೆಯ ಇಂಡೆಕ್ಸ್‌ಗಳಂತೆ ಕಂಡು ಅವನ ಸ್ಥಾನಮಾನಗಳನ್ನು ಹೆಚ್ಚಿಸುತ್ತವೆ. ನಮ್ಮ ನಡುವೆಯೇ ಇರುವ ಕೆಲ ಸಂಸ್ಕಾರವಂಥ ಹಿರಿಯರ ಮಾತು, ನಡವಳಿಕೆ, ಸ್ವಭಾವ, ಜೀವನಾನುಭವಗಳು ನಮ್ಮಂಥವರಿಗೆ ಬ್ಯಾಂಕ್ ಬ್ಯಾಲೆನ್ಸ್‌ಗಳಂತೆ ಕಾಣುತ್ತವೆ. ಸರ್ವಜ್ಞ ಕೂಡ ಇಂಥದನ್ನೇ ಕುರಿತು ಬರೆದ ತ್ರಿಪದಿಗಳಿವೆ ನೋಡಿ!

ತಂದೆ ತಾಯಿಗಳ ಘನ । ದಿಂದ ವಂದಿಸುವಂತೆ ।
ಬಂದ ಕುತ್ತುಗಳು ಬಯಲಾಗಿ ಸ್ವರ್ಗವದು ।
ಮುಂದೆ ಬಂದಕ್ಕು ಸರ್ವಜ್ಞ

ಗುರುಗಳಿಗೆ ಹಿರಿಯರಿಗೆ । ಶಿರಬಾಗಿ ಎರಗಿದರೆ ।
ನರಸುರರು ಒಲಿದು ಸಿರಿಸುರಿದು ಕೈಲಾಸ ।
ಕರತಲಾಮಲಕ ಸರ್ವಜ್ಞ

ಹೀಗೆ ಈ ಒತ್ತಡದ ಜೀವನದಲ್ಲಿ ಹೊಟ್ಟೆಪಾಡಿಗಾಗಿ ತೆಗೆದುಕೊಳ್ಳುವ ರಿಸ್ಕು ಕ್ಯಾಲ್ಕುಲೇಷನ್ನು, ಗೆಲುವಿನ ಹಿಂದೆ ಧಾವಿಸುವ ಅವಸರದ ನಡುವೆ ಎದೆಯಾಳದಲ್ಲೊಂದು ಆತ್ಮತೃಪ್ತಿಯ–ಬುದ್ಧಿ–ಭಾವ–ಬದುಕು–ಮೇಳವಿಸಿದರೆ ಅದೇ ಆತ್ಮಸಂಸ್ಕಾರ. ರಕ್ತದಲ್ಲೇ ಬರುವ ಹಿರಿಯರು ಕೊಟ್ಟ ಜೀವನ ಸಾಕ್ಷಾತ್ಕಾರ. ಏನಂತೀರಿ ?

> **ಯಾಕೆ ಹೀಗೆ ಮಾತುಗಳು ಹುಟ್ಟುತ್ತವೆ ಎಂದರೆ ಅಪ್ಪನಿಂದ ಮಕ್ಕಳಿಗೆ ಅನುಕ್ರಮವಾಗಿ ಆಸ್ತಿ ಮತ್ತು ಅನುಕೂಲಗಳು ಸಕ್ರಮವಾಗಿ ವರ್ಗಾವಣೆಯಾಗಿರುತ್ತವೆ. ಆದರೆ ಕೆಲವರಿಗೆ ಮಾತ್ರ ಆಸ್ತಿ ಅನುಕೂಲಗಳ ಜೊತೆ ಅಪ್ಪ ಅಮ್ಮನ ನೀತಿ-ನ್ಯಾಯ, ಸಂಸ್ಕಾರ, ಮಾತು, ಬವಣೆ, ಬದುಕು ಎಲ್ಲವೂ ಎದೆಯ ಭೂಪಟದಲ್ಲಿ ಅಚ್ಚೊತ್ತಿದಂತೆ ಸಂಸ್ಕಾರದ ರೂಪದಲ್ಲಿ ಬಂದಿರುತ್ತದೆ. ಅದು ವಂಶವಾಹಿನಿಯಂತೆ ಬದುಕಿಗೊಂದು ಸಂಸ್ಕಾರ, ಸಾಕೆಂಬುವ ಸಿರಿತನ, ಹಂಚುಣ್ಣುವ ದೊಡ್ಡತನದ ಜೊತೆಗೆ ಪ್ರತಿಭೆ, ಕಲೆ, ಅಂಗಸೌಷ್ಠವ ಇತ್ಯಾದಿಗಳು ಜೀನ್ಸ್‌ನ ಜೊತೆ ವರ್ಗಾವಣೆಯಾಗಿರುತ್ತದೆ. ಆ ಮನುಷ್ಯ ಒಂದು ಘಂಟೆ ಮಾತಾಡುವಾಗಲು, ಐದಾರು ಬಾರಿಯಾದರೂ ಅವರ ತಂದೆ-ತಾಯಿ ಕಟ್ಟಿಕೊಟ್ಟ, ಹೇಳುತ್ತಿದ್ದ ಮಾತುಗಳನ್ನು ಮತ್ತೆ ಮತ್ತೆ ನೆನೆಸಿಕೊಳ್ಳುತ್ತಿದ್ದಾಗ ನನಗೂ ಅಂಥದೇ ಮರುಕಳಿಸಿ ನಿಮಗೂ ಅಂಥದೇನಾದರೂ ಇದ್ದರೆ ನೆನಪಿಸೋಣವೆಂದು ಈ ಅಂಕಣ ಬರೆದೆ.**



ಆ ಎಂಥಾ ಚಳಿ... ಚಳಿ...

ಎಲ್ಲೆಡೆ ಮೈ ಕೊರೆಯುವ ಚಳಿ ಶುರುವಾಗಿದೆ. ಈ ವರ್ಷದ ಚಳಿಗಾಲ ಕೂಡ ಕಮ್ಮಿಯಿರುವುದಿಲ್ಲ. ದೀಪಾವಳಿ ಮುಗಿಯುತ್ತಲೇ ಚಳಿಯ ಬೀಸು ಕಾಣುತ್ತದೆಯಾದರು, ಇದು ವೇಗ ಪಡೆಯುವುದು ಮಾತ್ರ ಡಿಸೆಂಬರ್ ಅವಧಿಯಲ್ಲಿ. ಈ ಚಳಿಯಿಂದ ದೇಹವನ್ನು ಬೆಚ್ಚಗಿಡುವುದು, ಚರ್ಮವನ್ನು ರಕ್ಷಿಸಿಕೊಳ್ಳುವುದು, ಆರೋಗ್ಯವನ್ನು ಕಾಪಾಡಿಕೊಳ್ಳುವುದು ಮೊದಲ ಆದ್ಯತೆಯಾಗಿರುತ್ತದೆ. ಎದುರಿಗಿನ ಏನೊಂದು ಸ್ಪಷ್ಟವಾಗಿ ಕಾಣಿಸದಂತೆ ದಟ್ಟವಾಗಿ ಸುರಿಯುವ ಮಂಜು, ಎಲ್ಲೆಂದರಲ್ಲಿರುವ ಅದರ ತೇವಾಂಶ ಬಿಸಿಲು ಕಾಣುವ ತನಕ ಮೈ, ಮನಗಳಲ್ಲಿ ಲವಲವಿಕೆಯೇ ಇರುವುದಿಲ್ಲ. ಈಗಾಗಲೇ ನಮ್ಮ ವಾತಾವರಣದಲ್ಲಿ ಚಳಿಯು ಬೆರೆತಾಗಿದೆ. ಇನ್ನೂ ಇದರ ತೀವ್ರತೆಯನ್ನು ಗುಣಗುತ್ತ ಅಥವಾ ಸವಿಯುತ್ತ ಅನುಭವಿಸಬೇಕಷ್ಟೆ, ಕಾಳಜಿ ಮಾಡದೆ ಹೋದರೆ ಮುಖ, ಕೈ, ಕಾಲುಗಳೆಲ್ಲ ಚಳಿಯ ರಭಸಕ್ಕೆ ಹೊಡೆದು ಛಿದ್ರವಾಗುತ್ತವೆ.

ಇಲ್ಲಿಂದ ಇರುಳು ಬೆಳೆದಷ್ಟು ಹಗಲು ಕಡಿಮೆಯಾಗುತ್ತದೆ. ಇದು ಚಳಿಗಾಲದ ವಿಶೇಷ. ಕಾಲ ಕರೆದಂತೆ ಬಂದಿರುವ ಅತಿಥಿ ಚಳಿಯಿಂದ ಮಾತ್ರ ಯಾರು ತಪ್ಪಿಸಿಕೊಳ್ಳುವಂತಿಲ್ಲ. ಮುಂದೆ ಪ್ರಕೃತಿಯ ಹೊಸ ಉಡುಗೆಗೆ ಇದೇ ಅಡಿಗಲ್ಲು. ಸುತ್ತಲಿನ ಮರ, ಗಿಡಗಳೆಲ್ಲ ಎಲೆ ಉದುರಿಸಿಕೊಂಡು ಬೋಳಾಗಿ ನಿಲ್ಲುತ್ತವೆ. ಸೂರ್ಯ ಮರೆಯಾದರೆ ಸಾಕು ಸುತ್ತಲಿನ ವಾತಾವರಣದಲ್ಲಿ ಇಬ್ಬನಿ ಸುರಿಯಲು ಆರಂಭಿಸುತ್ತದೆ. ಬೆಳಗಿನ ವೇಳೆ ಉರಿ ಬಿಸಿಲಾದರೆ ಸಂಜೆ, ಮುಂಜಾನೆಗಳಲ್ಲಿ ಇಬ್ಬನಿಯ ಆರ್ಭಟವಿರುತ್ತದೆ. ಡಿಸೆಂಬರ್ ಅಂತ್ಯದ ವೇಳೆಗೆ ಚಳಿ ತೀವ್ರವಾದಂತೆ ಎಲ್ಲೆಡೆ ಮಂಜು ಮುಸುಕಿನ ಧಾರೆಗಳು ಕಾಣಿಸುತ್ತದೆ. ಸೂರ್ಯ ಬಂದು ತನ್ನ ಕಿರಣಗಳಿಂದ ಅವುಗಳ ಕರಗಿಸುವತನಕ ಈ ಧಾರೆಗಳು ಹೋಗುವುದಿಲ್ಲ.

ಚಳಿಗೆ ರಾಮಬಾಣದಂತೆ ಕಾಣುವ ಸೂರ್ಯನ ಕಿರಣಗಳು ಚಳಿ ಬಿಡಿಸಲು ಅನುಕೂಲವಾಗುವುದು ನಿಜವಾದರು, ಈ ಸಮಯದ ಬಿಸಿಲಿನ ಶಾಖ ಉತ್ತಮವಾಗಿರುವುದಿಲ್ಲ. ಅದು ಕಾದಷ್ಟು ಅನಾರೋಗ್ಯಕ್ಕೆ ದಾರಿ ಮಾಡಿಕೊಡುತ್ತದೆ. ಈ ವೇಳೆ ಎಳೆಬಿಸಿಲಿನ ಹೊರತು ಬಿರಿಬಿಸಿಲ ಪರಿಣಾಮ ಅಪಾಯಕಾರಿ. ಈ ಚಳಿಗೆ ಜಾಸ್ತಿ ನಲಗುವವರು ಮಕ್ಕಳು ಮತ್ತು ವಯಸ್ಸಾದವರು. ವಾತಾವರಣದ ಬದಲಾವಣೆಯಿಂದ ಇವರುಗಳು ಬಹುಬೇಗ ಶೀತ, ನಗಡಿ, ಕೆಮ್ಮು, ಜ್ವರಗಳಿಗೆ ತುತ್ತಾಗುತ್ತಾರೆ. ಮೂಳೆ, ಕೀಲುಗಳ ಸಂಬಂಧಿ ಕಾಯಿಲೆಗಳು ಹೆಚ್ಚುಗುತ್ತವೆ. ಈ ಕಾರಣಕ್ಕೆ ದೇಹವನ್ನು ಬೆಚ್ಚಗಿಡಲು ಸ್ವೆಟರ್, ಮಾಫ್ಲರ್, ಕಾಲುಚೀಲ, ಟೋಪಿಗಳಂತವು ಬೇಕೇಬೇಕಾಗುತ್ತದೆ. ಆರೋಗ್ಯದ ಮೇಲೆ ಚಳಿಗಾಲದ ಪ್ರಭಾವ ಜೋರಾಗೆ ಇರುತ್ತದೆ. ಆದ್ದರಿಂದ ನಾವು ಎಚ್ಚರಿಕೆ ವಹಿಸಿದರೆ ಇವುಗಳನ್ನು ತಪ್ಪಿಸಿ ಚಳಿಯನ್ನು ನಿರಾಳವಾಗಿ ಕಳೆಯಬಹುದು.

ಈ ಚಳಿಗಾಲದಲ್ಲೇ ಹೆಚ್ಚು ಬೇಗನೆ ಹಸಿವಾಗುವುದು, ಬಿಸಿ ಬಿಸಿಯಾಗಿ ಬಾಯಾಡಿಸಲು ಏನಾದರು ತಿಂಡಿ ಪದಾರ್ಥಗಳ ಮೊರೆ ಹೋಗುವುದು ಸಾಮಾನ್ಯ. ತಣ್ಣಗಿನ ಆಹಾರಗಳೆಲ್ಲವು ಎಂಥವರಿಗೂ ಈ ಕಾಲದಲ್ಲಿ ಅಪಥ್ಯವೇ ಸರಿ. ಹಾಗೇ ತಣ್ಣಗಿನ ಪದಾರ್ಥಗಳ ಸೇವನೆಯನ್ನು ಆರೋಗ್ಯದ ದೃಷ್ಟಿಯಿಂದ ಆದಷ್ಟು ತಪ್ಪಿಸಬೇಕು. ದೇಹವನ್ನು ಚಳಿಯಿಂದ ರಕ್ಷಿಸಿಕೊಳ್ಳಲು ಬೆಚ್ಚನೆ ಹೊದಿಕೆಗಳ ಜತೆಗೆ ಉತ್ತಮ ಬಿಸಿ ಆಹಾರಗಳು ನೆರವಾಗುತ್ತವೆ. ಚಳಿಗಾಲಕ್ಕೆಂದು ನಮ್ಮಲ್ಲಿ ಕೆಲ ವಿಶೇಷ ಖಾದ್ಯಗಳು ಸಿದ್ಧವಾಗುತ್ತದೆ. ಈ ಋತುವಿನಲ್ಲಿ ಸಿಗುವ ತೊಗರಿ, ಅವರೆ ಕಾಯಿಗಳ ಬಳಸಿ ತಯಾರಿಸುವ ರುಚಿ ಪದಾರ್ಥಗಳ ಕೇಳುತ್ತಲೆ ಬಾಯಲ್ಲಿ ನೀರಾಡಿಸುತ್ತವೆ. ಹಸಿವು, ರುಚಿಗಳೆರೆಡು ಚಳಿಗಾಲದಲ್ಲಿ ಪೈಪೋಟಿಗೆ ಬಿದ್ದಂತೆ ಹೊಟ್ಟೆ, ನಾಲಿಗೆಯನ್ನು ಸಂತೃಪ್ತಿ ಪಡಿಸಲು ಪ್ರಯತ್ನ ಮಾಡುತ್ತವೆ. ಚರ್ಮದ ಕಾಂತಿಯನ್ನು ಕೇಳುವಂತಿಲ್ಲ. ಚಳಿಗೆ ಶುಷ್ಕತೆ ಕಳೆದುಕೊಂಡ ಅದರ ಸ್ಥಿತಿ ನೋಡುವಾಗ ನಮಗೆ ಅಸಹನೆ ಮೂಡಿಸುತ್ತದೆ. ಆಗಾಗ ಲಭ್ಯವಿರುವ ಎಣ್ಣೆ, ಕ್ರೀಮುಗಳ ಬಳಸಿ ಅದರ ತ್ವಚೆಯನ್ನು ಕಾಪಾಡದೆ ಹೋದರೆ, ಅವುಗಳ ಸ್ವರೂಪ ಕುರೂಪವಾಗಿ ಬಿಡುತ್ತದೆ. ಇನ್ನೂ ವಾತಾವರಣದಲ್ಲೂ ಶುಷ್ಕತೆಯಿಂದಾಗಿ ಇದೇ ರೂಪ ಇರುವುದರಿಂದ ಧೂಳು, ಬಿಸಿಲಿಗೆ ಮೈ ಒಡ್ಡದಿರುವುದು ಉತ್ತಮ. ಕೆಲವು ಅನಾರೋಗ್ಯ ಸಮಸ್ಯೆಗಳು ಚಳಿಯನ್ನು ಆಧಾರವಾಗಿಸಿಕೊಂಡು ಉಲ್ಬಣಗೊಳ್ಳುವುದರಿಂದ ವೈದ್ಯರ ಸಲಹೆ ಮೇರೆಗೆ ಆಹಾರ ಮತ್ತು ಜೀವನ ಶೈಲಿಯಲ್ಲಿ ಬದಲಾವಣೆ ಮಾಡಿಕೊಳ್ಳಬೇಕಾಗುತ್ತದೆ.

ಕೈ, ಕಾಲುಗಳು ಜೋಮು ಹಿಡಿಯುವುದು, ಕೀಲುಗಳಲ್ಲಿ ನೋವು ಕಾಣಿಸುವುದು ಈ ಕಾಲದಲ್ಲಿ ಹೆಚ್ಚಾಗಿರುತ್ತದೆ. ಈ ಕಾರಣಕ್ಕೆ ದೇಹದಲ್ಲಿ ಉಷ್ಣತೆ ಕಡಿಮೆಯಾಗದಂತೆ ನೋಡಿಕೊಳ್ಳಬೇಕು. ಚಳಿಯೇನೂ ಹೊತ್ತಿಗೆ ಮುಂಚೆ ಮನೆ ಸೇರಿಕೊಳ್ಳಲು, ಬಿಸಿಬಿಸಿಯಾದ ಊಟ, ತಿಂಡಿಗಳ ಮಾಡಲು, ಹೊತ್ತಾದರು ಏಳಲು ಮನಸ್ಸು ಬಾರದೆ ಹೊದ್ದು ಮಲಗಲು ಹಿತವೆನಿಸುತ್ತದೆ. ದಿನನಿತ್ಯದ ವ್ಯಾಯಾಮ, ವಾಯುವಿಹಾರಗಳೆಲ್ಲ ಈ ಸಂದರ್ಭ ಮಂಕು ಬಡಿದಂತಿರುತ್ತವೆ. ಆದರೆ, ಕೆಲವು ಕಾಯಿಲೆಯವರಿಗೆ ವೈದ್ಯರ ಸಲಹೆ ಇವುಗಳಿಂದ ತಪ್ಪಿಸಿಕೊಳ್ಳಬೇಡಿ ಎಂದೇ ಇರುತ್ತದೆ. ಎಷ್ಟೇ ಚಟುವಟಿಕೆಯಿಂದ ಇರಲು ಮನಸ್ಸು ಬಯಸಿದರು ಚಳಿ ದೇಹವನ್ನು ಈ ದೆಸೆಯಲ್ಲಿ ಸೋಲಿಸುತ್ತಲೇ ಇರುತ್ತದೆ. ಚಳಿಯನ್ನು ಎದುರಿಸಿ ಬದುಕುವುದು ಅಷ್ಟು ಸುಲಭವಲ್ಲ.

ಚಳಿಗಾಲ ಮರುಗಟ್ಟಿಸುವ ಸಂಕೇತದಂತೆ ಕಂಡರು ಅದರೊಳಗೂ ಒಂದಷ್ಟು ವಿಶೇಷತೆಯಿದೆ. ಇದು ಸಂವತ್ಸರದ ಕಡೆಯ ಹಂತ, ಉತ್ತರಾಯಣ ಕಾಲ, ಸೂರ್ಯ ಪಥ ಬದಲಿಸುವ ಸಮಯ, ಧನುರ್ಮಾಸದ ಪೂಜೆ, ಪುನಸ್ಕಾರಗಳು, ಸಂಕ್ರಾತಿ, ಹಲವು ಕಡೆ ನಡೆಯುವ ರಥ, ಜಾತ್ರೆಗಳು, ಶಿವರಾತ್ರಿಯತನಕ ಈ ಚಳಿಯ ಹಾಜರಿಯಿದ್ದೆ ಇರುತ್ತದೆ. ಚಳಿಯ ಆರಂಭ, ಅಂತ್ಯಗಳಿಗಿಂತ ಅದರ ಮಧ್ಯಮ ಬಲು ಜೋರು. ಡಿಸೆಂಬರ್, ಜನವರಿಯ ಚಳಿ ಎಂಥಾವರಿಗೂ ಒಮ್ಮೆ ಸಾಕು ಎನಿಸಿಬಿಡುತ್ತದೆ.

ಯಾವ ಕಾರ್ಯಗಳಲ್ಲೂ ಸುಲಭವಾಗಿ ತೊಡಗಿಕೊಳ್ಳಲು ಬಿಡು ವುದಿಲ್ಲ. ದೇಹವನ್ನು ಚಳಿಗೆ ಸಿಗದಂತೆ ಎಷ್ಟೇ ಮುಚ್ಚಿಕೊಂಡರು ಹೊರಗೆ ಬಂದರೆ ಸಾಕು ಮೆಲ್ಲಗಾದರು ಸರಿ ಜೀವ ನಡುಗಿಸುತ್ತಲೆ ಇರುತ್ತದೆ. ಅದರಲ್ಲೂ ನಮ್ಮ ಚಳಿಯ ತಡೆಯುವ ರಕ್ಷಾ ಕವಚಗಳ ಮರೆತು ಬಂದರಂತೂ ಕತೆ ಮುಗಿದಂತೆ. ಸುರಿಯುವ ಇಬ್ಬನಿ, ಮಂದವಾಗಿ ಬೀಸುವ ಗಾಳಿಯ ನಡುವೆ ದೇಹದ ನರಗಳೆಲ್ಲವು ಸೆಟೆದು ಹೋಗಿರುತ್ತವೆ. ಇಲ್ಲೇ ಪ್ರಕೃತಿಯ ಮುಂದೆ ಮನುಷ್ಯ ತೀರ ನಗಣ್ಯವೆನಿಸುವುದು. ಅದರ ಯಾವ ಬದಲಾವಣೆಗಳನ್ನೂ ಎದುರಿಸಿ ನಿಲ್ಲುವ ಶಕ್ತಿಯಿರದವನಂತೆ ಶರಣಾಗುವುದು.

ನಮ್ಮ ದಕ್ಷಿಣ ಭಾರತದ ಚಳಿಗಾಲ ಉತ್ತರ ಭಾರತದ ಚಳಿಗೆ ಹೋಲಿಸಿಕೊಂಡರೆ ಎಷ್ಟೋ ಉತ್ತಮವೆಂದು ಹಲವು ಅನುಭವಸ್ಥರು ಹೇಳುತ್ತಾರೆ. ಇದು ಸತ್ಯವೂ ಹೌದು. ನಮ್ಮಲ್ಲಿ ಅತಿಯಾದ ನೀರು ಮತ್ತು ಹಸಿರಿನಿಂದ ಆವೃತವಾದ ಪ್ರದೇಶಗಳನ್ನು ಹೊರತುಪಡಿಸಿದರೆ ಬೇರೆಡೆಗಳಲ್ಲಿ ಚಳಿ ಅಷ್ಟಾಗಿ ಅಬ್ಬರಿಸುವುದಿಲ್ಲ. ವಾತಾವರಣದ ಉಷ್ಣಾಂಶದ ಮೇಲೆ ಚಳಿಯು ನಿರ್ಧಾರವಾಗುತ್ತದೆ. ಅದರಲ್ಲೂ ಈ ದಿನಗಳಲ್ಲಿ ಹವಾಮಾನದಲ್ಲಿ ಆಗುತ್ತಿರುವ ವೈಪರೀತ್ಯಗಳಂತೂ ಚಳಿಯ ತೀವ್ರತೆಯನ್ನು ಒಂದುಪಟ್ಟು ಹೆಚ್ಚಿಸಿದರು ಅಚ್ಚರಿಯಿಲ್ಲ. ಈಗಾಗಲೇ ವರ್ಷದ ಮಳೆಗಾಲದಲ್ಲಾದ ಅನಾನೂಕೂಲತೆಗಳು ಈ ಬಾರಿಯ ಚಳಿಗಾಲದಲ್ಲೂ ಮುಂದುವರೆಯುವ ಲಕ್ಷಣಗಳಿದೆ. ಭೂಮಿಯ ತಾಪಾಮಾನವನ್ನು ಏರಿಸುವಲ್ಲಿ ನಮ್ಮ ಕೊಡುಗೆಯು ಅಪಾರವಾಗಿರುವುದರಿಂದ ಅದರ ತೀವ್ರತೆಯನ್ನು ಅನುಭವಿಸಲೇಬೇಕು. ಇದಕ್ಕೆ ನಾವು ಚಳಿಗಾಲವನ್ನು ದೂರಿ ಪ್ರಯೋಜನವಿಲ್ಲ. ಅಂಥೂ ಈ ವರ್ಷದ ಚಳಿಗಾಲ ಬಂದಾಗಿದೆ. ಇದನ್ನು ಎದುರಿಸಲು ಬೇಕಾದ ಸಿದ್ಧತೆ, ಜಾಗರೂಕತೆಗಳೆಲ್ಲವು ಅವರವರ ಜವಾಬ್ದಾರಿಗಳಾಗಿದ್ದು, ಇದರ ಜತೆಗೆ ಚಳಿಯನ್ನು ಆಸ್ವಾದಿಸಬೇಕಾಗಿದೆ.

● ಆರ್.ಪವನ್‌ಕುಮಾರ್,
ಮೊ. 9945842882

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು, ಡಿ.12– ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ ವತಿಯಿಂದ ನಿರ್ವಹಣಾ ಕೆಲಸದ ನಿಮಿತ್ತ (ಮಂಗಳವಾರ) ಗೋಕುಲಂ 1ನೇ ಮತ್ತು 2ನೇ ಹಂತ, ಮಹದೇಶ್ವರ ಬಡಾವಣೆ, ವಿಜಯನಗರ 1ನೇ ಮತ್ತು 2ನೇ ಹಂತ, ಹಿನಕಲ್, ಯಾದವಗಿರಿ, ಮಂಜುನಾಥಪುರ, ಮಹಾಜನ ಲೇಔಟ್, ಒಂಟಿಕೊಪ್ಪಲ್, ಗೋಕುಲಂ 3ನೇ ಹಂತ, ಜಯಲಕ್ಷ್ಮೀಪುರಂ, ಸಿ.ಎಫ್.ಟಿ.ಆರ್.ಐ, ಡಿ.ಸಿ.ಹೌಸ್, ನರ್ಸ್ ಕ್ವಾರ್ಟರ್ಸ್, ಆಕಾಶವಾಣಿ, ಇಎಸ್ಐ ಆಸ್ಪತ್ರೆ, ಹಸುಕರು ಪಾರ್ಕ್, ಗೋಕುಲಂ ಪಾರ್ಕ್, ಕಾಳಿದಾಸ ರೋಡ್, ಯಾದವಗಿರಿ ಕೈಗಾರಿಕಾ ಪ್ರದೇಶ, ವಿಜಯನಗರ ವಾಟರ್ ಸಪ್ಲೈ, ಆದಿಪಂಪಾ ರಸ್ತೆ, ಎಂ.ಎಂ.ಸಿ ಲೇಡಿಸ್ ಹಾಸ್ಟೆಲ್, ಜನರಲ್ ತಿಮ್ಮಯ್ಯ ರಸ್ತೆ, ಬೃಂದಾವನ, ಯೋಗನರಸಿಂಹಸ್ವಾಮಿ ದೇವಸ್ಥಾನ, ಆಯಿಸ್ಟಾರ್ ಬೇ ಹಾಗೂ ಸುತ್ತಮುತ್ತಲಿನ ಪ್ರದೇಶಗಳು.

ಜನತಾನಗರ, ಬೋಗಾದಿ 2ನೇ ಹಂತ North & South, ಗಂಗೋತ್ರಿ ಕ್ಯಾಂಪಸ್, ಗಂಗೋತ್ರಿ ಕ್ವಾಟ್ರಸ್, ದಾಸನಕೊಪ್ಪಲು, ಮರಟಿ ಕ್ಯಾತನಹಳ್ಳಿ, ರೂಪನಗರ, ದೀಪಾನಗರ, ಬೋಗಾದಿ ಗ್ರಾಮ, ಪ್ರೀತಿ ಲೇಔಟ್, ಆರ್.ಎಂ.ಪಿ ಲೇಔಟ್, ವಿಜಯನಗರ 3ನೇ ಹಂತ, ಹಿನಕಲ್, ವಿಜಯನಗರ 4ನೇ ಹಂತ, ವಿಜಯಶ್ರೀಪುರ, ಸುಧಾ ಲೇಔಟ್, ರೈಲ್ವೆ ಲೇಔಟ್, ಎಸ್.ಬಿ.ಎಂ ಲೇಔಟ್, ವಾಗ್ದೇವಿನಗರ, ಸಿಎಫ್‌ಟಿಆರ್‌ಐ ಲೇಔಟ್, ಯುನಿವರ್ಸಿಟಿ, ಜಯನಗರ, ಕೆ.ಜಿ.ಕೊಪ್ಪಲ್, ಚಿನ್ನಗಿರಿ ಕೊಪ್ಪಲು, ಶಿವರಾಂ ಬಡಾವಣೆ, ಪ್ರೀತಿ ಹಿಲ್ ವ್ಯೂ ಲೇಔಟ್, ಸಾರಾ ಲೇಔಟ್, ರಾಘವೇಂದ್ರ ಲೇಔಟ್, ಹಳೆ ಮಾನಂದವಾಡಿ ರಸ್ತೆ, ಕೆ ಬ್ಲಾಕ್, ಚಿಕರಂಗನಹಳ್ಳಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಬೆಳಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಚೆಸ್ಕಾಂ ಪ್ರಕಟಣೆ ತಿಳಿಸಿದೆ.

ಕ್ರೀಡಾಕೂಟ ಮುಂದೂಡಿಕೆ

ಮೈಸೂರು, ಡಿ.12– ಸಾರ್ವಜನಿಕ ಶಿಕ್ಷಣ ಇಲಾಖೆ ವತಿಯಿಂದ ಡಿ.13 ಮತ್ತು 14ರಂದು ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ 14ರಿಂದ 17 ವರ್ಷದ ಬಾಲಕ, ಬಾಲಕಿಯರ ಜಿಲ್ಲಾ ಮಟ್ಟದ ಅಥ್ಲೇಟಿಕ್ಸ್ ಕ್ರೀಡಾಕೂಟವನ್ನು ಮುಂದೂಡಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.







PUBLIC NOTICE

Notice is hereby given that Smt. THIMMALAKSHMAMMA, wife of Late Narasimhaiah, is desirous to sell the under mentioned property to my client and any person or persons claiming any interest on the under mentioned property or any part thereof, is hereby required to communicate the same to me with documentary evidence at my office, situated at Door No. 2765/1A D13/A1, "KEY-ANS", 5th MAIN ROAD, V.V. PURAM (V.V. MOHALLA), MYSORE-570002, within 15 (Fifteen) days from the date of this publication, as otherwise the said sale will be completed without any reference or regard to any such purported claim or interest, which shall be deemed to have been waived for all intents and purposes.

SCHEDULE PROPERTY

Wet Agricultural Land Bearing Survey No.106, measuring an extent of 3 Acre 17 Guntas, situated Hebbalaguppe Village, Kasaba Hobli, Heggadadevana Kote Taluk, Mysore District, bounded on: East - Kapila river, West - Survey No.105, North- Kapila river and South - Road.

Sd/- Dhirendra Kumar R. Mehta
Advocate
KEY-ANS LAW SOLUTIONS
Date: 12.12.2022
Place: Mysore



ಮೈಸೂರು ಮಿತ್ರ ಮಂಗಳವಾರ 13 ಡಿಸೆಂಬರ್ 2022



ಕೃಷ್ಣರಾಜಪೇಟೆ ವಿಧಾನಸಭಾ ಕ್ಷೇತ್ರದ ಶಾಸಕರ ವಿವರ



ಎಸ್.ಎಂ.ಲಿಂಗಪ್ಪ ಕಾಂಗ್ರೆಸ್ {1952/72} ಜನತಾಪಕ್ಷ {1978}

ಎಂ.ಕೆ.ಬೊಮ್ಮೇಗೌಡ ಕಾಂಗ್ರೆಸ್ {1957} ಪಕ್ಷೇತರ {1967}

ಎನ್. ನಂಜೇಗೌಡ ಪಕ್ಷೇತರ {1962}

ಎಂ. ಪುಟ್ಟಸ್ವಾಮಿಗೌಡ ಕಾಂಗ್ರೆಸ್ {1983/89}

ಕೆ.ಆರ್.ಪೇಟೆ ಕೃಷ್ಣ ಜನತಾದಳ {1985/94} ಜೆಡಿಎಸ್ {2004}

ಬಿ.ಪ್ರಕಾಶ್ ಪಕ್ಷೇತರ {1996} {ಉಪಚುನಾವಣೆ}

ಕೆ.ಬಿ.ಚಂದ್ರಶೇಖರ್ ಕಾಂಗ್ರೆಸ್ {1999/2008}

ಕೆ.ಸಿ.ನಾರಾಯಣಗೌಡ ಜೆಡಿಎಸ್ {2013/18} ಬಿಜೆಪಿ {2019}

ಹೇಮೆ ನಾಡು ಕೆ.ಆರ್.ಪೇಟೆ ಕ್ಷೇತ್ರದ ವಿಶೇಷ

ಕೆ.ಆರ್.ಪೇಟೆ ಈಗಾಗಲೇ 1952ರಿಂದ ಇಲ್ಲಿಯವರೆಗೆ 17 ಚುನಾವಣೆ ಕಂಡಿದ್ದು, ಮಂಡ್ಯ ಜಿಲ್ಲೆ ಕಾವೇರಿ ನೀರಿನ ಬೀಡಾದರೆ, ಕೆ.ಆರ್.ಪೇಟೆ ಹೇಮಾವತಿ ನದಿ ನೀರನ್ನು ನಂಬಿಕೊಂಡಿದೆ. ಇಲ್ಲಿ ಜನತಾ ಪರಿವಾರ ಹಾಗೂ ಕಾಂಗ್ರೆಸ್ ನಡುವೆ ನೇರ ಹಣಾಹಣಿ ಇತ್ತಾದರೂ ಉಪಚುನಾವಣೆಯಲ್ಲಿ ಬಿಜೆಪಿ ಗೆಲ್ಲುವ ಮೂಲಕ ಕಮಲ ಅರಳಿದೆ. ಹಿರಿಯ ಗಾಂಧಿವಾದಿ ಕೆ.ಆರ್.ಪೇಟೆ ಕೃಷ್ಣ ಕ್ಷೇತ್ರದ ಶಾಸಕರಾಗಿ 3 ಬಾರಿ ಆಯ್ಕೆಯಾಗಿದ್ದರು. ಒಮ್ಮೆ ಸಚಿವರಾಗಿಯೂ ಕಾರ್ಯ ನಿರ್ವಹಿಸಿರುವ ಕೃಷ್ಣ ಅವರು, 2004ರಲ್ಲಿ ರಾಜ್ಯವಿಧಾನಸಭೆಯ ಸ್ಪೀಕರ್ ಆಗಿಯೂ ಕಾರ್ಯ ನಿರ್ವಹಿಸಿದ್ದಾರೆ. ಜೊತೆಗೆ 1996ರಲ್ಲಿ ಮಂಡ್ಯ ಲೋಕಸಭಾ ಕ್ಷೇತ್ರದಿಂದ ಸಂಸದರಾಗಿಯೂ ಆಯ್ಕೆಯಾಗಿದ್ದಾರೆ.



ಕೃಷ್ಣ ಹೊರತುಪಡಿಸಿದರೆ, ಪ್ರಸ್ತುತ ಶಾಸಕರಾಗಿರುವ ಕೆ.ಸಿ.ನಾರಾಯಣಗೌಡ, ಕ್ರೀಡೆ ಹಾಗೂ ರೇಷ್ಮೆ ಸಚಿವರಾಗಿ ಕಾರ್ಯ ನಿರ್ವಹಿಸುತ್ತಿದ್ದರೆ, ಕೆ.ಆರ್.ಪೇಟೆಯವರೇ ಆದ ಕೆ.ರೆಹಮಾನ್ ಖಾನ್, 1978ರಿಂದ 1990ರವರೆಗೆ 2 ಬಾರಿ ವಿಧಾನ ಪರಿಷತ್ ಸದಸ್ಯರಾಗಿ, ಬಳಿಕ ರಾಷ್ಟ್ರ ರಾಜಕಾರಣದತ್ತ ಮುಖ ಮಾಡಿ, 1994, 2000, 2006, 2012 ಹೀಗೆ ಸತತ 4 ಬಾರಿ ರಾಜ್ಯಸಭಾ ಸದಸ್ಯರಾಗಿ 2004ರಿಂದ 2009ರವರೆಗೆ ರಾಜ್ಯಸಭೆ ಉಪಸಭಾಪತಿಯಾಗಿ, 2011ರಿಂದ 2014ರವರೆಗೆ ಕೇಂದ್ರ ಅಲ್ಪಸಂಖ್ಯಾತರ ಕಲ್ಯಾಣ ಸಚಿವರಾಗಿ ಕಾರ್ಯನಿರ್ವಹಿಸಿದ್ದು ಕೆ.ಆರ್.ಪೇಟೆಗೆ ಹೆಮ್ಮೆಯ ವಿಚಾರವಾಗಿದೆ

ಜೆಡಿಎಸ್ ಟಿಕೆಟ್‌ಗಾಗಿ ಬಸ್ ಸಂತೋಷ್, ಮಂಜು ತೀವ್ರ ಪೈಪೋಟಿ

ಜೆಡಿಎಸ್ ಟಿಕೆಟ್‌ಗಾಗಿ ಅನೇಕರ ನಡುವೆ ಪೈಪೋಟಿ ಇತ್ತಾದರೂ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಹಲವು ಬಾರಿ ಆಕಾಂಕ್ಷಿತರ ಸಭೆ ನಡೆಸಿ, ಅಂತಿಮವಾಗಿ ಇಬ್ಬರನ್ನು ಆಯ್ಕೆ ಮಾಡಿದ್ದು, ಇವರಲ್ಲಿ ಒಬ್ಬರಿಗೆ ಟಿಕೆಟ್ ಎಂದು ಭರವಸೆ ನೀಡಿದ್ದಾರೆ. ಅವರಿಬ್ಬರೆಂದರೆ, ಜೆಡಿಎಸ್ ತಾಲೂಕು ಯುವ ಘಟಕದ ಮಾಜಿ ಅಧ್ಯಕ್ಷ ಹಾಗೂ ಹಾಲಿ ಪುರಸಭೆ ಸದಸ್ಯ ಬಸ್ ಸಂತೋಷ್ ಕುಮಾರ್ ಹಾಗೂ ಮನ್‌ಮುಲ್ ನಿರ್ದೇಶಕ ಹೆಚ್.ಟಿ.ಮಂಜು.

ಸಂತೋಷ್ ಕುಮಾರ್ ಕ್ಷೇತ್ರದಲ್ಲಿ ಕಳೆದ 3 ವರ್ಷಗಳಿಂದ ಸಂಘಟನೆಯಲ್ಲಿ ತೊಡಗಿಕೊಂಡಿದ್ದು, ತಿಂಗಳಿಗೊಮ್ಮೆ ಜೆಡಿಎಸ್ ಪಕ್ಷದ ಹೆಸರಲ್ಲಿ ಸಭೆ ಸಮಾರಂಭ ನಡೆಸುತ್ತಾ, ಪಕ್ಷ ಸಂಘಟನೆ ಮಾಡುತ್ತಾ ಬಂದಿದ್ದಾರೆ. ಸಾವಿರಾರು ಮಕ್ಕಳಿಗೆ ಉಚಿತ ಪುಸ್ತಕ ವಿತರಣೆ, ನಿರಾಶ್ರಿತರಿಗೆ ಸಹಾಯಧನ ನೀಡುತ್ತಾ ಬಂದಿದ್ದಾರೆ. ಇತ್ತೀಚೆಗೆ ಕೆ.ಆರ್.ಪೇಟೆ ಮಿನಿವಿಧಾನಸೌಧದ ಬಳಿ ತಮ್ಮ ಸ್ವಂತ ಖರ್ಚಿನಲ್ಲಿ ಜೆಡಿಎಸ್ ಕಚೇರಿ ತೆರೆದು, 15 ದಿನಕ್ಕೊಮ್ಮೆ ಪಕ್ಷದ ಹೆಸರಿನಲ್ಲಿ ವಿವಿಧ ಕಾರ್ಯಕ್ರಮ ಮಾಡುತ್ತಿದ್ದಾರೆ. ಕನ್ನಡ ರಾಜ್ಯೋತ್ಸವದ ಅಂಗವಾಗಿ ಕನ್ನಡ ಬಳಸಿ, ಪ್ರಾದೇಶಿಕ ಪಕ್ಷ ಉಳಿಸಿ ಕಾರ್ಯಕ್ರಮ ಹಾಗೂ ಇತ್ತೀಚೆಗೆ ನಡೆದ ಸಪ್ತ ಸಂಕಲ್ಪ ಕಂಕಣ ಯಾತ್ರೆ ಕ್ಷೇತ್ರದಲ್ಲಿ ಗಮನ ಸೆಳೆದಿದೆ. ಈ ನಡುವೆ ಸಂತೋಷ್ ಪರ ತಾಲೂಕು ಜೆಡಿಎಸ್‌ನ ಹಿರಿಯ ಮುಖಂಡರಾದ ಬಿ.ಎಲ್.ದೇವರಾಜು, ಬಸ್ ಕೃಷ್ಣೇಗೌಡ ಸೇರಿದಂತೆ ಹಲವರು ಬ್ಯಾಟ್ ಬೀಸುತ್ತಿದ್ದಾರೆ. ಸಂಘಟನೆ ಹಾಗೂ ವರ್ಚಸ್ಸು ಹೆಚ್ಚಿಸಿಕೊಳ್ಳುತ್ತಾ, ಮುಖಂಡರ ಶಕ್ತಿ ಪ್ರದರ್ಶನದ ಮೂಲಕ ಸಂತೋಷ್‌ಗೆ ಲಾಭಿ ನಡೆಸಿದ್ದಾರೆ.

ಸಂತೋಷ್ ಅವರಿಗೆ ಪೈಪೋಟಿ ನೀಡುವ ನಿಟ್ಟಿನಲ್ಲಿ ಮನ್‌ಮುಲ್ ಹಾಲಿ ನಿರ್ದೇಶಕ ಹಾಗೂ ಮಾಜಿ ಜಿಪಂ ಸದಸ್ಯ ಹೆಚ್.ಟಿ.ಮಂಜು ಸಹ ಕ್ಷೇತ್ರದಲ್ಲಿ ಓಡಾಡುತ್ತಿದ್ದು, ಟಿಕೆಟ್‌ಗಾಗಿ ಪೈಪೋಟಿ ನಡೆಸುತ್ತಿದ್ದಾರೆ. ಉಪ ಚುನಾವಣೆ ಸಂದರ್ಭ ಬಿ.ಎಲ್.ದೇವರಾಜು ಅವರಿಗೆ ಟಿಕೆಟ್ ನೀಡಿದಾಗ ಮುಂದಿನ ಸಾರ್ವತ್ರಿಕ ಚುನಾವಣೆಯಲ್ಲಿ ತಮಗೆ ಟಿಕೆಟ್ ಎಂದು ಜೆಡಿಎಸ್ ನಾಯಕರು ಭರವಸೆ ನೀಡಿದ್ದು, ಕ್ಷೇತ್ರದಲ್ಲಿ ಪಕ್ಷ ಸಂಘಟನೆ ಮಾಡಿದ್ದು, ನನಗೆ ಟಿಕೆಟ್ ಸಿಗಲಿದೆ ಎಂಬ ಭರವಸೆಯಲ್ಲಿದ್ದಾರೆ.

ಹೆಚ್.ಟಿ.ಮಂಜು ಪರ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಸಹ ಬ್ಯಾಟ್ ಬೀಸಿದ್ದು, ಹೆಚ್.ಟಿ.ಮಂಜು, ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಹಾಗೂ ನಿಖಿಲ್‌ಕುಮಾರಸ್ವಾಮಿ ಅವರೊಂದಿಗೂ ನೇರ ಸಂಪರ್ಕ ವಿಟ್ಟುಕೊಂಡಿರುವುದು ಇವರಿಗೆ ಪ್ಲಸ್ ಪಾಯಿಂಟ್ ಆಗಬಹುದು ಎನ್ನಲಾಗಿದೆ. ಈ ಇಬ್ಬರ ನಡುವೆ ಬಿ.ಎಲ್.ದೇವರಾಜು ತಮಗೆ ಮತ್ತೊಂದು ಅವಕಾಶ ನೀಡುವಂತೆ ಕೋರಿದ್ದು, ಅಂತಿಮವಾಗಿ ಟಿಕೆಟ್‌ಗಾಗಿ ಸಂತೋಷ್, ಮಂಜು ನಡುವೆ ಪೈಪೋಟಿ ಏರ್ಪಡಲಿದೆ.

ಕಮಲ ಕದಲಿಸಲು ಕೈ, ತೆನೆಹೊತ್ತ ಮಹಿಳೆ ಓಲೈಸಲು ಆಕಾಂಕ್ಷಿಗಳ ಕಸರತ್ತು

ಎಂ.ಕೆ.ಮೋಹನ್‌ರಾಜ್

ಮಂಡ್ಯ, ಡಿ.12– ಕೃಷ್ಣರಾಜಪೇಟೆ ವಿಧಾನ ಸಭಾ ಕ್ಷೇತ್ರ ಭೌಗೋಳಿಕವಾಗಿ ಮಂಡ್ಯ ಜಿಲ್ಲೆಗೆ ಸೇರಿದ್ದರೂ, ರಾಜಕೀಯವಾಗಿ ಕೊಂಚ ಪಕ್ಕದ ಹಾಸನ ಜಿಲ್ಲೆ ಹಿಡಿತದಲ್ಲಿದೆ. ಈ ವಿಶೇಷ ಕ್ಷೇತ್ರದಲ್ಲಿ ಹ್ಯಾಟ್ರಿಕ್ ಗೆಲುವು ಸಾಧಿಸಿ, ಉಪ ಚುನಾವಣೆಯಲ್ಲಿ ಕಮಲ ಅರಳಿಸುವ ಮೂಲಕ ಜಿಲ್ಲೆಯಲ್ಲಿ ದಾಖಲೆ ಬರೆದ ಕ್ರೀಡಾ ಸಚಿವ ಕೆ.ಸಿ.ನಾರಾಯಣಗೌಡ ಮತ್ತೊಂದು ಚುನಾವಣೆಗೆ ಸಜ್ಜಾಗಿದ್ದು, ಇವರ ನಾಗಾಲೋಟಕ್ಕೆ ಬ್ರೇಕ್ ಹಾಕಲು ಕಾಂಗ್ರೆಸ್ ಮತ್ತು ಜೆಡಿಎಸ್ ಮುಖಂಡರು ಭಾರೀ ರಣತಂತ್ರ ಹೆಣೆಯುತ್ತಿದ್ದಾರೆ.

2 ಉಪ ಚುನಾವಣೆ ಸೇರಿದಂತೆ ಒಟ್ಟು 17 ಚುನಾವಣೆ ಕಂಡಿರುವ ಕೆ.ಆರ್.ಪೇಟೆ ಹಾಸನದ ಹೊಳೇನರಸೀಪುರ ಕ್ಷೇತ್ರಕ್ಕೆ ಅಂಟಿಕೊಂಡಂತಿರುವುದರಿಂದ ಈ ಹಿಂದಿನಿಂದಲೂ ಹೆಚ್.ಡಿ.ದೇವೇಗೌಡರ ಕುಟುಂಬದ ಹಿಡಿತದಲ್ಲಿತ್ತು. ಕ್ರಮೇಣ ಕ್ಷೇತ್ರದಲ್ಲಿ ಕೆ.ಸಿ.ನಾರಾಯಣ ಗೌಡ 2 ಬಾರಿ ಜೆಡಿಎಸ್‌ನಿಂದ ಶಾಸಕರಾಗಿ 2019ರಲ್ಲಿ ನಡೆದ ಕ್ಷಿಪ್ರ ರಾಜಕೀಯ ಬೆಳವಣಿಗೆಯಲ್ಲಿ ಜೆಡಿಎಸ್ ತೊರೆದು ಬಿಜೆಪಿ ಸೇರಿ, ಕಮಲ ಅರಳಿಸಿದರು.

ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹುಟ್ಟೂರು ಇದೇ ಕೆ.ಆರ್.ಪೇಟೆ ಬೂಕನಕೆರೆ ಗ್ರಾಮವಾಗಿದ್ದರೂ ಯಡಿಯೂರಪ್ಪ ಎಷ್ಟೇ ಪ್ರಚಾರ ನಡೆಸಿ, ಎಷ್ಟೇ ಮನವಿ ಮಾಡಿದ್ದರೂ ಕೆ.ಆರ್.ಪೇಟೆ ಸೇರಿದಂತೆ ಮಂಡ್ಯ ಜಿಲ್ಲೆಯಲ್ಲಿ ಕಮಲ ಅರಳಿರಲಿಲ್ಲ. ರಾಜ್ಯದ ಎಲ್ಲಾ ಜಿಲ್ಲೆಯಲ್ಲೂ ಬಿಜೆಪಿ ಗೆದ್ದಿತ್ತಾದರೂ ಬಿಎಸ್‌ವೈ ಹುಟ್ಟೂರು ಮಂಡ್ಯದಲ್ಲಿ ಮಾತ್ರ ಕಮಲ ಅರಳಲು ಸಾಧ್ಯವೇ ಆಗಿರಲಿಲ್ಲ. ಆದರೆ ಉಪಚುನಾವಣೆಯಲ್ಲಿ ಬಿಜೆಪಿಯ ಈ ಕೊರಗು ನೀಗಿ, ನಾರಾಯಣಗೌಡರ ಮೂಲಕ ಕೆ.ಆರ್.ಪೇಟೆಯಲ್ಲಿ ಕಮಲ ಅರಳಿದ್ದು ವಿಶೇಷ.

2013, 2018ರಲ್ಲಿ ಜೆಡಿಎಸ್ ಶಾಸಕರಾಗಿದ್ದ ನಾರಾಯಣಗೌಡ, 2019ರ ಉಪಚುನಾವಣೆಯಲ್ಲಿ ಬಿಜೆಪಿ ಸೇರಿ ಶಾಸಕರಾಗಿ, ಬಳಿಕ ಸಚಿವರೂ ಆಗಿ ಕಾರ್ಯ ನಿರ್ವಹಿಸುತ್ತಿದ್ದು, 2023ಕ್ಕೂ ಅವರೇ ಬಿಜೆಪಿ ಅಭ್ಯರ್ಥಿ. ಬಳಿಕ ನಾರಾಯಣ ಗೌಡ ಜೆಡಿಎಸ್ ವಿರುದ್ಧ ಹಲವು ಟೀಕಾ ಪ್ರಹಾರಗಳನ್ನು ನಡೆಸಿದ್ದು, ಇವೆಲ್ಲವನ್ನು ಗಂಭೀರವಾಗಿ ಪರಿಗಣಿಸಿರುವ ಜೆಡಿಎಸ್, ಈ ಬಾರಿ ಶತಾಯಗತಾಯ ನಾರಾಯಣ ಗೌಡರನ್ನು ಸೋಲಿಸಲೇಬೇಕೆಂದು ಪಣತೊಟ್ಟಂತೆ ಕಾಣುತ್ತಿದ್ದು, ಜೆಡಿಎಸ್‌ನಿಂದ ಟಿಕೆಟ್‌ಗಾಗಿ ಯುವ ಮುಖಂಡ ಬಸ್ ಸಂತೋಷ್‌ಕುಮಾರ್ ಹಾಗೂ ಮನ್‌ಮುಲ್ ನಿರ್ದೇಶಕ ಹೆಚ್.ಟಿ.ಮಂಜು ಭರ್ಜರಿ ಪೈಪೋಟಿ ನಡೆಸುತ್ತಿದ್ದಾರೆ. ಮತ್ತೊಂದೆಡೆ ಕಾಂಗ್ರೆಸ್‌ನಿಂದ ಟಿಕೆಟ್‌ಗಾಗಿ ಕಾಂಗ್ರೆಸ್ ಮುಖಂಡರಾದ ವಿಜಯ್ ರಾಮೇಗೌಡ ಹಾಗೂ ಕಿಕ್ಕೇರಿ ಸುರೇಶ್ ನಡುವೆ ಪೈಪೋಟಿ ಏರ್ಪಟ್ಟಿದೆ.

ಒಟ್ಟಾರೆ ಹೇಮಾವತಿ ನದಿ ಬೀಡು ಕೆ.ಆರ್.ಪೇಟೆಯಲ್ಲಿ ಬಿಜೆಪಿ ಕಟ್ಟಿ ಹಾಕಲು ಜೆಡಿಎಸ್ ಮತ್ತು ಕಾಂಗ್ರೆಸ್ ಸನ್ನದ್ಧವಾಗಿದ್ದು, ಚುನಾವಣಾ ಕಾವು ಈಗಾಗಲೇ ಕೆ.ಆರ್.ಪೇಟೆಯಲ್ಲಿ ರಂಗೇರಿದೆ.

ಕೊನೆ ಗಳಿಗೆಯಲ್ಲಿ ಕ್ಷೇತ್ರಕ್ಕೆ ಬರ್ತಾರಾ ಹೆಚ್.ಡಿ.ರೇವಣ್ಣ...?

ಕ್ಷೇತ್ರದಲ್ಲಿ ದೇವೇಗೌಡರ ಕುಟುಂಬದ ಪ್ರಭಾವ ಹೆಚ್ಚಾಗಿದೆ. ಅದರಲ್ಲೂ ಹೆಚ್.ಡಿ.ರೇವಣ್ಣ ಹಿಡಿತ ಕ್ಷೇತ್ರದ ಮೇಲಿದ್ದು, ಕಡೆ ಗಳಿಗೆಯಲ್ಲಿ ಹೆಚ್.ಡಿ.ರೇವಣ್ಣ ಕೆ.ಆರ್.ಪೇಟೆಯಿಂದ ಕಣಕ್ಕಿಳಿದರೂ ಅಚ್ಚರಿ ಇಲ್ಲ.

ಜೆಡಿಎಸ್‌ನಲ್ಲಿ ಸಂತೋಷ್ ಹಾಗೂ ಮಂಜು ನಡುವೆ ಟಿಕೆಟ್‌ಗಾಗಿ ಪೈಪೋಟಿ ಇದ್ದು, ಇಬ್ಬರಲ್ಲಿ ಒಬ್ಬರು ಟಿಕೆಟ್ ತ್ಯಾಗಕ್ಕೆ ಒಪ್ಪದಿದ್ದರೆ ಅಂತಿಮವಾಗಿ ರೇವಣ್ಣ ಬರಬಹುದು ಎಂಬ ಮಾತಿದೆ. ಇದು ಕೇವಲ ಮೇಲ್ನೋಟದ ಲೆಕ್ಕಾಚಾರವಾದರೆ, ಇದರ ಹಿಂದಿರುವ ರಾಜಕೀಯ ಲೆಕ್ಕಾಚಾರವೇ ಬೇರೆ.

ಹಳೇ ಮೈಸೂರು ಭಾಗದಲ್ಲಿ ದೇವೇಗೌಡರ ಕುಟುಂಬದ ವಿರುದ್ಧ ರಾಜಕೀಯವಾಗಿ ಯಶಸ್ಸು ಸಾಧಿಸಲು ಸಾಧ್ಯವಿಲ್ಲ ಎಂಬ ಮಾತಿದೆ. ದೇವೇಗೌಡರ ಕುಟುಂಬವನ್ನು ಎದುರು ಹಾಕಿಕೊಂಡು ಉಪಚುನಾವಣೆಯಲ್ಲಿ ನಾರಾಯಣ ಗೌಡ ಗೆದ್ದು ಮಂತ್ರಿ ಸಹ ಆದರು. ಗೆದ್ದ ಮೇಲಂತೂ ದಳಪತಿಗಳ ಮೇಲೆ ನಿರಂತರವಾಗಿ ಟೀಕೆ–ಟಿಪ್ಪಣಿಗಳನ್ನು ಮಾಡುತ್ತಾ ಬಂದಿದ್ದರು. ಶತಾಯ ಗತಾಯ ಈ ಬಾರಿ ನಾರಾಯಣ ಗೌಡರನ್ನು ಸೋಲಿಸಲು ಗೌಡರ ಮನೆಯವರೇ ಅಖಾಡಕ್ಕೆ ಇಳಿಯಬಹುದೆಂಬ ಚರ್ಚೆ ಇದ್ದು, ಅಂತಿಮವಾಗಿ ರೇವಣ್ಣ ಬಂದರೂ ಬರಬಹುದು.

ಇದರಿಂದ ಜೆಡಿಎಸ್‌ಗೆ ಹಲವು ಲಾಭವಿದ್ದು, ರೇವಣ್ಣ ಪತ್ನಿ ಭವಾನಿ ರೇವಣ್ಣ ಹಾಸನ ಕ್ಷೇತ್ರದ ಮೇಲೆ ಕಣ್ಣಿಟ್ಟಿದ್ದಾರೆ. ಆದರೆ ಹಾಸನದಲ್ಲಿ ಮಾಜಿ ಶಾಸಕ ಪ್ರಕಾಶ್ ಪುತ್ರ ಸ್ವರೂಪ್ ಟಿಕೆಟ್‌ಗೆ ಪಟ್ಟು ಹಿಡಿದಿದ್ದಾರೆ. ಈ ನಿಟ್ಟಿನಲ್ಲಿ ಪ್ರಕಾಶ್ ಪುತ್ರನಿಗೆ ಹಾಸನ ಬಿಟ್ಟುಕೊಟ್ಟು, ರೇವಣ್ಣ ತಮ್ಮ ಹೊಳೇನರಸೀಪುರ ಕ್ಷೇತ್ರವನ್ನು ಪತ್ನಿಗೆ ಬಿಟ್ಟುಕೊಟ್ಟು, ಕೆ.ಆರ್.ಪೇಟೆಯಿಂದ ಸ್ಪರ್ಧಿಸಿದರೆ, ನಾರಾಯಣಗೌಡರಿಗೆ ಸವಾಲೆಸೆಯಬಹುದೆಂಬ ಲೆಕ್ಕಾಚಾರ ಇದೆ. ಜೊತೆಗೆ ಇಬ್ಬರ ಟಿಕೆಟ್ ಕಗ್ಗಂಟು ಸಹ ಬಗೆಹರಿಯಲಿದ್ದು, ಒಂದೇ ಕಲ್ಲಿನಲ್ಲಿ ಮೂರು ಹಕ್ಕಿ ಹೊಡೆಯಬಹುದೆಂಬ ಲೆಕ್ಕಾಚಾರ ದಳಪತಿಗಳದ್ದಾಗಿದೆ.



ಆಡಳಿತ ವಿರೋಧಿ ಅಲೆ ಮೆಟ್ಟಿ ನಿಲ್ಲುತ್ತಾರಾ ನಾರಾಯಣಗೌಡ?

ಹ್ಯಾಟ್ರಿಕ್ ಗೆಲುವು ಸಾಧಿಸಿರುವ ಸಚಿವ ಕೆ.ಸಿ.ನಾರಾಯಣಗೌಡ ವಿರುದ್ಧ ಕ್ಷೇತ್ರದಲ್ಲಿ ಆಡಳಿತ ವಿರೋಧಿ ಅಲೆ ಇದೆ.

ಕೆ.ಆರ್.ಪೇಟೆ ರಸ್ತೆಗಳು ಸಮರ್ಪಕವಾಗಿಲ್ಲ ಎಂದು ಪದೇ ಪದೆ ಆರೋಪ ಕೇಳಿ ಬರುತ್ತಿದ್ದು, ಈ ಬಗ್ಗೆ ಕೆ.ಆರ್.ಪೇಟೆ ಹಲವು ನಾಗರಿಕ ಒಕ್ಕೂಟಗಳು ಸಭೆ ನಡೆಸಿ, ಆಕ್ರೋಶ ವ್ಯಕ್ತಪಡಿಸಿವೆ. ಜೊತೆಗೆ ಕೆಲವೆಡೆ ಕುಡಿಯುವ ನೀರಿನ ಸಮಸ್ಯೆ ಸಹ ಇದ್ದು, ಇದರ ಜೊತೆಗೆ ಮಳೆ ಬಂದಾಗ ಬಸ್ ನಿಲ್ದಾಣ ಭರ್ತಿಯಾಗಿ, ಬಸ್ ಸಂಚಾರವೇ ಸ್ಥಗಿತಗೊಳ್ಳುತ್ತದೆ. ಆದರೆ ಈವರೆಗೆ ಬಸ್ ನಿಲ್ದಾಣ ಕಾಮಗಾರಿ ಸಚಿವರು ಕೈಗೆತ್ತಿಕೊಂಡಿಲ್ಲ. ಕೋಟ್ಯಾಂತರ ರೂ. ಖರ್ಚು ಮಾಡಿ ಕುಂಭಮೇಳ ನಡೆಸಿದರಾದರೂ, ಕ್ಷೇತ್ರದ ಅಭಿವೃದ್ಧಿ ಕಡೆಗೂ ಸಚಿವರು ಒತ್ತು ಕೊಡಬೇಕೆಂಬುದು ಜನರ ಒತ್ತಾಯ. ಆದಾಗ್ಯೂ ಕೆಲ ಅಭಿವೃದ್ಧಿ ಯೋಜನೆಗಾಗಿ ಸಿಎಂ ಬೊಮ್ಮಾಯಿ ಹಾಗೂ ಮಾಜಿ ಸಿಎಂ ಯಡಿಯೂರಪ್ಪ ಅವರನ್ನು ಕರೆಸಿ, ಹಲವು ಅಭಿವೃದ್ಧಿ ಯೋಜನೆಗೆ ಶಂಕುಸ್ಥಾಪನೆ ನೆರವೇರಿಸಿದ್ದಾರೆ.

ಕೆ.ಆರ್.ಪೇಟೆಯಲ್ಲಿ ಕಮಲ ಅರಳಿಸಿರುವ ನಾರಾಯಣಗೌಡರಿಗೆ ಈ ಬಾರಿ ಚುನಾವಣೆ ಅಂದುಕೊಂಡಂತಿಲ್ಲ. ಉಪ ಚುನಾವಣೆ ವೇಳೆ ಬಿಜೆಪಿ ಅಧಿಕಾರದಲ್ಲಿತ್ತು. ಆರ್‌ಎಸ್‌ಎಸ್ ಸಮೂಹ ಹಾಗೂ ಸಚಿವರು, ಶಾಸಕರ ತಂಡ ಕೆ.ಆರ್.ಪೇಟೆಯಲ್ಲಿ ಬೀಡು ಬಿಟ್ಟಿತ್ತು ಅದು ಕೆಸಿಎನ್ ಗೆಲುವಿಗೆ ಸಹಕಾರವಾಯಿತು. ಆದರೆ ಸಾರ್ವತ್ರಿಕ ಚುನಾವಣೆಯಲ್ಲಿ ನಾರಾಯಣ ಗೌಡ ಒಬ್ಬರೇ ಸಮುದ್ರದಲ್ಲಿ ಈಜಾಡಬೇಕು. ಯಾವ ರೀತಿ ಚುನಾವಣೆ ಎದುರಿಸುತ್ತಾರೆ ಎಂಬುದನ್ನು ಕಾದು ನೋಡಬೇಕಿದೆ.

ಕೈ ಟಿಕೆಟ್ ವಿಜಯ್ ರಾಮೇಗೌಡರಿಗೋ... ಕಿಕ್ಕೇರಿ ಸುರೇಶ್‌ಗೋ.....

ಕೆ.ಆರ್.ಪೇಟೆಯಲ್ಲಿ ಮಂಕಾಗಿರುವ ಕಾಂಗ್ರೆಸ್ ಅನ್ನು ಪುಟಿದೆಬ್ಬಿಸಲು ಕಾಂಗ್ರೆಸ್ ಮುಖಂಡ ಹಾಗೂ ಖ್ಯಾತ ಚಲನಚಿತ್ರ ನಿರ್ಮಾಪಕ ವಿಜಯ್ ರಾಮೇಗೌಡ ಹಾಗೂ ಕಿಕ್ಕೇರಿ ಸುರೇಶ್ ಸಜ್ಜಾಗಿದ್ದಾರೆ. 2008ರಲ್ಲಿ ಕಾಂಗ್ರೆಸ್‌ನಿಂದ ಶಾಸಕರಾಗಿದ್ದ ಕೆ.ಬಿ.ಚಂದ್ರಶೇಖರ್ ಬಳಿಕ ನಡೆದ 2013, 2018, 2019ರ ಚುನಾವಣೆಯಲ್ಲಿ ಸೋಲನ್ನಪ್ಪಿದ್ದರು. ಕಾಂಗ್ರೆಸ್‌ನಲ್ಲಿ ಸತತ 3 ಬಾರಿ ಸೋತವರಿಗೆ ಟಿಕೆಟ್ ಇಲ್ಲ ಎಂಬ ಅಲಿಖಿತ ನಿಯಮವೇ ಇದೆ.

ಈ ಬಾರಿ ಟಿಕೆಟ್‌ಗಾಗಿ ಮಾಜಿ ಶಾಸಕರಾದ ಕೆ.ಬಿ.ಚಂದ್ರಶೇಖರ್, ಬಿ.ಪ್ರಕಾಶ್ ಹಾದಿಯಾಗಿ ಕಾಂಗ್ರೆಸ್ ಮುಖಂಡರಾದ ವಿಜಯ್ ರಾಮೇಗೌಡ, ಕಿಕ್ಕೇರಿ ಸುರೇಶ್, ಎಂ.ಡಿ.ಕೃಷ್ಣಮೂರ್ತಿ, ಐಪನಹಳ್ಳಿ ನಾಗೇಂದ್ರ ಕೆಪಿಸಿಸಿಗೆ ಅರ್ಜಿ ಸಲ್ಲಿಸಿದ್ದಾರೆ. ಈ ಪೈಕಿ ವಿಜಯ್‌ರಾಮೇಗೌಡ ಹಾಗೂ ಕಿಕ್ಕೇರಿ ಸುರೇಶ್ ಹೆಸರು ಪ್ರಧಾನವಾಗಿ ಕೇಳಿ ಬರುತ್ತಿದೆ.

ಕಾಂಗ್ರೆಸ್ ಮುಖಂಡ ವಿಜಯ್ ರಾಮೇಗೌಡ ಅವರು, ಕಳೆದ 3 ವರ್ಷದಿಂದ ಕೆ.ಆರ್.ಪೇಟೆ ಕ್ಷೇತ್ರದಲ್ಲಿ ಸಕ್ರಿಯವಾಗಿ ಪಕ್ಷ ಸಂಘಟನೆ ಮಾಡುತ್ತಾ, ಸಿದ್ದರಾಮಯ್ಯ ಅವರನ್ನು ಕರೆಸಿ, ಸಮಾವೇಶಗಳನ್ನು ಸಹ ಮಾಡಿದ್ದಾರೆ. ಜೊತೆಗೆ ಇತ್ತೀಚೆಗೆ ರಾಹುಲ್‌ಗಾಂಧಿ ಭಾರತ್ ಜೋಡೋ ಯಾತ್ರೆ ಮಂಡ್ಯ ಜಿಲ್ಲೆಗೆ ಬಂದಿದ್ದಾಗ ಅದರ ಸಂಪೂರ್ಣ ಹೊಣೆಯನ್ನು ವಿಜಯ್ ಅವರೇ ಹೊತ್ತು, ಯಶಸ್ವಿಯಾಗಿ ನಡೆಸಿಕೊಟ್ಟಿದ್ದರು. ಜೊತೆಗೆ ಸಿನಿಮಾ ನಿರ್ಮಾಪಕರು ಸಹ ಆಗಿರುವ ಇವರು, ಮಲ್ಲಿಕಾರ್ಜುನ ಖರ್ಗೆ, ಸಿದ್ದರಾಮಯ್ಯ, ಚಲುವರಾಯಸ್ವಾಮಿ ಜೊತೆಗೆ ಉತ್ತಮ ಬಾಂಧವ್ಯ ಹೊಂದಿದ್ದಾರೆ.

ಇನ್ನು ಕಿಕ್ಕೇರಿ ಸುರೇಶ್, ಕಳೆದ 2 ದಶಕಗಳಿಂದ ತಾಲೂಕು ಕಾಂಗ್ರೆಸ್‌ನಲ್ಲಿ ವಿವಿಧ ಹುದ್ದೆ ಅಲಂಕರಿಸಿ, ಪಕ್ಷ ಸಂಘಟನೆ ಮಾಡುತ್ತಾ ಬಂದಿದ್ದು, ಕಾಂಗ್ರೆಸ್‌ನಲ್ಲಿ ಸಕ್ರೀಯ ರಾಜಕಾರಣ ಮಾಡುತ್ತಾ ಟಿಕೆಟ್‌ಗಾಗಿ ಶತಪ್ರಯತ್ನ ನಡೆಸುತ್ತಿದ್ದಾರೆ. ಕೆ.ಬಿ.ಚಂದ್ರಶೇಖರ್‌ಗೆ ಟಿಕೆಟ್ ತಪ್ಪಿದರೆ ತಮಗೆ ಕೊಡಬೇಕೆಂಬ ಬೇಡಿಕೆ ಮುಂದಿಟ್ಟಿದ್ದು, ಡಿ.ಕೆ.ಶಿವಕುಮಾರ್ ಹಾಗೂ ಕೆ.ರೆಹಮಾನ್‌ಖಾನ್, ಕೆ.ಬಿ.ಚಂದ್ರಶೇಖರ್‌ರೊಂದಿಗೆ ಉತ್ತಮ ಬಾಂಧವ್ಯ ಹೊಂದಿದ್ದಾರೆ.

ಧರ್ಮಾಪುರದಲ್ಲಿ ಕನಕದಾಸ ಜಯಂತಿ



ಹುಣಸೂರು, ಡಿ.12– ದಾಸ ಸಾಹಿತ್ಯದ ಮೂಲಕ ಜಾತಿ, ಮತ, ಕುಲಗಳ ಭೇದ ಭಾವವನ್ನು ಮೀರಿಸುವಂತೆ ಸಮಾಜದ ಪಿಡುಗುಗಳ ಹಾಗೂ ಅಂಕು–ಡೊಂಕುಗಳ ಬಗ್ಗೆ ಜನಸಾಮಾನ್ಯರಿಗೆ ಅರ್ಥವಾಗುವ ಭಾಷೆಯಲ್ಲಿ ತಿಳಿಸಿ ಸಾಮಾಜಿಕ ಕ್ರಾಂತಿ ಮಾಡಿದ ಸಂತ ಕನಕದಾಸರು ಎಂದು ಜಿಪಂ ಮಾಜಿ ಸದಸ್ಯ ಕುನ್ನೇಗೌಡ ತಿಳಿಸಿದರು.

ತಾಲೂಕಿನ ಧರ್ಮಾಪುರದಲ್ಲಿ ಕನಕದಾಸ ಜಯಂತಿಯಲ್ಲಿ ಮಾತನಾಡಿದ ಅವರು, ಕನಕದಾಸರು ಕೀರ್ತನೆಗಳನ್ನು ಬರೆದು ಮನುಕುಲದ ಉನ್ನತಿಗಾಗಿ ಶ್ರಮಿಸಿದರು ಎಂದರು.

ಕೆ.ಆರ್.ನಗರ ಕಾಗಿನಲೆ ಶಾಖಾ ಮಠದ ಶ್ರೀಶಿವನಂದಪುರಿ ಸ್ವಾಮೀಜಿ ಕನಕದಾಸರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಮಾತನಾಡಿ, ಕನಕದಾಸರು ತಮ್ಮ ಕೀರ್ತನೆಗಳ ಮೂಲಕ ಮನುಕುಲಕ್ಕೆ ಬೆಳಕಾಗಿದ್ದಾರೆ ಎಂದರು. ವಕೀಲರಾದ ಡಿ.ಪಿ.ಮಹದೇವ್ ಕನಕದಾಸರ ಜೀವನದ ಬಗ್ಗೆ ಸವಿಸ್ತಾರವಾಗಿ ತಿಳಿಸಿಕೊಟ್ಟರು.

ಮೆರವಣಿಗೆ: ಕಾರ್ಯಕ್ರಮಕ್ಕೂ ಮುನ್ನಾ ಕನಕದಾಸರ ವಿಗ್ರಹವನ್ನು ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು.

ಮೆರವಣಿಗೆಗೆ ಕೆ.ಆರ್.ನಗರ ಕಾಗಿನಲೆ ಶಾಖಾ ಮಠದ ಶ್ರೀ ಶಿವನಂದಪುರಿ ಸ್ವಾಮೀಜಿ ಚಾಲನೆ ನೀಡಿದರು.

ಕಾರ್ಯಕ್ರಮದಲ್ಲಿ ಗ್ರಾಪಂ ಅಧ್ಯಕ್ಷೆ ಪುನೀತಾ, ಉಪಾಧ್ಯಕ್ಷೆ ತುಳಸಮ್ಮ, ಸದಸ್ಯರಾದ ಮಲ್ಲೇಶ್, ಮಹದೇವ್, ಕುಮಾರ, ಲತಾ, ಮಂಜು, ಮುಖಂಡರಾದ ಪುಟ್ಟಮಾದಯ್ಯ, ರಮೇಶ್, ಶೇಖರ್, ಮಹದೇವ, ಸಂಘದ ಅಧ್ಯಕ್ಷ ಮಹೇಶ್ ಕಾರ್ಯದರ್ಶಿ ರವಿ, ಯಜಮಾನ ನಿಂಗೇಗೌಡ ಸೇರಿದಂತೆ ಅನೇಕರಿದ್ದರು.



ಸರಗೂರು ತಾಲೂಕಿನ ಕಲ್ಲಹಳ್ಳ ಗ್ರಾಮದಲ್ಲಿ ಶ್ರೀಶನೇಶ್ವರಸ್ವಾಮಿ 2ನೇ ವರ್ಷದ ವಾರ್ಷಿಕೋತ್ಸವಕ್ಕೆ ದೇಣಿಗೆ ನೀಡಿದ ಜೆಡಿಎಸ್ ಮುಖಂಡ ಕೆ.ಎಂ.ಕೃಷ್ಣನಾಯಕ ಅವರನ್ನು ದೇವಸ್ಥಾನ ಸಮಿತಿಯಿಂದ ಸನ್ಮಾನಿಸಲಾಯಿತು. ಈ ವೇಳೆ ಮುಖಂಡರಾದ ಶಿವಕುಮಾರಸ್ವಾಮಿ, ನವೀನ್, ಜಿತೇಂದ್ರ, ನಂಜುಂಡಸ್ವಾಮಿ, ಬಸವಣ್ಣ, ಗಣೇಶ್, ಮಹೇಶ್, ಕೃಷ್ಣ ರವಿಕುಮಾರ್, ಬಸವಣ್ಣ ಇತರರಿದ್ದರು.

ವಿಜೃಂಭಣೆಯ ಶ್ರೀಪ್ರಸನ್ನ ಆಂಜನೇಯಸ್ವಾಮಿ ಜಯಂತೋತ್ಸವ

ಬೆಟ್ಟದಪುರ, ಡಿ.12– ಇಲ್ಲಿಗೆ ಸಮೀಪದ ಚಿಕ್ಕನೇರಳೆ ಗ್ರಾಮದಲ್ಲಿ ಶ್ರೀಪ್ರಸನ್ನ ಆಂಜನೇಯಸ್ವಾಮಿ ಜಯಂತೋತ್ಸವ ವಿಜೃಂಭಣೆಯಿಂದ ನೆರವೇರಿತು.



ಜಯಂತೋತ್ಸವ ಅಂಗವಾಗಿ ಗ್ರಾಮದ ದೇವಾಲಯವನ್ನು ವಿವಿಧ ಹೂಗಳಿಂದ ಅಲಂಕಾರ ಮಾಡಲಾಗಿತ್ತು. ಬೆಳ್ಗಿಗ್ಗೆಯಿಂದಲೇ ದೇವರಿಗೆ ಅಭಿಷೇಕ ಸೇರಿದಂತೆ ಸಕಲ ಪೂಜಾ ಕೈಂಕರ್ಯಗಳನ್ನು ನೆರವೇರಿಸಲಾಯಿತು. ಬಳಿಕ ನಡೆದ ಮೆರವಣಿಗೆಯಲ್ಲಿ ಚಿಕ್ಕನೇರಳೆ ಗ್ರಾಪಂ ವ್ಯಾಪ್ತಿಯ ದೊಡ್ಡ ನೇರಳೆ, ನಿಲವಾಡಿ ಒಡೆಯರ ಹೊಸಳ್ಳಿ, ಹಾರನಹಳ್ಳಿ, ಬಿಲಗುಂದ, ಹಸುವಿನ ಕಾವಲು ಸೇರಿದಂತೆ ಹತ್ತಕ್ಕೂ ಹೆಚ್ಚು ಹಳ್ಳಿಯ ಜನರು ಭಾಗವಹಿಸಿದ್ದರು.

ಶ್ರೀಆಂಜನೇಯಸ್ವಾಮಿ ಮೂರ್ತಿಯನ್ನು ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು. ನಂತರ ಭಕ್ತರಿಗೆ ಅನ್ನದಾನ ಹಮ್ಮಿಕೊಳ್ಳಲಾಗಿತ್ತು. ಮುಸ್ಲಿಂ ಸಮುದಾಯದವರು ಹನುಮ ಜಯಂತೋತ್ಸವದಲ್ಲಿ ಭಾಗವಹಿಸಿದ ಎಲ್ಲರಿಗೂ ಮಜ್ಜಿಗೆ ವಿತರಿಸಿದರು. ಬೆಟ್ಟದಪುರದ ಸಿಪಿಐ ಪ್ರಕಾಶ್, ಎಸ್‌ಐ ಪ್ರಕಾಶ ಎತ್ತಿನಮನಿ ಬಿಗಿ ಬಂದೋಬಸ್ತ್ ಏರ್ಪಡಿಸಲಾಗಿತ್ತು


ಮೈಸೂರು ವಿವಿ ಅಂತರ ಕಾಲೇಜು ಅಥ್ಲೆಟಿಕ್ಸ್ ಸ್ಪರ್ಧೆ
ಹುಣಸೂರು ಮಹಿಳಾ ಕಾಲೇಜಿಗೆ 3 ಕಂಚಿನ ಪದಕ

ಹುಣಸೂರು, ಡಿ.12– ಇತ್ತೀಚೆಗೆ ಮೈಸೂರಿನಲ್ಲಿ ನಡೆದ ಮೈಸೂರು ವಿವಿ ಮಹಿಳೆಯರ ಅಂತರ ಕಾಲೇಜುಗಳ ಅಥ್ಲೆಟಿಕ್ಸ್ ಸ್ಪರ್ಧೆಯಲ್ಲಿ ಹುಣಸೂರು ಸರ್ಕಾರಿ ಮಹಿಳಾ ಕಾಲೇಜಿನ ವಿದ್ಯಾರ್ಥಿನಿಯರು 3 ಕಂಚಿನ ಪದಕ ಗೆದ್ದು ಸಾಧನೆಗೈದು ಕಾಲೇಜಿಗೆ ಕೀರ್ತಿ ತಂದಿದ್ದಾರೆ ಎಂದು ದೈಹಿಕ ಶಿಕ್ಷಣ ನಿರ್ದೇಶಕ ಡಾ.ಭಾಸ್ಕರ್ ತಿಳಿಸಿದ್ದಾರೆ.



ಅಥ್ಲೆಟಿಕ್ಸ್ ಸ್ಪರ್ಧೆಯಲ್ಲಿ ವಿದ್ಯಾರ್ಥಿನಿಯರಾದ ಸುಚಿತ್ರ ಬಿ.ಆರ್ 800 ಮೀಟರ್ ಓಟದ ಸ್ಪರ್ಧೆಯಲ್ಲಿ ಕಂಚಿನ ಪದಕ, ದೀಪಿಕಾ ಉದ್ದ ಜಿಗಿತ ಸ್ಪರ್ಧೆಯಲ್ಲಿ ಕಂಚಿನ ಪದಕ ಮತ್ತು ಸುಮತಿ ಹೆಪ್ಟಥ್ಲಾನ್ ಸ್ಪರ್ಧೆಯಲ್ಲಿ ಕಂಚಿನ ಪದಕ ಪಡೆದು ಕಾಲೇಜಿನ ಕೀರ್ತಿ ಹೆಚ್ಚಿಸಿದ್ದಾರೆ ಎಂದರು. ವಿದ್ಯಾರ್ಥಿಗಳ ಸಾಧನೆಗೆ ಕಾಲೇಜಿನ ಪ್ರಾಂಶುಪಾಲ ಜ್ಞಾನ ಪ್ರಕಾಶ್, ಕಾಲೇಜು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಹನಗೋಡು ನಟರಾಜ್, ಬೋಧಕ, ಬೋಧಕೇತರ ಸಿಬ್ಬಂದಿ ವರ್ಗ ಅಭಿನಂದನೆ ಸಲ್ಲಿಸಿದೆ.

ಸೆಮಿ ಫೈನಲ್ | ಅರ್ಜೆಂಟೀನಾ–ಕ್ರೋವೇಷಿಯಾ, ಫ್ರಾನ್ಸ್–ಮೊರಾಕೊ ಸೆಣಸಾಟ



ತೀವ್ರ ಕುತೂಹಲ ಮೂಡಿಸಿರುವ ಫೈನಲ್ ಹಣಾಹಣಿ

ದೋಹಾ, ಡಿ.12– ಕತಾರ್‌ನಲ್ಲಿ ನಡೆಯುತ್ತಿರುವ ಫಿಫಾ ವಿಶ್ವಕಪ್ ಟೂರ್ನಿ ಉಪಾಂತ್ಯ ತಲುಪಿದ್ದು, ಟೂರ್ನಿಯಲ್ಲಿ 4 ತಂಡಗಳು ಈಗಾಗಲೇ ಸೆಮಿಫೈನಲ್ ತಲುಪಿದ್ದು, ಫೈನಲ್ ಪ್ರವೇಶಕ್ಕೆ ಭಾರೀ ರಣತಂತ್ರ ರೂಪಿಸಿವೆ.

ವಿಶ್ವಕಪ್ ಗೆಲ್ಲುವ ನೆಚ್ಚಿನ ತಂಡಗಳಾಗಿರುವ ಅರ್ಜೆಂಟೀನಾ, ಫ್ರಾನ್ಸ್ ಸೇರಿದಂತೆ ಕ್ರೋವೇಷಿಯಾ ಹಾಗೂ ಮೊರಾಕೊ ತಂಡಗಳು ಸೆಮಿಫೈನಲ್‌ಗೆ ಲಗ್ಗೆ ಹಾಕಿವೆ. ಡಿ.14ರಂದು ನಡೆಯುವ ಮೊದಲ ಸೆಮಿಫೈನಲ್‌ನಲ್ಲಿ ಮೆಸ್ಸಿ ನೇತೃತ್ವದ ಅರ್ಜೆಂಟೀನಾ ತಂಡಕ್ಕೆ ಕ್ರೋವೇಷಿಯಾ ಸವಾಲೊಡ್ಡಿದರೆ, ಡಿ.15ರಂದು ನಡೆಯುವ 2ನೇ ಸೆಮಿಫೈನಲ್‌ನಲ್ಲಿ ಫ್ರಾನ್ಸ್‌ಗೆ ಮೊರಾಕೊ ಎದುರಾಳಿ. ಸೆಮೀಸ್ ಕದನದಲ್ಲಿ ಗೆಲ್ಲುವ 2 ತಂಡಗಳು ಡಿ.18ರಂದು ನಡೆಯುವ ಫೈನಲ್ ಪಂದ್ಯದಲ್ಲಿ ಮುಖಾಮುಖಿಯಾಗಲಿದ್ದಾರೆ.

ಫೈನಲ್ ಕನಸಲ್ಲಿ ಅರ್ಜೆಂಟೀನಾ: ಲಯೊನೆಲ್ ಮೆಸ್ಸಿ ಮತ್ತು ಅರ್ಜೆಂಟೀನಾ ತಂಡದ ವಿಶ್ವಕಪ್ ಟ್ರೋಫಿ ಕನಸು ಜೀವಂತವಾಗಿ ಉಳಿದುಕೊಂಡಿದೆ ಆದರೆ ಲುಕಾ ಮಾಡ್ರಿಚ್ ಅವರನ್ನೊಳಗೊಂಡ ಕ್ರೊವೇಷಿಯಾ ತಂಡ, ಸೆಮಿಫೈನಲ್‌ನಲ್ಲಿ ತಡೆಯಾಗಿ ನಿಂತಿದೆ.

ಫಿಫಾ ವಿಶ್ವಕಪ್ ಟೂರ್ನಿಯ ನಾಲ್ಕರ ಘಟ್ಟದ ಹಣಾಹಣಿಯಲ್ಲಿ ಅರ್ಜೆಂಟೀನಾ–ಕ್ರೊವೇಷಿಯಾ ತಂಡಗಳು ಎದುರಾಗಲಿವೆ. ಲುಸೈಲ್ ಕ್ರೀಡಾಂಗಣದಲ್ಲಿ 88 ಸಾವಿರಕ್ಕೂ ಅಧಿಕ ಪ್ರೇಕ್ಷಕರ ಮುಂದೆ ನಡೆಯುವ ಪಂದ್ಯ, ಫುಟ್‌ಬಾಲ್ ಪ್ರೇಮಿಗಳ ಕುತೂಹಲಕ್ಕೆ ಕಾರಣವಾಗಿದೆ.



ಆಧುನಿಕ ಫುಟ್‌ಬಾಲ್‌ನ ದಿಗ್ಗಜ ಆಟಗಾರರಾದ ನೇಮರ್ ಮತ್ತು ಕ್ರಿಸ್ಟಿಯಾನೊ ರೊನಾಲ್ಡೊ ತಮ್ಮ ತಂಡಗಳು ಸೋತ ಕಾರಣ ಕಣ್ಣೀರು ಹಾಕುತ್ತಾ ಟೂರ್ನಿಗೆ ಗುಡ್‌ಬೈ ಹೇಳಿದ್ದಾರೆ. ಮೆಸ್ಸಿ ಅವರಿಗೆ ಅದೇ ಸಂಕಟ ಎದುರಾಗದಿರಲಿ ಎಂಬುದು ವಿಶ್ವದ ಕೋಟ್ಯಾಂತರ ಅಭಿಮಾನಿಗಳ ಪ್ರಾರ್ಥನೆಯಾಗಿದೆ.

ಆದರೆ, ಕಳೆದ ಬಾರಿಯ ರನ್ನರ್ ಅಪ್ ಕ್ರೊವೇಷಿಯಾ ತಂಡದವರು ಮೆಸ್ಸಿ ಬಳಗವನ್ನು ಮನೆಗೆ ಕಳುಹಿಸಲು ಎಲ್ಲ ತಯಾರಿ ನಡೆಸಿದ್ದಾರೆ. ನೇಮರ್ ಅವರ ವಿಶ್ವಕಪ್ ಗೆಲ್ಲುವ ಕನಸನ್ನು ಕ್ವಾರ್ಟರ್ ಫೈನಲ್‌ನಲ್ಲಿ ನುಚ್ಚುನೂರು ಮಾಡಿರುವ ಕ್ರೊವೇಷಿಯಾ, ಇನ್ನೊಬ್ಬ ಸ್ಟಾರ್ ಆಟಗಾರನಿಗೂ ನಿರಾಸೆ ಉಂಟು ಮಾಡಬೇಕೆಂಬ ಛಲದೊಂದಿಗೆ ಕಣಕ್ಕಿಳಿಯಲಿದೆ.

ಟೂರ್ನಿಯ ಮೊದಲ ಪಂದ್ಯ ದಲ್ಲಿ ಸೌದಿ ಅರೇಬಿಯಾ ಎದುರು ಆಘಾತ ಅನುಭವಿಸಿದ್ದ ಅರ್ಜೆಂಟೀನಾ, ಆ ಬಳಿಕ ಪುಟಿದೆದ್ದು ನಿಂತಿದೆ. ನೆದರ್ಲೆಂಡ್ಸ್ ವಿರುದ್ಧದ ಕ್ವಾರ್ಟರ್ ಫೈನಲ್ ಪಂದ್ಯವನ್ನು ಪೆನಾಲ್ಟಿ ಶೂಟೌಟ್‌ನಲ್ಲಿ ರೋಚಕವಾಗಿ ಜಯಿಸಿತ್ತು. ಬ್ರೆಜಿಲ್‌ಗೆ ಸರಿಸಾಟಿ ಯಾಗಿ ನಿಂತ ಕ್ರೊವೇಷಿಯಾ, ಬಲಿಷ್ಠ ತಂಡ ಎಂಬುದರಲ್ಲಿ ಎರಡು ಮಾತಿಲ್ಲ. ಮಿಡ್‌ಫೀಲ್ಡ್‌ನಲ್ಲಿ ಆಡುವ ಎಲ್ಲ ಆಟಗಾರರೂ ಅತ್ಯುತ್ತಮ ಫಾರ್ಮ್‌ನಲ್ಲಿದ್ದಾರೆ ಎಂದು ಮೆಸ್ಸಿ ಅವರು ಎದುರಾಳಿಗಳ ಬಗ್ಗೆ ಎಚ್ಚರಿಕೆಯ ಮಾತನ್ನಾಡಿದ್ದಾರೆ.

ಅರ್ಜೆಂಟೀನಾ ಕೋಚ್ ಲಯೊನೆಲ್ ಸ್ಕಾಲೊನಿ ಅವರು ನೆದರ್ಲೆಂಡ್ಸ್ ವಿರುದ್ಧ ಐವರು ಡಿಫೆಂಡರ್‌ಗಳನ್ನು ಕಣಕ್ಕಿಳಿಸಿದ್ದರು. ಅದಕ್ಕಾಗಿ ಲಿಸಾಂಡ್ರೊ ಮಾರ್ಟಿನೆಜ್ ಅವರಿಗೆ ಅಂತಿಮ ಇಲೆವೆನ್‌ನಲ್ಲಿ ಸ್ಥಾನ ನೀಡಿದ್ದರು. ಮಿಡ್‌ಫೀಲ್ಡ್‌ನಲ್ಲಿ ಆಟವನ್ನು ನಿಯಂತ್ರಿಸುವ ಕ್ರೊವೇಷಿಯಾ ವಿರುದ್ಧ ಅವರು ಯಾವ ತಂತ್ರ ಅನುಸರಿಸುವರು ಎಂಬುದನ್ನು ನೋಡಬೇಕು.

37 ವರ್ಷದ ಲುಕಾ ಮಾಡ್ರಿಚ್ ಅವರ ಅನುಭವ ಕ್ರೊವೇಷಿಯಾಕ್ಕೆ ನೆರವಾಗಲಿದೆ. ಮಾಡ್ರಿಚ್ ಈ ಟೂರ್ನಿಯಲ್ಲಿ ಯಾವುದೇ ಗೋಲು ಗಳಿಸಿಲ್ಲ. ಮಾತ್ರವಲ್ಲ, ಇತರರ ಗೋಲಿಗೆ 'ಅಸಿಸ್ಟ್' ಕೂಡಾ ನೀಡಿಲ್ಲ. ಆದರೆ ಅವರ ಸಾನ್ನಿಧ್ಯ ತಂಡಕ್ಕೆ ಚೈತನ್ಯ ತುಂಬುತ್ತದೆ. ಮಾರ್ಸೆಲೊ ಬ್ರೊಜೊವಿಚ್ ಮತ್ತು ಮಟೆಯೊ ಕೊವಚಿಚ್ ಅವರೂ ಮಿಡ್‌ಫೀಲ್ಡ್‌ಗೆ ಬಲ ತುಂಬುವರು. ಉಭಯ ತಂಡಗಳು ಒಟ್ಟಾರೆಯಾಗಿ 5 ಬಾರಿ ಪರಸ್ಪರ ಎದುರಾಗಿವೆಯಾದರೂ, ವಿಶ್ವಕಪ್‌ನಲ್ಲಿ 2 ಸಲ ಮಾತ್ರ ಸೆಣಸಾಟ ನಡೆಸಿವೆ. 1998ರ ಟೂರ್ನಿಯ ಲೀಗ್ ಹಂತದಲ್ಲಿ ಅರ್ಜೆಂಟೀನಾ 1–0 ರಲ್ಲಿ ಗೆದ್ದಿದ್ದರೆ, 2018ರ ಟೂರ್ನಿಯ ಲೀಗ್ ಪಂದ್ಯದಲ್ಲಿ ಕ್ರೊವೇಷ್ಯಾ 3–0 ರಲ್ಲಿ ಜಯಿಸಿತ್ತು.

ಸತತ 2ನೇ ಬಾರಿಗೆ ಟ್ರೋಫಿ ಜಯಿಸುವತ್ತ ಫ್ರಾನ್ಸ್: ವಿಶ್ವ ಫುಟ್‌ಬಾಲ್ ಅಖಾಡದಲ್ಲಿ ಬಲಿಷ್ಠ ತಂಡವಾಗಿರುವ ಫ್ರಾನ್ಸ್ 2018ರಲ್ಲಿ ಕ್ರೊವೇಷ್ಯಾ ಮಣಿಸಿ ಟ್ರೋಫಿ ಜಯಿಸಿತ್ತು. ಇದೀಗ ಸೆಮಿಫೈನಲ್ ತಲುಪಿರುವ ಫ್ರಾನ್ಸ್‌ಗೆ ಮತ್ತೊಮ್ಮೆ ಟ್ರೋಫಿ ಗೆಲ್ಲುವ ಆಸೆ ಚಿಗುರೊಡೆದಿದೆ. ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಬಲಿಷ್ಠ ಇಂಗ್ಲೆಂಡ್ ತಂಡವನ್ನು 2–1 ಬಗ್ಗುಬಡಿದಿರುವ ಫ್ರಾನ್ಸ್ ಮೊರಾಕೊ ವಿರುದ್ಧ ಗೆಲ್ಲಲ್ಲು ಭಾರೀ ಪೈಪೋಟಿ ನಡೆಸಲಿದೆ. ಕೈಲಿಯಾನ್ ಎಂಬಾಪೆ ಸೇರಿದಂತೆ ಹಲವು ಸ್ಟಾರ್ ಆಟಗಾರರನ್ನು ಒಳಗೊಂಡಿರುವ ಫ್ರಾನ್ಸ್ ಪಂದ್ಯ ಗೆಲ್ಲುವ ನೆಚ್ಚಿನ ತಂಡವಾಗಿ ಹೊರಹೊಮ್ಮಿದೆ.

ಒಟ್ಟಾರೆ ಫಿಫಾ ವಿಶ್ವಕಪ್ ಫುಟ್‌ಬಾಲ್ ಪಂದ್ಯಾವಳಿಯ ಎರಡೂ ಸೆಮಿಫೈನಲ್ ಪಂದ್ಯಗಳು ಭಾರೀ ರೋಚಕತೆಯಿಂದ ಕೂಡಿರುವುದರಲ್ಲಿ ಯಾವುದೇ ಅನುಮಾನವಿಲ್ಲ.



ಸೇಠ್ ಅಧಿಪತ್ಯವಿರುವ ನರಸಿಂಹರಾಜ ಕ್ಷೇತ್ರದಲ್ಲಿ
ವಿವಿಧ ಪಕ್ಷಗಳ ಟಿಕೆಟ್‌ಗೆ ಆಕಾಂಕ್ಷಿಗಳ ಪೈಪೋಟಿ

ಕ್ಷೇತ್ರದ ಶಾಸಕರ ಪರಂಪರೆ


1952	ಟಿ. ಮರಿಯಪ್ಪ	– ಕಾಂಗ್ರೆಸ್
1957	ಮಹಮದ್ ಸೇಠ್	– ಪಕ್ಷೇತರ
1962	ಬಿ.ಕೆ. ಪುಟ್ಟಯ್ಯ	– ಪಿಸಿಎ
1967	ಅಜೀಜ್ ಸೇಠ್	– ಎಸ್‌ಎಸ್‌ಪಿ
1972	ಅಜೀಜ್ ಸೇಠ್	– ಕಾಂಗ್ರೆಸ್
1978	ಅಜೀಜ್ ಸೇಠ್	– ಕಾಂಗ್ರೆಸ್
1983	ಅಜೀಜ್ ಸೇಠ್	– ಜನತಾ ಪಕ್ಷ
1985	ಮುಕ್ತಾರುನ್ನೀಸಾ ಬೇಗಂ	– ಕಾಂಗ್ರೆಸ್
1989	ಅಜೀಜ್ ಸೇಠ್	– ಕಾಂಗ್ರೆಸ್
1994	ಇ. ಮಾರುತಿರಾವ್ ಪವಾರ್	– ಬಿಜೆಪಿ
1999	ಅಜೀಜ್ ಸೇಠ್	– ಕಾಂಗ್ರೆಸ್
2002	ತನ್ವೀರ್ ಸೇಠ್	– ಕಾಂಗ್ರೆಸ್
2004	ತನ್ವೀರ್ ಸೇಠ್	– ಕಾಂಗ್ರೆಸ್
2008	ತನ್ವೀರ್ ಸೇಠ್	– ಕಾಂಗ್ರೆಸ್
2013	ತನ್ವೀರ್ ಸೇಠ್	– ಕಾಂಗ್ರೆಸ್
2018	ತನ್ವೀರ್ ಸೇಠ್	– ಕಾಂಗ್ರೆಸ್


ತನ್ವೀರ್ ಸೇಠ್


ಸಂದೇಶ್‌ಸ್ವಾಮಿ


ಅಬ್ದುಲ್ ಮಜೀದ್


ಅಬ್ದುಲ್ಲಾ


ಅಯೂಬ್ ಖಾನ್


ಶಾಹೀದ್


ಮಂಜು ಸಿ.ಗೌಡ


ಅಜ್ಜು


ಸೈಯದ್ ಮುಜಾಹಿದ್


ಗಿರಿಧರ್


ಧರ್ಮಶ್ರೀ


■ ಎ.ಗಣೇಶ್

ಮೈಸೂರು, ಡಿ. 12– ಮುಸ್ಲಿಂ ಮತದಾರರು ಹೆಚ್ಚಾಗಿರುವ ಮೈಸೂರಿನ ನರಸಿಂಹರಾಜ ಕ್ಷೇತ್ರ ಒಂದೇ ಕುಟುಂಬದ ಸುದೀರ್ಘ ಕಾಲದ ಅಧಿಪತ್ಯವಿರುವ ವಿಶೇಷತೆ ಹೊಂದಿರುವ ವಿಧಾನಸಭಾ ಕ್ಷೇತ್ರವಾಗಿದೆ. ಈ ಕ್ಷೇತ್ರ ಯಾವುದೇ ರಾಜಕೀಯ ಪಕ್ಷದ ಭದ್ರಕೋಟೆ ಎಂದು ಹೇಳಲಾಗದಂತಹ ರೀತಿಯಲ್ಲಿ ತನ್ವೀರ್ ಸೇಠ್ ಅವರ ಕುಟುಂಬ ತನ್ನ ಅಧಿಪತ್ಯ ಸಾಧಿಸುತ್ತಾ ಬಂದಿದೆ.

ನರಸಿಂಹರಾಜ ಕ್ಷೇತ್ರದಲ್ಲಿ ಎರಡು ಉಪ ಚುನಾವಣೆಗಳು ಸೇರಿದಂತೆ ಈವರೆಗೆ ನಡೆದಿರುವ ಒಟ್ಟು 16 ಚುನಾವಣೆಗಳಲ್ಲಿ ತನ್ವೀರ್ ಸೇಠ್ ಅವರ ತಾತ, ತಂದೆ ಹಾಗೂ ತನ್ವೀರ್ ಒಟ್ಟು 12 ಚುನಾವಣೆಗಳಲ್ಲಿ ಗೆಲುವು ಸಾಧಿಸಿ, ದಾಖಲೆ ನಿರ್ಮಿಸಿದ್ದಾರೆ. ತನ್ವೀರ್ ಸೇಠ್ ಸ್ಪರ್ಧಿಸಿದ ಒಂದು ಉಪ ಚುನಾವಣೆ ಸೇರಿದಂತೆ ಎಲ್ಲಾ ಐದು ಚುನಾವಣೆಗಳಲ್ಲೂ ಕಾಂಗ್ರೆಸ್ ಅಭ್ಯರ್ಥಿ ಆಗಿದ್ದರೆ, ಅವರ ತಂದೆ ದಿವಂಗತ ಅಜೀಜ್ ಸೇಠ್ ಅವರು ಆರು ಬಾರಿ ಆಯ್ಕೆಯಾಗಿದ್ದು ಕಾಂಗ್ರೆಸ್, ಜನತಾ ಪಕ್ಷ, ಎಸ್‌ಎಸ್‌ಪಿ ಅಭ್ಯರ್ಥಿಯಾಗಿದ್ದರು. ಇನ್ನು ಅಜೀಜ್ ಸೇಠ್ ಅವರ ಚಿಕ್ಕಪ್ಪ ಮಹಮದ್ ಸೇಠ್ ಪಕ್ಷೇತರರಾಗಿ ಗೆಲುವು ಸಾಧಿಸಿದ್ದರು. ಹೀಗಾಗಿ ಈ ಕ್ಷೇತ್ರವನ್ನು ರಾಜಕೀಯ ಪಕ್ಷದ ಭದ್ರಕೋಟೆ ಎನ್ನುವುದಕ್ಕಿಂತ ಸೇಠ್ ಕುಟುಂಬದ ಭದ್ರಕೋಟೆ ಎಂದೇ ಪರಿಗಣಿಸಬೇಕಿದೆ.

ಈ ಮಧ್ಯೆ ರಾಜ್ಯದಲ್ಲಿ ಬಿಜೆಪಿ ಇನ್ನೂ ಬೇರೂರದೇ ಇದ್ದ 1994ರ ಚುನಾವಣೆಯಲ್ಲಿ ಇ.ಮಾರುತಿರಾವ್ ಪವಾರ್ ಅವರು, ಅಜೀಜ್ ಸೇಠ್ ಅವರನ್ನು ಮಣಿಸಿ ಈ ಕ್ಷೇತ್ರದಲ್ಲಿ ಬಿಜೆಪಿ ಖಾತೆ ತೆರೆದು ಇತಿಹಾಸ ಸೃಷ್ಟಿಸಿದ್ದರು. ಆ ಚುನಾವಣೆಯಲ್ಲಿ ಅಜೀಜ್ ಸೇಠ್ ಅವರಿಗೆ ಕಾಂಗ್ರೆಸ್ ನೀಡಿದ್ದ ಬಿ ಫಾರಂ ತಾಂತ್ರಿಕ ಕಾರಣದಿಂದ ತಿರಸ್ಕೃತಗೊಂಡು ಅವರು ಪಕ್ಷೇತರ ಅಭ್ಯರ್ಥಿಯಾಗಿ ಕಣದಲ್ಲಿದ್ದರು. 1994ರ ವಿಧಾನಸಭಾ ಚುನಾವಣೆಯ ಮತ್ತೊಂದು ವಿಶೇಷವೆಂದರೆ ಮೈಸೂರಿನ ನರಸಿಂಹರಾಜದಲ್ಲಿ ಮಾರುತಿರಾವ್ ಪವಾರ್, ಕೃಷ್ಣರಾಜದಲ್ಲಿ ಎಸ್.ಎ.ರಾಮದಾಸ್ ಮತ್ತು ಚಾಮರಾಜದಲ್ಲಿ ಹೆಚ್.ಎಸ್. ಶಂಕರಲಿಂಗೇಗೌಡ ಗೆಲುವು ಸಾಧಿಸುವ ಮೂಲಕ ಇಡೀ ಮೈಸೂರು ನಗರದಲ್ಲಿ ಬಿಜೆಪಿ ಧ್ವಜ ಹಾರಿಸಿದ್ದರು.

ಇನ್ನು ನರಸಿಂಹರಾಜ ಕ್ಷೇತ್ರದಲ್ಲಿ ತನ್ವೀರ್ ಸೇಠ್ ಆಡಳಿತಕ್ಕೆ ಬ್ರೇಕ್ ಹಾಕಲು ಜನತಾ ದಳದಿಂದ ಸಂದೇಶ್ ನಾಗರಾಜ್, ಬಿಜೆಪಿಯಿಂದ ಬಿ.ಪಿ.ಮಂಜುನಾಥ್ ಸೆಣಸಿದ್ದಾರೆ. ಸಂದೇಶ್ ನಾಗರಾಜ್ ಅವರ ಸಹೋದರ ಮಾಜಿ ಮೇಯರ್ ಸಂದೇಶ್ ಸ್ವಾಮಿ ಒಮ್ಮೆ ಜೆಡಿಎಸ್‌ನಿಂದ ಹಾಗೂ ಮತ್ತೊಮ್ಮೆ ಬಿಜೆಪಿಯಿಂದ ಈ ಕ್ಷೇತ್ರದಲ್ಲಿ ಸ್ಪರ್ಧಿಸಿದ್ದಾರೆ. ಮುಸ್ಲಿಂ ಮತದಾರರು ಹೆಚ್ಚಾಗಿರುವ ಕಾರಣದಿಂದ ಈ ಕ್ಷೇತ್ರದಲ್ಲಿ ಖಾತೆ ತೆರೆಯಲೇಬೇಕು ಎಂಬ ಛಲದೊಂದಿಗೆ ಎಸ್‌ಡಿಪಿಐ ತನ್ವೀರ್ ವಿರುದ್ಧ ಹೋರಾಟ ನಡೆಸುತ್ತಲೇ ಇದೆ. ಎಸ್‌ಡಿಪಿಐನ ಅಭ್ಯರ್ಥಿ ಅಬ್ದುಲ್ ಮಜೀದ್ ಅವರು 2013ರ ಚುನಾವಣೆಯಲ್ಲಿ 2ನೇ ಸ್ಥಾನ ಪಡೆಯುವ ಮೂಲಕ ಸ್ವಲ್ಪ ಮಟ್ಟಿಗೆ ಯಶಸ್ವಿಯಾದರಾದರೂ, ಆ ಚುನಾವಣೆಯಲ್ಲಿ ಅಲ್ಪ ಮತಗಳ ಅಂತರದಲ್ಲಿ ತನ್ವೀರ್ ಗೆಲುವಿನ ನಗೆ ಬೀರಿದ್ದರು. 2018ರ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದ ಸಂದೇಶ್ ಸ್ವಾಮಿ ಅವರು ತನ್ವೀರ್ ಅವರನ್ನು ಮಣಿಸಲು ಸಾಧ್ಯವಾಗಿಲ್ಲವಾದರೂ, ಎಸ್‌ಡಿಪಿಐ ಅಭ್ಯರ್ಥಿ ಅಬ್ದುಲ್ ಮಜೀದ್ ಅವರನ್ನು ಹಿಂದಿಕ್ಕಿ 2ನೇ ಸ್ಥಾನ ಪಡೆದರು. ವಿಶೇಷವೆಂದರೆ ಈ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಅತ್ಯಂತ ಹೆಚ್ಚು ಮತ ಪಡೆದದ್ದು 2018ರ ಚುನಾವಣೆಯಲ್ಲಿ.



ಇನ್ನು ವಿಧಾನಸಭೆ ಚುನಾವಣೆ ಕೆಲವೇ ತಿಂಗಳು ಬಾಕಿ ಇರುವಂತೆಯೇ ರಾಜಕೀಯ ಪಕ್ಷಗಳಲ್ಲಿ ನರಸಿಂಹರಾಜ ಕ್ಷೇತ್ರದ ಟಿಕೆಟ್ ಪಡೆಯಲು ತೀವ್ರ ಪೈಪೋಟಿ ನಡೆಯುತ್ತಿದೆ. ಒಂದೆಡೆ ತನ್ವೀರ್ ಸೇಠ್ ಸೋಲಿಲ್ಲದ ಸರದಾರರಾಗಿ ಮುನ್ನುಗ್ಗುತ್ತಿದ್ದರೂ ಕಾಂಗ್ರೆಸ್ ಟಿಕೆಟ್ ಪಡೆಯಲು ಇಬ್ಬರು ಮುಖಂಡರು ಪೈಪೋಟಿಗಿಳಿದಿದ್ದಾರೆ. ಟಿಕೆಟ್‌ಗಾಗಿ ತನ್ವೀರ್ ಸೇಠ್ ಮಾತ್ರವಲ್ಲದೇ ಮಾಜಿ ಮೇಯರ್ ಅಯೂಬ್ ಖಾನ್ ಮತ್ತು ಮುಖಂಡ ಸೈಯ್ಯದ್ ಮುಜಾಹಿದ್ ಅರ್ಜಿ ಸಲ್ಲಿಸಿದ್ದಾರೆ. ಅಯೂಬ್ ಖಾನ್ ಅವರು ಮೈಸೂರು ನಗರ ಪಾಲಿಕೆಯ ಮೇಯರ್ ಹಾಗೂ ಉಪಮೇಯರ್ ಆಗಿ ಕಾರ್ಯನಿರ್ವಹಿಸಿದ್ದು, ಅನುಭವಿ ರಾಜಕಾರಣಿ ಎನಿಸಿಕೊಂಡಿದ್ದಾರೆ. ವಿಧಾನಸಭಾ ಚುನಾವಣೆಯಲ್ಲಿ ತನ್ವೀರ್ ಸೋಲಿಲ್ಲದ ಸರದಾರನಾದರೆ, ಅಯೂಬ್ ಖಾನ್ ಪಾಲಿಕೆ ಚುನಾವಣೆಯಲ್ಲಿ ಸೋಲಿಲ್ಲದ ಸರದಾರರೆನಿಸಿ ಕೊಂಡಿದ್ದಾರೆ. ಅವರು ಈ ಬಾರಿಯ ಕಾಂಗ್ರೆಸ್ ಟಿಕೆಟ್‌ಗೆ ತೀವ್ರ ಪೈಪೋಟಿ ನಡೆಸಿದ್ದಾರೆ.

ಸಂದೇಶ್ ನಾಗರಾಜ್ ಜೆಡಿಎಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ ತನ್ವೀರ್‌ಗೆ ತೀವ್ರ ಪೈಪೋಟಿ ನೀಡಿ 2ನೇ ಸ್ಥಾನ ಪಡೆಯುತ್ತಿದ್ದರು. ಹೀಗಾಗಿ ಈ ಕ್ಷೇತ್ರದಲ್ಲಿ ತನ್ನ ಅಭ್ಯರ್ಥಿಯ ಗೆಲುವು ಸಾಧ್ಯ ಎಂದು ಜೆಡಿಎಸ್ ಭಾವಿಸಿದೆ. ಸಂದೇಶ್ ಸಹೋದರರ ನಂತರ 2018ರ ಚುನಾವಣೆಯಲ್ಲಿ ತನ್ವೀರ್ ಸೇಠ್‌ನ ಆಪ್ತರಾಗಿಯೇ ಇದ್ದ ಅಬ್ದುಲ್ಲಾ ಅವರನ್ನು ಜೆಡಿಎಸ್ ಕಣಕ್ಕಿಳಿಸಿತ್ತು. ಅವರು ಪರಾಭವಗೊಂಡಿದ್ದರಾದರೂ ಈ ಬಾರಿಯೂ ಸ್ಪರ್ಧಿಸಲು ಪ್ರಬಲ ಆಕಾಂಕ್ಷಿಯಾಗಿದ್ದಾರೆ. ತನ್ವೀರ್ ಸೇಠ್ ಮತ್ತೋರ್ವ ಆಪ್ತ ಅಜೀಜ್ ಸೇಠ್ ಬ್ಲಾಕ್ ಕಾಂಗ್ರೆಸ್‌ನ ಮಾಜಿ ಅಧ್ಯಕ್ಷ ಅಬ್ದುಲ್ ಖಾದರ್ ಶಾಹಿದ್ ಅವರು ಇದೀಗ ಜೆಡಿಎಸ್ ಸೇರ್ಪಡೆಗೊಂಡಿದ್ದು, ಅವರೂ ಕೂಡ ತನ್ನ ರಾಜಕೀಯ ಗುರು ತನ್ವೀರ್ ವಿರುದ್ಧ ಸ್ಪರ್ಧಿಸಲು ಜೆಡಿಎಸ್ ಟಿಕೆಟ್ ಕೋರಿದ್ದಾರೆ. ಒಟ್ಟಾರೆ ಜೆಡಿಎಸ್ ತನ್ವೀರ್ ಸೇಠ್ ಅವರ ಆಪ್ತರಾಗಿದ್ದವರನ್ನೇ ಕಣಕ್ಕಿಳಿಸುವ ಸಾಧ್ಯತೆ ಹೆಚ್ಚಳವಾಗಿದೆ.

2018ರ ಚುನಾವಣೆಯಲ್ಲಿ ಈ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಅತ್ಯಂತ ಹೆಚ್ಚಿನ ಮತ ಪಡೆದಿದ್ದ ಮಾಜಿ ಮೇಯರ್ ಸಂದೇಶ್ ಸ್ವಾಮಿ ಅವರು ಈ ಬಾರಿಯೂ ಬಿಜೆಪಿ ಟಿಕೆಟ್‌ಗೆ ಪ್ರಬಲ ಆಕಾಂಕ್ಷಿಯಾಗಿದ್ದಾರೆ. ಕಳೆದ ಚುನಾವಣೆಯಲ್ಲಿ ಪರಾಭವಗೊಂಡಿದ್ದರೂ ಕೂಡ ಕ್ಷೇತ್ರದ ಮತದಾರರೊಂದಿಗೆ ನಿರಂತರ ಸಂಪರ್ಕ ಹೊಂದಿರುವ ಸಂದೇಶ್ ಸ್ವಾಮಿ, ಪಕ್ಷ ಸಂಘಟನೆಯಲ್ಲೂ ಕೂಡ ಮುಂದಿದ್ದಾರೆ. ಅವರು ಮೇಯರ್ ಹಾಗೂ ಕಾರ್ಪೊರೇಟರ್ ಆಗಿದ್ದ ವೇಳೆ ಕೈಗೊಂಡಿದ್ದ ಅಭಿವೃದ್ಧಿ ಕಾರ್ಯಗಳು ಹಾಗೂ ಜನಸಂಪರ್ಕ ಈ ಬಾರಿ ಗೆಲುವು ತಂದುಕೊಡಬಹುದು ಎಂಬ ವಿಶ್ವಾಸ ಅವರದು. ಅಲ್ಲದೇ ಬಿಜೆಪಿ ನಗರ ಕಾರ್ಯದರ್ಶಿಯಾಗಿರುವ ಹೆಚ್.ಜಿ. ಗಿರಿಧರ್ ಮತ್ತು ಎನ್‌ಆರ್ ಕ್ಷೇತ್ರದ ಬಿಜೆಪಿ ಮಾಜಿ ಪ್ರಧಾನ ಕಾರ್ಯದರ್ಶಿ ಮಂಜು ಸಿ.ಗೌಡ ಅವರು ಕೂಡ ಬಿಜೆಪಿ ಟಿಕೆಟ್ ಆಕಾಂಕ್ಷಿಯಾಗಿದ್ದಾರೆ.

ಮುಸ್ಲಿಂ ಮತದಾರರು ಹೆಚ್ಚಾಗಿರುವ ಈ ಕ್ಷೇತ್ರದಲ್ಲಿ ಶತಾಯಗತಾಯ ಖಾತೆ ತೆರೆಯಲೇಬೇಕು ಎಂಬ ಛಲದೊಂದಿಗೆ ಎಸ್‌ಡಿಪಿಐ ನಿರಂತರವಾಗಿ ನರಸಿಂಹರಾಜ ಕ್ಷೇತ್ರದಲ್ಲಿ ಸಂಘಟನೆಯಲ್ಲಿ ತೊಡಗಿಕೊಂಡಿದೆ. 2013ರಲ್ಲಿ 2ನೇ ಸ್ಥಾನ ಹಾಗೂ 2018ರಲ್ಲಿ 3ನೇ ಸ್ಥಾನ ಪಡೆದಿದ್ದ ಅಬ್ದುಲ್ ಮಜೀದ್ ಅವರೇ ಈ ಬಾರಿಯೂ ಕೂಡ ಕಣಕ್ಕಿಳಿಯುವ ಸಾಧ್ಯತೆ ಇದೆ. ಇನ್ನು ಆಮ್ ಆದ್ಮಿ ಪಕ್ಷದಿಂದ ಮಾಜಿ ಮುಖ್ಯಮಂತ್ರಿ ದಿ.ಧರ್ಮಸಿಂಗ್ ಅವರ ಮೊಮ್ಮಗಳು ಧರ್ಮಶ್ರೀ ಅವರನ್ನು ಕಣಕ್ಕಿಳಿಸುವ ಸಾಧ್ಯತೆ ಇದೆ.

ತೆವಳುತ್ತಾ ಸಾಗಿದೆ ಚಾಮುಂಡಿಬೆಟ್ಟದ
ತಡೆಗೋಡೆ ಕಾಮಗಾರಿ

ಈಗ ಮ್ಯಾಂಡಸ್ ಚಂಡ ಮಾರುತದ ಮಳೆ ಪರಿಣಾಮ ಸಂಪೂರ್ಣ ಸ್ಥಗಿತ

9.75 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಾಗುತ್ತಿರುವ ತಡೆಗೋಡೆ: ವರ್ಷ ಕಳೆದರೂ ಪೂರ್ಣಗೊಳ್ಳದ ಕಾಮಗಾರಿ, ಸಾರ್ವಜನಿಕರಿಂದ ಭಾರೀ ಆಕ್ರೋಶ



ಚಾಮುಂಡಿಬೆಟ್ಟದ ನಂದಿ ರಸ್ತೆಯಲ್ಲಿ ಭೂ ಕುಸಿತ ಉಂಟಾಗಿದ್ದ ಸ್ಥಳದಲ್ಲಿ ತಡೆಗೋಡೆ ನಿರ್ಮಾಣ ಕಾಮಗಾರಿ ಮಳೆಯಿಂದಾಗಿ ಸ್ಥಗಿತಗೊಂಡಿರುವುದು.

ಮೈಸೂರು,ಡಿ.12(ಎಂಟಿವೈ)–ಕುಸಿದಿದ್ದ ಚಾಮುಂಡಿಬೆಟ್ಟದ ನಂದಿ ರಸ್ತೆಯ ಭಾಗದಲ್ಲಿ ತಡೆಗೋಡೆ ನಿರ್ಮಾಣ ಕಾಮಗಾರಿ ತೆವಳುತ್ತಿದೆ. ಈಗ ಮಳೆ ಕಾರಣ ಮುಂದೊಡ್ಡಿ ಸ್ಥಗಿತಗೊಳಿಸಲಾಗಿದೆ. ವರ್ಷ ಕಳೆದರೂ ಕಾಮಗಾರಿ ಪೂರ್ಣಗೊಳ್ಳದ ಬಗ್ಗೆ ಸಾರ್ವಜನಿಕರು ಆಕ್ರೋಶ ವ್ಯಕ್ತ ಪಡಿಸಿದ್ದಾರೆ.

ಈ ಹಿಂದೆ ಭಾರೀ ಮಳೆಯಿಂದಾಗಿ ಚಾಮುಂಡಿಬೆಟ್ಟದ ನಂದಿ ರಸ್ತೆಯಲ್ಲಿ ಭೂ ಕುಸಿತ ಉಂಟಾಗಿತ್ತು. ಈ ಸ್ಥಳದಲ್ಲಿ ತಡೆಗೋಡೆ ನಿರ್ಮಿಸಲು ಕ್ರಮ ಕೈಗೊಳ್ಳಲಾಗಿತ್ತು. ಭೂ ಕುಸಿತ ಮರುಕಳಿಸುವುದನ್ನು ತಡೆಗಟ್ಟಲು ನೂತನ ತಂತ್ರಜ್ಞಾನ ಬಳಸಿ, ವೈಜ್ಞಾನಿಕವಾಗಿ ತಡೆಗೋಡೆ ನಿರ್ಮಿಸಲು ಸರ್ಕಾರ 9.75 ಕೋಟಿ ರೂ. ಮಂಜೂರು ಮಾಡಿತ್ತು. ಈ ಹಿನ್ನೆಲೆಯಲ್ಲಿ ಆಗಸ್ಟ್ ಮೊದಲ ವಾರದಲ್ಲಿ ಕಾಮಗಾರಿ ಆರಂಭಿಸಲಾಗಿತ್ತು. ಆದರೆ, ನಂತರದಲ್ಲಿ ಕಾಮಗಾರಿ ತೆವಳುತ್ತಾ ಸಾಗಿತ್ತು. ಇದೀಗ ಮಳೆ ಎಂಬ ಕಾರಣಕ್ಕೆ ಕಾಮಗಾರಿ ಸ್ಥಗಿತಗೊಳಿಸಲಾಗಿದೆ. ಹಾಗಾಗಿ ತಡೆಗೋಡೆ ನಿರ್ಮಾಣ ಕಾಮಗಾರಿ ಪೂರ್ಣಗೊಳ್ಳುವುದು ಇನ್ನಷ್ಟು ವಿಳಂಬವಾಗುವ ಸಾಧ್ಯತೆ ಹೆಚ್ಚಾಗಿದೆ.

ಈ ಕುರಿತಂತೆ ಲೋಕೋಪಯೋಗಿ ಇಲಾಖೆಯ ಕಾರ್ಯನಿರ್ವಾಹಕ ಎಂಜಿನಿಯರ್ ರಾಜು 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ನಂದಿ ರಸ್ತೆಯ ಕುಸಿದಿದ್ದ ಭಾಗದ ತಡೆಗೋಡೆ ನಿರ್ಮಾಣ ಕಾಮಗಾರಿ ಆರಂಭಿಸಲಾಗಿತ್ತು. ಇದಕ್ಕಾಗಿ ಸ್ಥಳದಲ್ಲಿ ಮಣ್ಣನ್ನು ತೆರವು ಮಾಡಲಾಗಿದೆ. ಒಂದು ಹಂತದಲ್ಲಿ ತಡೆಗೋಡೆಗೆ ಕಬ್ಬಿಣದ ಸರಳು ಅಳವಡಿಸಿ ಕಾಂಕ್ರೀಟ್ ಕೂಡ ಹಾಕಲಾಗಿದೆ. ಈಗ ಸಿವಿಲ್ ಕಾಮಗಾರಿ ಆರಂಭಿಸುವ ವೇಳೆಗೆ ಮ್ಯಾಂಡಸ್ ಚಂಡಮಾರುತದ ಹಿನ್ನೆಲೆಯಲ್ಲಿ ಎಡಬಿಡದೆ ಮಳೆ ಸುರಿಯುತ್ತಿದೆ. ಹಾಗಾಗಿ ಕಾಮಗಾರಿ ನಿಲ್ಲಿಸಿದ್ದೇವೆ ಎಂದರು.

ಮಳೆಯಿಂದಾಗಿಯೇ ವ್ಯೂ ಪಾಯಿಂಟ್ ಸಮೀಪ ನಂದಿ ಪ್ರತಿಮೆಯ ರಸ್ತೆಯಲ್ಲಿ ಹಲವೆಡೆ ಭೂ ಕುಸಿತ ಉಂಟಾಗಿದೆ. ಈ ಹಿಂದೆ ಉದ್ದೇಶಿಸಿದ್ದ ತಡೆಗೋಡೆ ನಿರ್ಮಾಣ ಕಾಮಗಾರಿಯನ್ನು ಹೆಚ್ಚುವರಿಯಾಗಿ 400 ಮೀಟರ್ ವರೆಗೆ ವಿಸ್ತರಿಸಲಾಗಿದೆ. ನಿರ್ಮಾಣಕ್ಕೆ ಬೇಕಾದ ಸಿಮೆಂಟ್, ಕಬ್ಬಿಣ ಸೇರಿದಂತೆ ಅಗತ್ಯವಿರುವ ಎಲ್ಲ ಸಾಮಗ್ರಿಗಳನ್ನು ಸ್ಥಳದಲ್ಲಿ ಸಂಗ್ರಹಿಸಲಾಗಿದೆ. ಮಳೆ ನಿಂತ ಬಳಿಕ ಕಾಮಗಾರಿಯನ್ನು ಪುನರಾರಂಭಿಸುತ್ತೇವೆ ಎಂದು ತಿಳಿಸಿದರು. ಸುಭದ್ರ ತಡೆಗೋಡೆ ನಿರ್ಮಿಸಲು ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯ (IISC) ವಿಜ್ಞಾನಿಗಳು ಮಣ್ಣಿನ ಪರೀಕ್ಷೆ ನಡೆಸಿದ್ದರು. ಭೂಕುಸಿತದ ಸ್ಥಳದಲ್ಲಿ ನಡೆಸಿದ ಅಧ್ಯಯನದ ವಿವರವಾದ ವರದಿ ಸಲ್ಲಿಸಿದ ಬಳಿಕವಷ್ಟೆ ಜಿಯೋ ಟ್ರಯಲ್ ತಂತ್ರಜ್ಞಾನ ಬಳಸಿ ತಡೆಗೋಡೆಯನ್ನು ಹೇಗೆ ನಿರ್ಮಿಸಬೇಕು ಎಂಬ ಸಲಹೆಯನ್ನು ಪಡೆದು ಕಾಮಗಾರಿ ಆರಂಭಿಸಲಾಗಿದೆ. ಭೂಕುಸಿತ ಮರುಕಳಿಸದಂತೆ ಕಟ್ಟೆಚ್ಚರ ವಹಿಸಿ, ಕಾಮಗಾರಿ ನಡೆಸಲಾಗುತ್ತಿದೆ. ತಡೆಗೋಡೆ ನಿರ್ಮಾಣ ಕಾಮಗಾರಿ ಆರಂಭವಾದ ಬಳಿಕ ಐಐಎಸ್‌ಸಿ ತಜ್ಞರ ತಂಡವು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿತ್ತು. ಅಲ್ಲದೆ, ಕಾಮಗಾರಿ ಬಗ್ಗೆ ತೃಪ್ತಿ ವ್ಯಕ್ತಪಡಿಸಿತ್ತು ಎಂದರು.

ಚಾಮುಂಡಿಬೆಟ್ಟಕ್ಕೆ ಹೋಗಲು ನಂದಿ ರಸ್ತೆ ಮಾರ್ಗದಲ್ಲಿ ವಾಹನಗಳ ಸಂಚಾರ ನಿಷೇಧಿಸಲಾಗಿದೆ. ಭಕ್ತರು ಹಾಗೂ ಪ್ರವಾಸಿಗರು ಇತರೆ ರಸ್ತೆ ಮೂಲಕವೇ ಬೆಟ್ಟಕ್ಕೆ ತೆರಳುತ್ತಿದ್ದಾರೆ. ತಡೆಗೋಡೆ ಕಾಮಗಾರಿ ಪೂರ್ಣಗೊಂಡು ಕ್ಯೂರಿಂಗ್ ಆದ ಬಳಿಕವಷ್ಟೇ ನಂದಿ ರಸ್ತೆಯನ್ನು ಪ್ರಾಯೋಗಿಕವಾಗಿ ಸಂಚಾರಕ್ಕೆ ಮುಕ್ತಗೊಳಿಸಲಾಗುವುದು ಎಂದು ತಿಳಿಸಿದರು.

ಮೂರು ಬಾರಿ ಕುಸಿತ

ಚಾಮುಂಡಿಬೆಟ್ಟದ ನಂದಿ ರಸ್ತೆಯಲ್ಲಿ ವ್ಯೂ ಪಾಯಿಂಟ್ ಮತ್ತು ನಂದಿ ಪ್ರತಿಮೆ ನಡುವೆ ಇದುವರೆಗೆ 3–4 ಬಾರಿ ಭೂ ಕುಸಿತ ಉಂಟಾಗಿದೆ. 2019ರಲ್ಲಿ ದೊಡ್ಡ ಪ್ರಮಾಣದಲ್ಲಿ ಭೂ ಕುಸಿತ ಸಂಭವಿಸಿತ್ತು ನಂತರ 2021ರ ಅಕ್ಟೋಬರ್ 20ರಲ್ಲಿ ಒಂದು ಬಾರಿ, ಅ.31ರಂದು ಎರಡನೇ ಬಾರಿ ಶೇ.80 ರಸ್ತೆ ಕುಸಿದಿತ್ತು. ನ.4ರಂದು ಮತ್ತೆ ಒಂದು ಭೂಕುಸಿತ ಸಂಭವಿಸಿತ್ತು. ಈ ಹಿಂದೆ ಕುಸಿದಿದ್ದ ಸ್ಥಳದಿಂದ 10 ಮೀ. ಅಂತರದಲ್ಲಿಯೇ ಭೂ ಕುಸಿತಗಳು ಉಂಟಾಗಿದ್ದವು.

2024ರ ಸಂಕ್ರಾಂತಿ ವೇಳೆಗೆ ಅಯೋಧ್ಯೆ ರಾಮಮಂದಿರ ಉದ್ಘಾಟನೆ



ದಾವಣಗೆರೆ: 2024ರ ಸಂಕ್ರಾಂತಿ ವೇಳೆಗೆ ಅಯೋಧ್ಯೆ ರಾಮಮಂದಿರ ಉದ್ಘಾಟನೆ ಆಗಲಿದೆ ಎಂದು ಉಡುಪಿ ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಹೇಳಿಕೆ ನೀಡಿದ್ದಾರೆ. ನಗರದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿ, ರಾಮಮಂದಿರ ನಿರ್ಮಾಣ ಕಾರ್ಯ ತೀವ್ರಗತಿಯಲ್ಲಿ ನಡೆಯುತ್ತಿದೆ. ಈಗಾಗಲೇ ಪ್ರಧಾನಮಂತ್ರಿಗಳ ಆಶಯದಂತೆ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ ವಿಜ್ಞಾನಿಗಳು ಸಂಶೋಧನೆ ಮಾಡುತ್ತಿದ್ದಾರೆ. ರಾಮನವಮಿ ದಿನ ಅಯೋಧ್ಯೆಯ ರಾಮ ಮಂದಿರ ಶ್ರೀರಾಮನ ಮೂರ್ತಿಯ ಮೇಲೆ ತಿಲಕದ ರೀತಿಯಲ್ಲಿ ಸೂರ್ಯನ ಕಿರಣಗಳು ಬೀಳುವಂತೆ ಮಂದಿರ ನಿರ್ಮಾಣದ ಕೆಲಸ ನಡೆಯುತ್ತಿದೆ ಎಂದು ಹೇಳಿದರು. ಇನ್ನು ಪಠ್ಯದಲ್ಲಿ ಭಗವದ್ಗೀತೆಯನ್ನು ಸೇರಿಸಿದರೆ ಒಳ್ಳೆಯದು. ಗೀತೆಯಲ್ಲಿ ಕೃಷ್ಣ ಬೋಧನೆ ಮಾಡಿದ ತತ್ವಗಳ ಅಗತ್ಯ ಇಂದು ಹೆಚ್ಚಾಗಿದೆ. ಇದೇ ಕಾರಣಕ್ಕೆ ಪಠ್ಯದಲ್ಲಿ ಭಗವದ್ಗೀತೆ ಸೇರಿಸಬೇಕು ಎಂದು ವಿಶ್ವಪ್ರಸನ್ನ ತೀರ್ಥಶ್ರೀ ಹೇಳಿದರು.

2023ರ ಡಿಸೆಂಬರ್ ಒಳಗೆ ಗರ್ಭಗುಡಿ ನಿರ್ಮಾಣ: ರಾಮಮಂದಿರ ನಿರ್ಮಾಣ ಕಾರ್ಯವನ್ನು ಈಗ ವೇಗವಾಗಿ ಮಾಡಲಾಗುತ್ತಿದೆ. 2023ರ ಡಿಸೆಂಬರ್ ತಿಂಗಳೊಳಗಾಗಿ ರಾಮಮಂದಿರದ ಗರ್ಭಗುಡಿ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸುವ ಗುರಿಯನ್ನು ಶ್ರೀರಾಮಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟ್ ಹಾಕಿಕೊಂಡಿದೆ. ಗರ್ಭಗುಡಿಯಲ್ಲಿ ರಾಮಲಲ್ಲಾನನ್ನು ಪ್ರತಿಷ್ಠಾಪನೆ ಮಾಡಲಾಗುತ್ತದೆ. ಬಳಿಕ ಗರ್ಭಗುಡಿಯ ದರ್ಶನ ಮಾಡಲು ಭಕ್ತರಿಗೆ ಅವಕಾಶ ನೀಡಲಾಗುತ್ತದೆ. ಶ್ರೀರಾಮಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟ್ ಅನ್ನು ಮಂದಿರ ನಿರ್ಮಾಣಕ್ಕಾಗಿ ಕೇಂದ್ರ ಸರ್ಕಾರ ರಚಿಸಿದ್ದು, ಈ ಟ್ರಸ್ಟ್ ಈಗ ಮಂದಿರ ನಿರ್ಮಾಣದ ಹೊಣೆಯನ್ನು ಹೊತ್ತುಕೊಂಡಿದೆ. ಚಂಪತ್ ರಾಯ್ ಅವರು ಶ್ರೀರಾಮ ಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟ್ ಪ್ರಧಾನ ಕಾರ್ಯದರ್ಶಿಯಾಗಿದ್ದು, ನಿತ್ಯ ಮಂದಿರ ನಿರ್ಮಾಣ ಕಾರ್ಯದ ಉಸ್ತುವಾರಿ ಹಾಗೂ ಮೇಲ್ವಿಚಾರಣೆ ಮಾಡುತ್ತಿದ್ದಾರೆ. 2023ರ ಡಿಸೆಂಬರ್‌ನೊಳಗಾಗಿ ಗರ್ಭಗುಡಿ ನಿರ್ಮಾಣ ಕಾರ್ಯ ಪೂರ್ಣಗೊಳಿಸಲಾಗುತ್ತದೆ. 2024ರ ಏಪ್ರಿಲ್–ಮೇ ತಿಂಗಳಲ್ಲಿ ದೇಶಾದ್ಯಂತ ಲೋಕಸಭಾ ಚುನಾವಣೆ ನಡೆಯಲಿದೆ. ಅದಕ್ಕೂ ಮುನ್ನ ಶತಮಾನದ ಕನಸಾದ ಅಯೋಧ್ಯೆಯ ರಾಮಮಂದಿರದ ಗರ್ಭಗುಡಿ ನಿರ್ಮಿಸಿ ರಾಮಲಲ್ಲಾನನ್ನು ಪ್ರತಿಷ್ಠಾಪನೆ ಮಾಡಬೇಕು ಎನ್ನುವ ಪ್ಲ್ಯಾನ್ ಹಾಕಿಕೊಳ್ಳಲಾಗಿದೆ. ಹೀಗೆ 2024ರ ಏಪ್ರಿಲ್ ತಿಂಗಳಿಗೂ ಮುನ್ನ ರಾಮ ಮಂದಿರದ ಗರ್ಭಗುಡಿ ನಿರ್ಮಾಣವಾದರೇ, ಇದನ್ನು ಇಡೀ ದೇಶದ ಜನರಿಗೆ ತೋರಿಸಲಾಗುತ್ತೆ. ಕೇಂದ್ರದ ಮೋದಿ ಸರ್ಕಾರ ಅಯೋಧ್ಯೆಯಲ್ಲಿ ಭವ್ಯ ರಾಮ ಮಂದಿರ ನಿರ್ಮಾಣ ಮಾಡಿತು ಎಂದು ದೇಶದ ಜನರಿಗೆ ಹೇಳಲಾಗುತ್ತೆ. ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣವಾದರೇ, ಅದರ ಕ್ರೆಡಿಟ್ ಕೇಂದ್ರ ಸರ್ಕಾರಕ್ಕೆ ಬರುತ್ತದೆ.

ರಾಮನಗರದಿಂದ ಅಯೋಧ್ಯೆಗೆ ಬೆಳ್ಳಿ ಇಟ್ಟಿಗೆ ಅರ್ಪಣೆ

ರಾಮನಗರ: ಅಯೋಧ್ಯೆ ರಾಮಮಂದಿರ ನಿರ್ಮಾಣಕ್ಕೆ ರಾಮ ನಗರದಿಂದ ಬೆಳ್ಳಿ ಇಟ್ಟಿಗೆ ಅರ್ಪಿಸಲಾಗುತ್ತಿದೆ. ಬೆಳ್ಳಿ ಇಟ್ಟಿಗೆಗೆ ರಾಮನ ಭಕ್ತರಿಂದ ಇಂದು ವಿಶೇಷ ಪೂಜೆ ಸಲ್ಲಿಸಲಾಯಿತು. ಮಾಜಿ ಸಚಿವ ಸಿ.ಪಿ.ಯೋಗೇಶ್ವರ್ ಸಮ್ಮುಖದಲ್ಲಿ ರಾಮನಗರ ಕೆಂಗಲ್ ಆಂಜನೇಯ ದೇವಾಲಯ, ರಾಮದೇವರ ಬೆಟ್ಟದಲ್ಲಿ ಪೂಜೆ ಸಲ್ಲಿಸಲಾಯಿತು. ಬಿಜೆಪಿ ಮುಖಂಡ ಗೌತಮ್‌ಗೌಡ ನೇತೃತ್ವದಲ್ಲಿ 150 ಮಂದಿ ಶ್ರೀರಾಮನ ಭಕ್ತರು ಅಯೋಧ್ಯೆಗೆ ಬೆಳ್ಳಿ ಇಟ್ಟಿಗೆ ಸಮರ್ಪಿಸಲು ನಿರ್ಧರಿಸಲಾಯಿತು.

ಮೈಸೂರಲ್ಲಿ ಮಲೆನಾಡ ಅನುಭವ...!

ಜಿನುಗುವ ಮಳೆ, ಚುಮು ಚುಮು ಚಳಿ, ಮಬ್ಬಾದ ವಾತಾವರಣ, ಒಂಥರಾ ಅನುಭವ

ಮೈಸೂರು, ಡಿ.12(ಎಂಕೆ)– ಜಿಟಿ ಜಿಟಿ ಮಳೆ, ಕೊರೆಯುವ ಚಳಿ, ಮೋಡ ಕವಿದ ವಾತಾವರಣದಿಂದ ಮಂಜಿನ ನಗರಿಯಂತಾಗಿದೆ ಮೈಸೂರು...!

ಮಾಂಡಸ್ ಚಂಡಮಾರುತದ ಪರಿಣಾಮ ಮಂಕು ಮಂಕಾಗಿರುವ ಮೈಸೂರಿನಲ್ಲಿನ ಜನರು ನಾವು ಮಂಜಿನ ನಗರಿ ಮಡಿಕೇರಿಯಲ್ಲೋ ಅಥವಾ ಸುಂದರ ಗಿರಿಧಾಮಗಳ ತಾಣವಾದ ಊಟಿಯಲ್ಲೋ ಇದ್ದೀವಿ ಎಂದು ಭಾಸವಾಗುತ್ತಿದೆ.

ಸಣ್ಣನೆಯ ಸೋನೆ ಮಳೆ, ಮೈ ನಡುಗಿಸುವ ತಂಗಾಳಿ ಮೈಸೂರಿನಲ್ಲಿ ಮತ್ತೊಮ್ಮೆ ಸೋನೆ ಮಳೆ ಎಂಬಂತಾಗಿದೆ. ಕೈಯ್ಯಲ್ಲಿ ಛತ್ರಿ, ತಲೆಗೆ ಬೆಚ್ಚನೆಯ ಉಲ್ಲನ್ ಟೋಪಿ ಹಾಗೂ ದೇಹವನ್ನು ಬಿಸಿಯಾಗಿಸುವ ಸ್ವೇಟರ್‌ಗಳನ್ನು ಧರಿಸಿಕೊಂಡು ಅಡ್ಡಾಡುವವರು ಎಲ್ಲೆಡೆ ಕಾಣುತ್ತಿದ್ದಾರೆ.

ಮೈಸೂರಿನ ಸುಪ್ರಸಿದ್ಧ ಪ್ರವಾಸಿ ತಾಣಗಳಾದ ಚಾಮುಂಡಿಬೆಟ್ಟ, ಮೃಗಾಲಯ, ಕೆಆರ್‌ಎಸ್ ಬೃಂದಾವನ ಉದ್ಯಾನ, ಅಂಬಾವಿಲಾಸ ಅರಮನೆ, ಬಲಮುರಿ–ಎಡಮುರಿ, ರಂಗನತಿಟ್ಟು ಪಕ್ಷಿಧಾಮ, ಕುಕ್ಕರಹಳ್ಳಿ ಹಾಗೂ ಕಾರಂಜಿಕೆರೆ, ಸಂತ ಫಿಲೋಮಿನಾ ಚರ್ಚ್, ಮೈಸೂರು ರೈಲ್ವೆ ಸಂಗ್ರಹಾಲಯ, ಲಲಿತ ಮಹಲ್ ಪ್ಯಾಲೆಸ್‌ಗೆ ಭೇಟಿ ನೀಡುವ ಪ್ರವಾಸಿಗರು ಮೈಕೈ ಮುದುಡಿಕೊಂಡು ಸಾಗುತ್ತಿದ್ದಾರೆ.

ವ್ಯಾಪಾರಸ್ಥರು, ಕೂಲಿ ಕಾರ್ಮಿಕರಿಗೆ ಸಂಕಷ್ಟ ಜಡಿ ಮಳೆಯಿಂದಾಗಿ ದೇವರಾಜ ಮಾರುಕಟ್ಟೆ, ಶಿವರಾಂಪೇಟೆ, ಸಂತೆಪೇಟೆ, ಅಗ್ರಹಾರ ಮಾರುಕಟ್ಟೆ, ಎಂಜಿ ರಸ್ತೆ ಮಾರುಕಟ್ಟೆ ಸೇರಿದಂತೆ ಹಲವು ವ್ಯಾಪಾರ–ವಹಿವಾಟು ನಡೆಯುವ ಸ್ಥಳಗಳಲ್ಲಿ ಗ್ರಾಹಕರ ಸಂಖ್ಯೆ ತುಸು ಕಡಿಮೆಯಾಗಿದೆ. ಜನರಿಂದ ತುಂಬಿ ತುಳುಕುತ್ತಿದ್ದ ದೇವರಾಜ ಮಾರುಕಟ್ಟೆಯಲ್ಲೂ ವ್ಯಾಪಾರ ಕುಂಠಿತವಾಗಿತ್ತು. ರಸ್ತೆ ಬದಿ ವ್ಯಾಪಾರಿಗಳಂತು ಮಳೆಯ ನಡುವೆಯೇ ದೊಡ್ಡ ದೊಡ್ಡ ಛತ್ರಿಗಳನ್ನು ಹಾಕಿಕೊಂಡು ವ್ಯಾಪಾರ ಮಾಡಲು ಮುಂದಾದರೂ ವ್ಯಾಪಾರ ಜೋರಾಗಿದೆ ಎನ್ನುವಷ್ಟರ ಮಟ್ಟಿಗೆ ಇರಲಿಲ್ಲ.

ವ್ಯಾಪಾರಸ್ಥರದ್ದು ಒಂದು ಬಗೆಯ ಗೋಳಾದರೆ, ಕೂಲಿ ಕಾರ್ಮಿಕರ ಸಂಕಷ್ಟವಂತು ಹೇಳತೀರದು. ದಿನಗೂಲಿ ನಂಬಿ ಜೀವನ ನಡೆಸುತ್ತಿರುವವರು ಮಳೆಯಿಂದಾಗಿ ಕೆಲಸಕ್ಕಾಗಿ ಪರದಾಡುವಂತಾಗಿದೆ. ಕಟ್ಟಡ ನಿರ್ಮಾಣ ಕಾರ್ಮಿಕರು ಕೆಲಸ ನಿಲ್ಲಿಸಿದರೆ, ಮಾರುಕಟ್ಟೆಗಳಲ್ಲಿ ಕೂಲಿ ಕೆಲಸ ಮಾಡುವವರು ಮಳೆ ನಡುವೆಯೇ ಕಾರ್ಯನಿರತರಾಗಿದ್ದ ದೃಶ್ಯಗಳ ಸಾಮಾನ್ಯವಾಗಿದ್ದವು.

ಶಾಲೆಗಳಿಗೆ ರಜೆ: ವಿದ್ಯಾರ್ಥಿಗಳ ಹಿತ ದೃಷ್ಟಿಯಿಂದ ಮೈಸೂರು ತಾಲೂಕು ವಲಯದ ಸರ್ಕಾರಿ, ಅನುದಾನಿತ ಹಾಗೂ ಅನುದಾನ ರಹಿತ 1 ರಿಂದ 10ನೇ ತರಗತಿವರೆಗಿನ ಶಾಲೆಗಳಿಗೆ ಸೋಮವಾರ ರಜೆ ಘೋಷಣೆ ಮಾಡಲಾಯಿತು. ರಜೆ ದಿನವನ್ನು ಮುಂದಿನ ಶನಿವಾರ ಪೂರ್ಣ ತರಗತಿ ನಡೆಸುವ ಮೂಲಕ ಹೊಂದಾಣಿಕೆ ಮಾಡಿಕೊಳ್ಳುವಂತೆ ಸೂಚಿಸಲಾಗಿತ್ತು.

ಸದ್ಯ ಶಾಲೆಗಳಲ್ಲಿ ಟೆಸ್ಟ್‌ಗಳು ನಡೆಯುತ್ತಿದ್ದು, ವಿದ್ಯಾರ್ಥಿಗಳ ಕಲಿಕೆಗೂ ತುಸು ತೊಂದರೆ ಉಂಟಾಗಿದೆ. ಮಲೆನಾಡು ಪ್ರದೇಶದಲ್ಲಿ ಮಳೆಯಿಂದಾಗಿ ಶಾಲಾ–ಕಾಲೇಜುಗಳಿಗೆ ರಜೆ ಘೋಷಣೆ ಮಾಡುವುದು ಸಾಮಾನ್ಯ. ಆದರೆ ಮೈಸೂರಿನಲ್ಲೂ ಮಳೆ ಕಾರಣದಿಂದಾಗಿ ರಜೆ ಘೋಷಣೆ ಮಾಡಿರುವುದು ವಿಶೇಷವೇ ಎನ್ನುವಂತಾಗಿದೆ.

ರಸ್ತೆಗಿಳಿದ ಕಾರುಗಳು: ಮನೆಯಲ್ಲಿ ಕಾರಿದ್ದರೂ ದ್ವಿಚಕ್ರವಾಹನ ಬಳಸುತಿದ್ದವರು ಮಳೆಯಿಂದಾಗಿ ಕಾರನ್ನೇ ಬಳಸುವಂತಾಗಿದೆ. ಇದರಿಂದ ಮಾಮೂಲಿಗಿಂತ ಹೆಚ್ಚಿನ ಸಂಖ್ಯೆಯ ಕಾರುಗಳು ರಸ್ತೆಗಿಳಿದ್ದು, ನಗರ ಪ್ರಮುಖ ರಸ್ತೆಗಳಲ್ಲಿ ಸಂಚಾರ ದಟ್ಟವಾಗಿತ್ತು. ರಸ್ತೆ ಬದಿಯಲ್ಲಿ ಕಾರ್ ಪಾರ್ಕಿಂಗ್ ಮಾಡಿ ಶಾಪಿಂಗ್ ಮಾಡುವವರ ಸಂಖ್ಯೆ ಹೆಚ್ಚಿತ್ತು.



ಕಡಿಮೆಯಾಗುವ ಸಾಧ್ಯತೆ...

ಡಿ.14ರವರೆಗೆ ಮಳೆ ಮುಂದುವರಿಯಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದ್ದು, ಡಿ.12ರ ಸಂಜೆ ವೇಳೆಗೆ ಮಳೆ ಪ್ರಮಾಣ ಕಡಿಮೆಯಾದಂತಿತ್ತು. ಇನ್ನೂ ನಾಳೆ(ಡಿ.13) ಎಂದಿನಂತೆ ಚಳಿ ಇದ್ದರೂ ಮಳೆ ಕಡಿಮೆಯಾಗುವ ಸಾಧ್ಯತೆ ಇದೆ ಎನ್ನಲಾಗುತ್ತಿದೆ.

ಮಂದ್‌ನಮ್ಮೆಯಲ್ಲಿ ಕೊಡವ ಸಂಸ್ಕೃತಿ ಅನಾವರಣ





ಗೋಣಿಕೊಪ್ಪ, ಡಿ.12– ಮಾಯಮುಡಿ ಗ್ರಾಮದ ಕೋಲ್‌ಬಾಣೆ ಕಂಗಳತ್ತ್‌ನಾಡ್ ಮಂದ್‌ನಮ್ಮೆಯಲ್ಲಿ ಮಂದ್ ತೊರ್‌ಪೊ, ಮಂದ್ ಪತ್ತ್‌ವೊ, ಕೊಡವ ನೃತ್ಯ, ಸಾಧಕರಿಗೆ ಸನ್ಮಾನ, ಊರೋರ್ಮೆ ಕಾರ್ಯಕ್ರಮದಲ್ಲಿ ನಾಡಿನ ಜನರು ಪಾಲ್ಗೊಂಡು ಸಂಭ್ರಮಿಸಿದರು.

ಬಾಳಾಜಿ, ರುದ್ರಬೀಡು ಕೇರಿಯ ಕೊಡವರು ಕುಪ್ಯಚೇಲೆ, ಮಂಡೆತುಣಿ, ಕೊಡವ ಸೀರೆಯಲ್ಲಿ ಪಟ್ಟ್ ಹಿಡಿದು ಮಂದ್ ಹತ್ತುವ ಕಾರ್ಯ ನಡೆಸಿದರು. ನಾಡ್‌ತಕ್ಕ ಬೊಳ್ಳಜೀರ ಜಿ. ದೇವಯ್ಯ ಪಟ್ಟ್ ಹಿಡಿದು ಸ್ವಾಗತಿಸಿಕೊಂಡರು. ಮೂರು ಕೇರಿಯ ಯುವಕರು ಕೋಲಾಟ್ ಮೂಲಕ ಮಂದ್ ಮರಿವೊ ಆಚರಣೆ ನಡೆಸಿಕೊಟ್ಟರು.

ಚಂಗುಲಂಡ ಸೂರಜ್ ತಂಡದಿಂದ ಕೋಲಾಟ್, ಪರೆಯಕಳಿ, ಬೊಳಕಾಟ್, ಹಾಗೂ ಉಮ್ಮತ್ತಾಟ್, ಚೆಟ್ಟಳ್ಳಿ ತಂಡದ ಉಮ್ಮತ್ತಾಟ್ ಪ್ರದರ್ಶನ ಕೊಡವ ಕಲೆಯನ್ನು ಬಿಂಬಿಸಿತು. ಪುತ್ತಾಮನೆ ವಿದ್ಯಾ ಜಗದೀಶ್, ನಾಳಿಯಮ್ಮಂಡ ಧನ್ಯ ಸುರೇಶ್ ಜೋಡಿ ಕೊಡವ ನೃತ್ಯದ ಮೂಲಕ ಜನಮನ ಗೆದ್ದರು. ಮಂದ್ ತೊರ್‌ಪೊ ಕಾರ್ಯ ಕ್ರಮವನ್ನು ಸಣ್ಣುವಂಡ ಕುಟುಂಬ ಅಧ್ಯಕ್ಷ ಸಣ್ಣುವಂಡ ಪಿ. ಸಂಪತ್ ನಡೆಸಿಕೊಟ್ಟರು. ಗ್ರಾಮದ ಸಣ್ಣುವಂಡ ಕೆ. ಕಾವೇರಮ್ಮ ಅವರಿಗೆ 100 ವರ್ಷ (ಶತಾಯುಷಿ) ಪೂರೈಸಿದ ಸಂಭ್ರಮದಲ್ಲಿ ಊರೋರ್ಮೆ ಮೂಲಕ ಅನ್ನದಾನ ಕಾರ್ಯ ನಡೆಯಿತು.

ಕಂಗಳತ್ತ್‌ನಾಡ್ ಮಂದ್ ಸಮಿತಿ ಸಂಚಾಲಕ ಸಣ್ಣುವಂಡ ಬಿ. ರಮೇಶ್ ಮಾತನಾಡಿ, ಕೊಡವರಿಗೆ ಮಂದ್ ಕೂಡ ಐನ್‌ಮನೆಯಷ್ಟೆ ಶ್ರೇಷ್ಠತೆಯಾಗಿದೆ. ಮದುವೆಯಾದ ವರ್ಷ ಮಂದ್‌ಗೆ ಹತ್ತುವ ಆಚರಣೆ ಇದೆ. ಸಣ್ಣ ಮಕ್ಕಳನ್ನು ಕೂಡ ಮಂದ್‌ಗೆ ಕರೆತರುವುದು, ಮೊದಲ ಬಾರಿಗೆ ಕೊಡವ ಸಾಂಪ್ರದಾಯಿಕ ಉಡುಪು ತೊಡುವ ಗಂಡಸರು ಕೂಡ ಮಂದ್‌ಗೆ ಮೊದಲ ಬಾರಿ ಆಗಮಿಸಿ, ಕೋಲಾಟ್ ನಡೆಸುವ ಆಚರಣೆ ಹಿಂದಿನಿಂದ ನಡೆದುಕೊಂಡು ಬರುತ್ತಿದೆ. ಇದನ್ನು ಉಳಿಸಿಕೊಳ್ಳುವುದು ಮುಖ್ಯ ಎಂದರು. ಪೊನ್ನಂಪೇಟೆ ಅರಣ್ಯ ಕಾಲೇಜು ಮುಖ್ಯಸ್ಥ ಡಾ. ಚೆಪ್ಪುಡೀರ ಜಿ. ಕುಶಾಲಪ್ಪ ಮಾತನಾಡಿ, ಪಟ್ಪೋಲೆ ಪಳಮೆ ಪುಸ್ತಕ ಸಾಂಸ್ಕೃತಿಕ ಬದುಕಿಗೆ ದಾರಿ ತೋರಿಸುತ್ತದೆ. ಓದುವ ಮೂಲಕ ನಮ್ಮ ಸಂಸ್ಕೃತಿ, ಆಚಾರ–ವಿಚಾರ ಪೋಷಿಸಬೇಕಿದೆ. ಮಣ್ಣು ಉಳಿಸಿಕೊಳ್ಳುವ ಜವಬ್ದಾರಿ ಎಲ್ಲರಿಗೂ ಅವಶ್ಯ ಎಂದರು.

ಪೊನ್ನಂಪೇಟೆ ಕೊಡವ ಸಮಾಜ ಅಧ್ಯಕ್ಷ ಕಾಳಿಮಾಡ ಮೋಟಯ್ಯ ಮಾತನಾಡಿ, ಸಂತತಿ ಅಳಿಯದಂತೆ ಕಾಪಾಡಿಕೊಳ್ಳಬೇಕು ಎಂದರು.

ಸನ್ಮಾನ ; ಕಂಗಳತ್ತ್‌ನಾಡ್‌ಗೆ ಒಳಪಡುವ ಮಾಯಮುಡಿ ಗ್ರಾಮ ಪಂಚಾಯಿತಿ ಮಟ್ಟದ ಏಳು ಮಂದಿ ಸಾಧಕರನ್ನು ಸನ್ಮಾನಿಸಲಾಯಿತು. ಉದ್ಯೋಗ ಕ್ಷೇತ್ರದಲ್ಲಿ ಪೊಲೀಸ್ ವರಿಷ್ಠಾಧಿಕಾರಿ ಕ್ಯಾ. ಮಲಚೀರ ಎ. ಅಯ್ಯಪ್ಪ ಅವರ ಪರವಾಗಿ ಅವರ ತಂದೆ ಮಲಚೀರ ಅಪ್ಪಣ್ಣ, ಶಿಕ್ಷಣದಲ್ಲಿ ಪೊನ್ನಂಪೇಟೆ ಅರಣ್ಯ ಕಾಲೇಜು ಮುಖ್ಯಸ್ಥ ಡಾ. ಚೆಪ್ಪುಡೀರ ಜಿ. ಕುಶಾಲಪ್ಪ, ಕ್ರೀಡೆಯಲ್ಲಿ ಕರಾಟೆ ಪಟು ಚೆಪ್ಪುಡೀರ ಅರುಣ್ ಮಾಚಯ್ಯ, ಸಮಾಜ ಸೇವೆಯಲ್ಲಿ ಚೆಪ್ಪುಡೀರ ರಾಧಾ ಅಚ್ಚಯ್ಯ, ಕೊಡವಾಮೆ ವಿಭಾಗದಲ್ಲಿ ಜಮ್ಮಡ ಸಿ. ಮೋಹನ್, ಸಂಘಟನೆಗೆ ಸಹಕಾರದಲ್ಲಿ ಮದ್ರೀರ ಕರುಂಬಯ್ಯ, ಮಾಧ್ಯಮ ಕ್ಷೇತ್ರದ ಸಾಧನೆಗಾಗಿ ಸಣ್ಣುವಂಡ ಕಿಶೋರ್ ನಾಚಪ್ಪ ಸನ್ಮಾನ ಸ್ವೀಕರಿಸಿದರು.

ಕಾಫಿ ಬೆಳೆಗಾರರು ವಿದ್ಯುತ್ ಬಿಲ್ ಬಾಕಿ ಡಿಸೆಂಬರ್ ಅಂತ್ಯದೊಳಗೆ ಪಾವತಿಸಬೇಕು

● ಚೆಸ್ಕಾಂ ಎಂಡಿ ಜಯವಿಭವಸ್ವಾಮಿ ಸ್ಪಷ್ಟನೆ ● ಮಾನವೀಯ ದೃಷ್ಟಿಯಿಂದ ಅಲ್ಲಿವರೆಗೆ ವಿದ್ಯುತ್ ಕಡಿತಗೊಳಿಸದಿರಲು ಸೂಚನೆ



ಮಡಿಕೇರಿ, ಡಿ. 12– ಕಾಫಿ ಬೆಳೆಗಾರರು ಪಾವತಿಸಬೇಕಾದ ವಿದ್ಯುತ್ ಬಿಲ್ ಬಾಕಿ ಹಣವನ್ನು ಡಿಸೆಂಬರ್ ಅಂತ್ಯದೊಳಗೆ ಪಾವತಿಸಬೇಕೆಂದೂ ಅಲ್ಲಿಯ ವರೆಗೆ ಮಾನವೀಯತೆ ದೃಷ್ಟಿ ಯಿಂದ ವಿದ್ಯುತ್ ಸಂಪರ್ಕ ಕಡಿತಗೊಳಿಸಬಾರದು ಎಂದು ತಾವು ಚೆಸ್ಕಾಂ ಕಾರ್ಯಪಾಲಕ ಅಭಿಯಂತರರಿಗೆ ಸೂಚನೆ ನೀಡಿರು ವುದಾಗಿ ತಿಳಿಸಿರುವ ಚೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಜಯವಿಭವಸ್ವಾಮಿ, ಸರ್ಕಾರ ದಿಂದ ಲಿಖಿತ ಆದೇಶ ಬರುವವರೆಗೂ ಬಾಕಿ ಪಾವತಿಸಬೇಡಿ ಎಂದು ಬೆಳೆಗಾರರಿಗೆ ತಾವು ತಿಳಿಸಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಮಡಿಕೇರಿ ಜಿಪಂ ಕಚೇರಿಗೆ ಕಾರ್ಯ ನಿಮಿತ್ತ ತಾವು ಡಿಸೆಂಬರ್ 10ರಂದು ಭೇಟಿ ನೀಡಿದ್ದಾಗ ಕಾಫಿ ಬೆಳೆಗಾರರು ತಮ್ಮನ್ನು ಭೇಟಿಯಾಗಿ ಕಾಫಿ ಬೆಳೆಗಾರರ ವಿದ್ಯುತ್ ಬಿಲ್ ಮನ್ನಾ ಮಾಡುವುದಾಗಿಯೂ, ಹೀಗಾಗಿ ವಿದ್ಯುತ್ ಬಿಲ್ ಅನ್ನು ಪಾವತಿಸದಿರು ವಂತೆಯೂ ಸರ್ಕಾರ ಸೂಚಿಸಿದೆ. ಆದ್ದರಿಂದ ಬೆಳೆಗಾರರು ವಿದ್ಯುತ್ ಬಿಲ್ ಪಾವತಿಸಿಲ್ಲ ಎಂದು ತಿಳಿಸಿದರಲ್ಲದೇ, ಬೆಳೆಗಾರರ ಬಾಕಿ ಮನ್ನಾ ಮಾಡಬೇಕೆಂದು, ಅಲ್ಲಿಯವರೆಗೂ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸ ಬಾರದು ಎಂದು ಮನವಿ ಮಾಡಿದ್ದರು. ಆದರೆ, ಸರ್ಕಾರವು ಅಂತಹ ಯಾವುದೇ ಘೋಷಣೆ ಮಾಡಿರುವುದಿಲ್ಲ. ಯಾರಾದರೂ ಮೌಖಿಕವಾಗಿ ಹೇಳಿದ್ದರೆ ಅದನ್ನು ಸರ್ಕಾರದ ಆದೇಶ ಎಂದು ಪರಿಗಣಿಸಲಾಗುವುದಿಲ್ಲ. ಆದ್ದರಿಂದ ವಿದ್ಯುತ್ ಬಿಲ್ ಕಟ್ಟದಿರಲು ಇದು ಸಕಾರಣವಲ್ಲ ಎಂದು ಬೆಳೆಗಾರರಿಗೆ ತಾವು ತಿಳಿಸಿದ್ದಾಗಿ ಜಯವಿಭವ ಸ್ವಾಮಿ ಹೇಳಿದ್ದಾರೆ.

ಹಳೆಯ ಬಾಕಿ ಮನ್ನಾ ಮಾಡಲು ಕೋರಿ ಬೆಳೆಗಾರರು ಈ ಸಂದರ್ಭದಲ್ಲಿ ಮನವಿ ಸಲ್ಲಿಸಿದ್ದು ಅದನ್ನು ಕೂಡಲೇ ಸರ್ಕಾರದ ಅವಗಾಹನೆಗೆ ತರಲಾಗುವುದು. ಈ ಹಿಂದೆಯೇ ವಿದ್ಯುತ್ ಬಿಲ್ ಮನ್ನಾ ಬಗ್ಗೆ ಸರ್ಕಾರದ ಮಟ್ಟದಲ್ಲಿ ಚರ್ಚೆ ನಡೆದಿದ್ದು, ಸರ್ಕಾರ ಬಿಲ್ ಮನ್ನಾ ಮಾಡಲು ಆದೇಶಿಸಿಲ್ಲ. ಆದ್ದರಿಂದ ಹಳೆಯ ಬಾಕಿ ಉಳಿಸಿಕೊಂಡಿರುವ ಗ್ರಾಹಕರು ಬಾಕಿಯನ್ನು ಕಟ್ಟಬೇಕು ಎಂದು ಬೆಳೆಗಾರರಿಗೆ ಸೂಚಿಸಲಾಗಿದೆ. ಡಿಸೆಂಬರ್ ಅಂತ್ಯದವರೆಗೆ ವಿದ್ಯುತ್ ಸಂಪರ್ಕ ಕಡಿತಗೊಳಿಸುವುದಿಲ್ಲ ಎಂದು ಹೇಳಲಾಗಿದೆಯಷ್ಟೇ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಡಿ.13, 16, 20 ರಂದು ಬೃಹತ್ ಉದ್ಯೋಗ ಮೇಳ

ಮಡಿಕೇರಿ, ಡಿ.12– ಕೊಡಗು ಜಿಲ್ಲಾಡಳಿತ, ಕೌಶಲ್ಯ ಅಭಿವೃದ್ಧಿ ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆ, ಜಿಲ್ಲಾ ಕೌಶಲ್ಯ ಮಿಷನ್ ವತಿಯಿಂದ ಜಿಲ್ಲೆಯ ಕುಶಾಲನಗರ, ಮಡಿಕೇರಿ ಹಾಗೂ ಗೋಣಿಕೊಪ್ಪದಲ್ಲಿ ಬೃಹತ್ ಉದ್ಯೋಗ ಮೇಳ ಜರುಗಲಿದ್ದು, ಅರ್ಹರು ಇದರ ಸದುಪಯೋಗ ಪಡೆಯುವಂತೆ ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ ಅವರು ಕೋರಿದ್ದಾರೆ.

ಬೃಹತ್ ಉದ್ಯೋಗ ಮೇಳ ಸಂಬಂಧ ಜಿಲ್ಲಾಧಿಕಾರಿ ಕಚೇರಿಯಲ್ಲಿ ಇತ್ತೀಚೆಗೆ ಕರಪತ್ರ ಬಿಡುಗಡೆ ಮಾಡಿ ಮಾತನಾಡಿದರು. ಡಿಸೆಂಬರ್, 13 ರಂದು ಕುಶಾಲನಗರ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜು, ಡಿಸೆಂಬರ್, 16 ರಂದು ಮಡಿಕೇರಿ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಹಾಗೂ ಡಿಸೆಂಬರ್, 20 ರಂದು ಗೋಣಿಕೊಪ್ಪ ಕಾವೇರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯಾಯ ದಿನಗಳಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 4 ಗಂಟೆ ವರೆಗೆ ಉದ್ಯೋಗ ಮೇಳ ನಡೆಯಲಿದೆ ಎಂದು ತಿಳಿಸಿದರು.

10ನೇ ತರಗತಿ, ಪಿಯುಸಿ, ಐಟಿಐ, ಡಿಪ್ಲೋಮಾ, ಎಂಜಿನಿಯರಿಂಗ್ ಹಾಗೂ ಯಾವುದೇ ಪದವಿ ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳು ಉದ್ಯೋಗ ಮೇಳದಲ್ಲಿ ಭಾಗವಹಿಸಬಹುದು. 300 ಕ್ಕಿಂತ ಹೆಚ್ಚು ಉದ್ಯೋಗಗಳಿಗೆ ನೇಮಕಾತಿ ನಡೆಯಲಿದೆ. ಜಸ್ಟ್ ಡಯಲ್, ಪ್ರೇರಣಾ ಮೋಟಾರ್ಸ್ ಪ್ರೈ.ಲಿ., ಟ್ರಿಟೆಂಟ್ ಅಟೋ ಮೊಬೈಲ್ ಪ್ರೈ ಲಿ., ನೆಟ್ಟೂರು ಟೆಕ್ನಿಕಲ್ ಟ್ರೈನಿಂಗ್ ಫೌಂಡೇಶನ್, ಮದರ್‌ಸನ್ ಬೆಂಗಳೂರು, ಹೊಂಡಾ ಸನ್ ಬ್ರೈಟ್, ದಿ ನುಡ್ಜ್ ಫೌಂಡೇಶನ್, ಅಮನ್‌ವನ ರೆಸಾರ್ಟ್, ವೀರ ಭೂಮಿ ರೆಸಾರ್ಟ್, ಪೂಜ್ಯಿಟೆಕ್ ಪ್ರೈ.ಲಿ. ಮತ್ತು ಸ್ವರ್ಣ ಭೂಮಿ ರೆಸಾರ್ಟ್ ಮೊದಲಾದ 30 ಕ್ಕೂ ಹೆಚ್ಚು ಪ್ರತಿಷ್ಠಿತ ಕಂಪನಿಗಳು ಉದ್ಯೋಗ ಮೇಳದಲ್ಲಿ ಭಾಗವಹಿಸಲಿವೆ.

ಹೆಚ್ಚಿನ ಮಾಹಿತಿಗೆ ಜಿಲ್ಲಾ ಕೌಶಲ್ಯಾಭಿವೃದ್ಧಿ ಕಚೇರಿ, ಕೊಡಗು ಜಿಲ್ಲೆ, ಇವರನ್ನು ಕಚೇರಿ ವೇಳೆಯಲ್ಲಿ ಹಾಗೂ ದೂ.ಸಂ.08272–225851/ 9738361502/ 8123312319/ 8296020826 ನ್ನು ಸಂಪರ್ಕಿಸಿ ಮಾಹಿತಿ ಪಡೆಯಬಹುದು ಎಂದು ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ ಉಮಾ ಅವರು ತಿಳಿಸಿದ್ದಾರೆ.

ಮಕ್ಕಳಲ್ಲಿ ಓದುವ ಆಸಕ್ತಿ ಬೆಳೆಸದ ಪೋಷಕರು

ಡಾ. ಕಾಳಿಮಾಡ ಕೆ. ಶಿವಪ್ಪ ವಿಷಾದ



ಗೋಣಿಕೊಪ್ಪ, ಡಿ.12– ಮಕ್ಕಳಲ್ಲಿ ಓದುವ ಅಭಿರುಚಿಯನ್ನು ಬೆಳಸುವಲ್ಲಿ ಪಾಲಕರು ಕರ್ತವ್ಯವನ್ನು ಮರೆಯುತ್ತಿರುವುದು ಆತಂಕಕಾರಿ ಎಂದು ಅಖಿಲ ಭಾರತೀಯ ಸಾಹಿತ್ಯ ಪರಿಷತ್ ಜಿಲ್ಲಾ ಉಪಾಧ್ಯಕ್ಷ ಡಾ. ಕಾಳಿಮಾಡ ಕೆ. ಶಿವಪ್ಪ ವಿಷಾದ ವ್ಯಕ್ತಪಡಿಸಿದರು.

ಗೋಣಿಕೊಪ್ಪ ಅನುದಾನಿತ ಪ್ರೌಢಶಾಲಾ ಸಭಾಂಗಣದಲ್ಲಿ ಆಯೋಜಿಸಿದ್ದ ತಾಲೂಕು ಮಟ್ಟದ ಭಾರತೀಯ ಸಾಹಿತ್ಯ ವೈಭವ ಕಾರ್ಯಕ್ರಮದಲ್ಲಿ ಮಾತನಾಡಿ, ಬರಹಗಾರರು ಹೆಚ್ಚಾಗುತ್ತಿದರೂ, ಓದುಗರ ಸಂಖ್ಯೆ ಕ್ಷೀಣಿಸುತ್ತಿದೆ. ಮಕ್ಕಳಲ್ಲಿ ಓದಿನ ಅಭಿರುಚಿ ಇಲ್ಲದೇ ಇರುವುದು ಈ ಪರಿಣಾಮಕ್ಕೆ ಕಾರಣವಾಗಿದೆ. ಮಕ್ಕಳಲ್ಲಿ ಇರುವ ಮೊಬೈಲ್ ಗೀಳನ್ನು ಕಡಿಮೆ ಮಾಡಲು ಪುಸ್ತಕಗಳ ಬಗ್ಗೆ ಆಸಕ್ತಿ ಬೆಳೆಸಬೇಕು. ಪಾಲಕರು ಕೂಡ ಈ ಬಗ್ಗೆ ಎಚ್ಚೆತ್ತುಕೊಳ್ಳಬೇಕು. ರಾಮಾಯಣ, ಮಹಾಭಾರತದಂತಹ ಕಾವ್ಯಗಳು ಭಾರತದ ಸಾಹಿತ್ಯ ಪರಂಪರೆಯನ್ನು ಬೆಳೆಸಿಕೊಂಡಿದ್ದು, ಜ್ಞಾನದ ಅನುಭವವನ್ನು ನೀಡುತ್ತಿದೆ. ವಿವಿಧ ಸಾಹಿತ್ಯ ಪ್ರಕಾರಗಳು ಕನ್ನಡಕ್ಕೆ ಅನುವಾದಗೊಳ್ಳುವ ಕಾರ್ಯ ಹೆಚ್ಚಾಗಬೇಕು ಎಂದರು.

ಅಖಿಲ ಭಾರತೀಯ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿ ಡಾ. ಆನಂದ್ ಕರ್ಲಾ ಹಾಗೂ ಸಾಹಿತಿ ಕೆ. ಆರ್ ವಿನೋದ್ ಸಾಹಿತ್ಯ ಪರಂಪರೆಯ ಬಗ್ಗೆ ಮಾತನಾಡಿದರು.

ಕವಿ ಜಗದೀಶ್ ಜೋಡುಬೀಟಿ 'ನನಗೂ ಒಬ್ಬಳು ಮಗಳಿರಬೇಕಿತ್ತು' ಎಂಬ ಕಾವ್ಯವಾಚನ ಮಾಡಿದರು. ಈ ಸಂದರ್ಭ ಡಾ. ಆನಂದ್ ಕರ್ಲ ಅವರ ಚುಟುಕು ಪುಸ್ತಕವನ್ನು ಲೋಕಾರ್ಪಣೆಗೊಳಿಸಲಾಯಿತು. ಸರ್ವದೈವತಾ ವಿದ್ಯಾಸಂಸ್ಥೆಯ ಮುಖ್ಯ ಶಿಕ್ಷಕಿ ಮನೆಯಪಂಡ ಶೀಲಾ ಬೋಪಣ್ಣ, ಪ್ರಮುಖರಾದ ನಾರಾಯಣ ಸ್ವಾಮಿ ನಾಯ್ಡು ಇದ್ದರು. ವಿದ್ಯಾರ್ಥಿಗಳಿಗೆ ಚಿತ್ರಕಲಾ ಸ್ಪರ್ಧೆ ಮತ್ತು ನೃತ್ಯ ಸ್ಪರ್ಧೆ ನಡೆಯಿತು.

ಡಿ.15, ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಸಭೆ, ರಸ್ತೆ ಸುರಕ್ಷತಾ ಸಮಿತಿ ಸಭೆ

ಮಡಿಕೇರಿ, ಡಿ.12– ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಅಧ್ಯಕ್ಷರೂ ಹಾಗೂ ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ ಅವರ ಅಧ್ಯಕ್ಷತೆ ಯಲ್ಲಿ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಡಿ.15 ರಂದು ಬೆಳಗ್ಗೆ 10.30 ಗಂಟೆಗೆ ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಸಭೆ ಮತ್ತು ಬೆಳಗ್ಗೆ 11 ಗಂಟೆಗೆ ಕೊಡಗು ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿ ಸಭೆ ನಡೆಯಲಿದೆ ಎಂದು ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಕಾರ್ಯದರ್ಶಿ ಹಾಗೂ ಪ್ರಾದೇಶಿಕ ಸಾರಿಗೆ ಅಧಿಕಾರಿ ಹೇಮಾವತಿ ತಿಳಿಸಿದ್ದಾರೆ.

ಗಿರಿಜನ ಬೆಳೆಗಾರರಿಗೆ ಟಾರ್ಪಲ್ ವಿತರಣೆ



ಗೋಣಿಕೊಪ್ಪ, ಡಿ.12– ಪೊನ್ನಂಪೇಟೆ ತಾಲೂಕಿನ ಗಿರಿಜನ ಕಾಫಿ ಬೆಳೆಗಾರರಿಗೆ ಟಾರ್ಪಲ್‌ಗಳನ್ನು ಕಾಫಿ ಮಂಡಳಿ ಹಾಗೂ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ವತಿಯಿಂದ ವಿತರಿಸಲಾಯಿತು.

ಗೋಣಿಕೊಪ್ಪ ಕಾಫಿ ಮಂಡಳಿಯ ಸಭಾಂಗಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 150 ಗಿರಿಜನ ಕಾಫಿ ಬೆಳೆಗಾರರು ಟಾರ್ಪಲ್ ಪಡೆದುಕೊಂಡರು.

ಕಾಫಿ ಮಂಡಳಿಯ ಜಂಟಿ ನಿರ್ದೇಶಕ ತಿಮ್ಮರಾಜು ಮಾತನಾಡಿ, ಗಿರಿಜನರು ಕಾಫಿ ಬೆಳೆಯನ್ನು ಉತ್ತಮ ಗುಣಮಟ್ಟದಲ್ಲಿ ಬೆಳೆದು, ತಮ್ಮದೇ ಆದ ಬ್ರಾಂಡ್ ಸೃಷ್ಟಿಸಿಕೊಂಡು ಸ್ವಾವಲಂಬಿಗಳಾಗಿ ಅಭಿವೃದ್ಧಿ ಹೊಂದಬೇಕು ಎಂದರು.

ಕಾಫಿ ಮಂಡಳಿಯ ಉಪ ನಿರ್ದೇಶಕಿ ಡಾ. ಶ್ರೀದೇವಿ ಮಾತನಾಡಿ, ಬುಡಕಟ್ಟು ಕಾಫಿ ಮತ್ತು ಕರಿಮೆಣಸು ಸಮಗ್ರ ಅಭಿವೃದ್ಧಿ ಕಾರ್ಯಕ್ರಮದ ಯೋಜನೆಯ ಮೂಲಕ ಗಿರಿಜನ ಕಾಫಿ ಬೆಳೆಗಾರರಿಗೆ ಕಾಫಿ ಉತ್ಪಾದನೆ ಪ್ರೋತ್ಸಾಹಿಸಲು ಈ ವರ್ಷ ಅನೇಕ ಸವಲತ್ತುಗಳನ್ನು ವಿತರಿಸಲಾಗಿದೆ ಎಂದು ಹೇಳಿದರು. ತಾಲೂಕು ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ ವ್ಯವಸ್ಥಾಪಕ ನವೀನ್ ಕುಮಾರ್, ಕಾಫಿ ಮಂಡಳಿಯ ಅಧಿಕಾರಿ ಮಿಥುನ್, ತಾಂತ್ರಿಕ ಸಹಾಯಕ ಮಧು, ಯೋಜನಾ ಸಹಾಯಕ ಮುತ್ತಪ್ಪ, ನಿತಿನ್, ಜವಿನ್ ಇದ್ದರು.

ಬಿಜೆಪಿ ಫ್ಲೆಕ್ಸ್ ತೆರವುಗೊಳಿಸುವಂತೆ ಒತ್ತಾಯಿಸಿ ಬಿಎಸ್‌ಪಿ, ಎಸ್‌ಡಿಪಿಐ ಪ್ರತಿಭಟನೆ

ಶುಲ್ಕ ಪಾವತಿಸಿ ಫ್ಲೆಕ್ಸ್ ಅಳವಡಿಸುವ ಆದೇಶ ಪ್ರತಿ ಕೊಟ್ಟ ಮೇಲೆ ಪ್ರತಿಭಟನೆ ವಾಪಸ್



ಚಾಮರಾಜನಗರ, ಡಿ.12– ಮುಖ್ಯಮಂತ್ರಿಗಳ ಭೇಟಿ ಹಿನ್ನೆಲೆಯಲ್ಲಿ ಬಿಜೆಪಿ ವತಿಯಿಂದ ನಗರದಲ್ಲಿ ಅನಧಿಕೃತವಾಗಿ ಹಾಕಲಾಗಿರುವ ಫ್ಲೆಕ್ಸ್ ತೆರವುಗೊಳಿಸುವಂತೆ ಒತ್ತಾಯಿಸಿ ಬಹುಜನ ಸಮಾಜಪಕ್ಷ ಹಾಗೂ ಸೋಷಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ ವತಿಯಿಂದ ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು.

ನಗರದ ನಗರಸಭೆ ಮುಂಭಾಗದಲ್ಲಿ ಬಿಎಸ್‌ಪಿ ಜಿಲ್ಲಾಧ್ಯಕ್ಷ ಎನ್.ನಾಗಯ್ಯ ಹಾಗೂ ಎಸ್‌ಡಿಪಿಐ ಜಿಲ್ಲಾಧ್ಯಕ್ಷ ಅಬ್ರಾರ್ ಅಹಮದ್ ಅವರ ನೇತೃತ್ವದಲ್ಲಿ ಸಮಾ ವೇಶಗೊಂಡ ಪ್ರತಿಭಟನಾನಿರತರು ನಗರಸಭೆ, ಜಿಲ್ಲಾಡಳಿತ, ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ಪೌರಾಯುಕ್ತ ರಾಮ್‌ದಾಸ್ ಅವರನ್ನು ಪ್ರತಿಭಟನಾನಿರತರು ತರಾಟೆ ತೆಗೆದುಕೊಂಡು ಕೂಡಲೇ ಫ್ಲೆಕ್ಸ್ ತೆರವುಗೊಳಿಸುವಂತೆ ಒತ್ತಾಯಿಸಿದಾಗ ಜಿಲ್ಲಾಧಿಕಾರಿಗಳ ಮೌಖಿಕ ಆದೇಶದ ಮೇರೆಗೆ ಶುಲ್ಕ ಪಾವತಿಸಿಕೊಂಡು ಫ್ಲೆಕ್ಸ್ ಹಾಕಲು ಅವಕಾಶ ನೀಡಲಾಗಿದೆ ಎಂದಾಗ ನಿಮ್ಮಿಂದ ನ್ಯಾಯಾಲಯದ ಆದೇಶ ಉಲ್ಲಂಘನೆಯಾಗಿದೆ. ಲಿಖಿತ ಆದೇಶ ನೀಡಬೇಕು ಎಂದು ಪಟ್ಟು ಹಿಡಿದಾಗ ಪೌರಾಯುಕ್ತರು ಶುಲ್ಕ ಪಾವತಿಸಿ ಕೊಟ್ಟ ಮೇಲೆ ಪ್ರತಿಭಟನೆ ವಾಪಸ್ ಪಡೆದರು.

ಪ್ರತಿಭಟನೆ ನೇತೃತ್ವ ವಹಿಸಿದ್ದ ಬಿಎಸ್‌ಪಿ ಜಿಲ್ಲಾಧ್ಯಕ್ಷ ಎನ್.ನಾಗಯ್ಯ ಮಾತನಾಡಿ, ನಗರಸಭೆಯ ಭುವನೇಶ್ವರಿ ವೃತ್ತದಿಂದ ಡಿವೈಎಸ್‌ಪಿ ಕಚೇರಿಯವರೆಗೆ ಯಾವುದೇ ಫ್ಲೆಕ್ಸ್ ಹಾಕಬಾರದು, ಬ್ಯಾನರ್ ಕಟ್ಟಬಾರದು ಎಂದು ನಗರಸಭೆ ಆಡಳಿತ ತೀರ್ಮಾನ ಮಾಡಿದೆ. ಆ ತೀರ್ಮಾನಕ್ಕೆ ವಿರುದ್ಧವಾಗಿ ಇಂದು ಎಲ್ಲಾ ಕಡೆಯೂ ಫ್ಲೆಕ್ಸ್, ಬ್ಯಾನರ್ ಹಾಕಲಾಗಿದೆ. ಬಿಜೆಪಿ ಏಜೆಂಟ್ ತರ ನಗರಸಭೆ, ಜಿಲ್ಲಾಡಳಿತ ವರ್ತಿಸುತ್ತಿದೆ ಎಂದು ಆರೋಪಿಸಿದರು.

ಡಿ.6ರಂದು ಡಾ.ಬಿ.ಆರ್.ಅಂಬೇಡ್ಕರ್ ಪರಿನಿಬ್ಬಾಣ ದಿನ ಅಂಬೇಡ್ಕರ್‌ರವರ ಭಾವಚಿತ್ರವುಳ್ಳ ಫ್ಲೆಕ್ಸ್‌ಗಳನ್ನು ಹಾಕಿದಾಗ ನಗರಸಭೆ ತೆರವುಗೊಳಿಸಿತ್ತು. ಅಲ್ಲದೆ ಸಂಘ, ಸಂಸ್ಥೆಗಳು ಹಾಗೂ ಸಾರ್ವಜನಿಕರು ಫ್ಲೆಕ್ಸ್ ಹಾಕಿದಾಗ ಅದನ್ನು ಕೂಡ ನಗರಸಭೆ ಅಧಿಕಾರಿಗಳು ತೆರವುಗೊಳಿಸಿದರು. ಅದೇ ರೀತಿ ಬಿಜೆಪಿಯವರು ಹಾಕಿರುವ ಫ್ಲೆಕ್ಸ್‌ಗಳನ್ನು ತೆರವುಗೊಳಿಸಬೇಕು ಎಂದು ಒತ್ತಾಯಿಸಿದರು.

ಎಸ್‌ಡಿಪಿಐ ಜಿಲ್ಲಾಧ್ಯಕ್ಷ ಅಬ್ರಾರ್ ಅಹಮದ್ ಮಾತನಾಡಿ, ಮುಖ್ಯಮಂತ್ರಿಗಳು ಚಾಮರಾಜನಗರಕ್ಕೆ ಬರುತ್ತಿರುವುದು ಸರ್ಕಾರಿ ಕಾರ್ಯಕ್ರಮ. ಈ ಕಾರ್ಯಕ್ರಮ ಬಿಜೆಪಿ ಪಕ್ಷದ ಕಾರ್ಯಕ್ರಮವಾಗಿ ಪರಿವರ್ತನೆಯಾಗಿದೆ. ಇಡೀ ಚಾಮರಾಜನಗರ ಪಟ್ಟಣದ್ಯಾಂತ ಅನಧಿಕೃತ ಫ್ಲೆಕ್ಸ್‌ಗಳನ್ನು ಹಾಕಿ ಬಾವುಟಗಳನ್ನು ಕಟ್ಟಿದ್ದಾರೆ. ಪೊಲೀಸ್ ಇಲಾಖೆ ಸೂಕ್ಷ್ಮ ಪ್ರದೇಶಗಳನ್ನು ಗುರುತಿಸಿದೆ. ಅಲ್ಲೂ ಕೂಡ ಫ್ಲೆಕ್ಸ್‌ಗಳನ್ನು ಹಾಕಲಾಗಿದೆ. ಅದರಲ್ಲೂ ಉದ್ದೇಶ ಪೂರ್ವಕವಾಗಿ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ, ಎಸ್‌ಡಿಪಿಐ ಪಕ್ಷ ಕಚೇರಿ, ಮಸೀದಿ ಮುಂಭಾಗ ಕೂಡ ಬಾವುಟಗಳನ್ನು ಕಾನೂನು ಮೀರಿ ಕಟ್ಟಿದ್ದಾರೆ. ಶಾಂತಿಯುತ ಚಾಮರಾಜನಗರ ವಾತಾವರಣವನ್ನು ಹಾಳು ಮಾಡಬೇಕು ಎಂದು ಬಿಜೆಪಿಯವರು ಒಂದು ತಂತ್ರಗಾರಿಕೆ ಮಾಡಿದ್ದಾರೆ ಎಂದು ಆರೋಪಿಸಿದರು.

ಪ್ರತಿಭಟನೆಯಲ್ಲಿ ಬಿಎಸ್ಪಿ ಜಿಲ್ಲಾ ಉಪಾಧ್ಯಕ್ಷ ಬ್ಯಾಡಮೂಡ್ಲು ಬಸವಣ್ಣ ಎಸ್‌ಡಿಪಿಐ ನಗರಸಭಾ ಸದಸ್ಯ ಎಂ. ಮಹೇಶ್, ಖಲೀಲ್‌ಉಲ್ಲಾ, ಮೊಹಮ್ಮದ್ ಅಮೀಕ್, ಅಫ್ಸರ್‌ಪಾಷ, ಮುಖಂಡ ಇಸ್ರಾರ್ ಪಾಷ, ಬಿಎಸ್ಪಿ ಜಿಲ್ಲಾ ಖಜಾಂಚಿ ರಾಜೇಂದ್ರ ತಾಲೂಕು ಸಂಯೋಜಕ ಎಸ್.ಪಿ.ಮಹೇಶ್, ಬಿವಿಎಫ್ ಜಿಲ್ಲಾ ಸಂಯೋಜಕ ರವಿಮೌರ್ಯ ಜಿಲ್ಲಾಧ್ಯಕ್ಷ ಚಂದ್ರಕಾಂತ್, ಗ್ರಾ.ಪಂ.ಸದಸ್ಯ ಶಿವಣ್ಣ, ಗಾಳೀಪುರ ರಂಗಸ್ವಾಮಿ, ರಾಮಸಮುದ್ರ ಬಾಬು, ವಾಸು, ಬೈರ್‌ಲಿಂಗಸ್ವಾಮಿ ಇತರರು ಭಾಗವಹಿಸಿದ್ದರು.

ಇಂದು ಚಾ.ನಗರಕ್ಕೆ ಸಿಎಂ ಬೊಮ್ಮಾಯಿ ಭೇಟಿ

● ಚಾಮರಾಜನಗರದಲ್ಲಿ ರಾರಾಜಿಸುತ್ತಿವೆ ಫ್ಲೆಕ್ಸ್, ಕೇಸರಿ ಬಾವುಟ

● ಚಾ.ನಗರ, ಹನೂರಲ್ಲಿ ಬೃಹತ್ ವೇದಿಕೆ ನಿರ್ಮಾಣ





ಚಾಮರಾಜನಗರ, ಡಿ.12– ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ನಾಳೆ (ಡಿ.13) ಜಿಲ್ಲಾ ಕೇಂದ್ರವಾದ ಚಾಮರಾಜನಗರ ಮತ್ತು ಹನೂರಿಗೆ ಭೇಟಿ ನೀಡಿ ವಿವಿಧ ಅಭಿವೃದ್ಧಿ ಕಾರ್ಯಗಳಿಗೆ ಚಾಲನೆ ನೀಡಲಿದ್ದಾರೆ.

ನಾಳೆ ಬೆಳಗ್ಗೆ 9.30ಕ್ಕೆ ಬೆಂಗಳೂರಿನ ಹೆಚ್‌ಎಎಲ್ ವಿಮಾನ ನಿಲ್ದಾಣದಿಂದ ವಿಶೇಷ ವಿಮಾನದ ಮೂಲಕ ಮೈಸೂರಿಗೆ 10.05 ಗಂಟೆಗೆ ಆಗಮಿಸಲಿದ್ದಾರೆ. 10.15ಕ್ಕೆ ಮೈಸೂರು ವಿಮಾನ ನಿಲ್ದಾಣದಿಂದ ರಸ್ತೆ ಮೂಲಕ ಚಾಮರಾಜನಗರ ಡಾ.ಬಿ.ಆರ್. ಅಂಬೇಡ್ಕರ್ ಕ್ರೀಡಾಂಗಣಕ್ಕೆ ಬೆಳಗ್ಗೆ 11.15ಕ್ಕೆ ಆಗಮಿಸಿ, ಇಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಚಾಮರಾಜನಗರ ಮತ್ತು ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ವಿವಿಧ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ ಹಾಗೂ ಉದ್ಘಾಟನೆ ನೆರವೇರಿಸಲಿದ್ದಾರೆ.

ಮಧ್ಯಾಹ್ನ 1.30ಕ್ಕೆ ಚಾಮರಾಜನಗರದಿಂದ ರಸ್ತೆ ಮೂಲಕ ಹನೂರಿಗೆ ತೆರಳಲಿರುವ ಮುಖ್ಯಮಂತ್ರಿಗಳು ಅಲ್ಲಿನ ಶ್ರೀಮಹದೇಶ್ವರ ಕ್ರೀಡಾಂಗಣದಲ್ಲಿ ಆಯೋಜಿಸಿರುವ ಕೊಳ್ಳೇಗಾಲ ಮತ್ತು ಹನೂರು ವಿಧಾನಸಭಾ ಕ್ಷೇತ್ರಗಳಿಗೆ ಸಂಬಂಧಿಸಿದ ವಿವಿಧ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ ಹಾಗೂ ಉದ್ಘಾಟನೆ ನೆರವೇರಿಸಲಿದ್ದಾರೆ.

ಸಂಜೆ 4.30ಕ್ಕೆ ಹನೂರಿನಿಂದ ಹೊರಡುವ ಮುಖ್ಯಮಂತ್ರಿಗಳು ರಸ್ತೆ ಮೂಲಕ ಮೈಸೂರು ತಲುಪಿ ಸಂಜೆ 6.30ಕ್ಕೆ ವಿಶೇಷ ವಿಮಾನದಲ್ಲಿ ಬೆಂಗಳೂರಿಗೆ ತೆರಳಲಿದ್ದಾರೆ.

ಮುಖ್ಯಮಂತ್ರಿಗಳು ನಾಳೆ ಮಲೆ ಮಹದೇಶ್ವರ ಬೆಟ್ಟಕ್ಕೆ ಭೇಟಿ ನೀಡಿ, ಶ್ರೀಮಲೆ ಮಹದೇಶ್ವರಸ್ವಾಮಿ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿ, ನಂತರ ಬೆಟ್ಟದ ನಾಗಮಲೆ ಭವನದಲ್ಲಿ ಶ್ರೀಮಲೆ ಮಹದೇಶ್ವರಸ್ವಾಮಿ ಕ್ಷೇತ್ರದ ಅಭಿವೃದ್ಧಿ ಪ್ರಾಧಿಕಾರದ ಸಭೆ ನಡೆಸಲು ಸಿದ್ಧತೆ ಮಾಡಿಕೊಳ್ಳಲಾಗಿತ್ತು. ಆದರೆ ಹವಾಮಾನ ವೈಪರೀತ್ಯದಿಂದ ಅವರು ಹೆಲಿಕಾಪ್ಟರ್‌ನಲ್ಲಿ ಬೆಂಗಳೂರಿನಿಂದ ಚಾಮರಾಜನಗರ, ಹನೂರು ಹಾಗೂ ಮಹದೇಶ್ವರ ಬೆಟ್ಟಕ್ಕೆ ಬರಲು ಅಸಾಧ್ಯವಾದ ಕಾರಣ, ವಿಶೇಷ ವಿಮಾನದಲ್ಲಿ ಮೈಸೂರಿಗೆ ಆಗಮಿಸಿ, ಅಲ್ಲಿಂದ ರಸ್ತೆ ಮೂಲಕ ಸಂಚರಿಸುತ್ತಿರುವ ಕಾರಣ ಮಹದೇಶ್ವರ ಬೆಟ್ಟದ ಕಾರ್ಯಕ್ರಮವನ್ನು ರದ್ದುಪಡಿಸಲಾಗಿದೆ.

ಎರಡನೇ ಭೇಟಿ: ಚಾಮರಾಜನಗರ ಜಿಲ್ಲೆಗೆ ಮುಖ್ಯಮಂತ್ರಿಯಾದ ಬಳಿಕ ಬಸವರಾಜಬೊಮ್ಮಾಯಿ ಅವರ ಎರಡನೇ ಭೇಟಿ ಇದಾಗಿದೆ. 2021ರ ಅಕ್ಟೋಬರ್ 7ರಂದು ನಗರದಲ್ಲಿ ನಡೆದ ರಾಷ್ಟ್ರಪತಿಗಳು ಪಾಲ್ಗೊಂಡಿದ್ದ ಸಿಮ್ಸ್ ಆಸ್ಪತ್ರೆಯ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯಮಂತ್ರಿಗಳು ಭಾಗವಹಿಸಿದ್ದರು.

ಮುಖ್ಯಮಂತ್ರಿಗಳ ಆಗಮನದ ಹಿನ್ನೆಲೆಯಲ್ಲಿ ಚಾಮರಾಜನಗರದ ಪ್ರಮುಖ ರಸ್ತೆಗಳಲ್ಲಿ ಬಿಜೆಪಿ ಬಾವುಟ ಹಾಗೂ ಫ್ಲೆಕ್ಸ್‌ಗಳನ್ನು ಅಳವಡಿಸಲಾಗಿದೆ. ಚಾಮರಾಜನಗರವು ಸಂಪೂರ್ಣ ಕೇಸರಿಮಯವಾಗಿ ಕಾಣುತ್ತಿದೆ. ಕಾರ್ಯಕ್ರಮಕ್ಕಾಗಿ ಡಾ. ಅಂಬೇಡ್ಕರ್ ಕ್ರೀಡಾಂಗಣದಲ್ಲಿ ಬೃಹತ್ ವೇದಿಕೆ ನಿರ್ಮಿಸಲಾಗಿದ್ದು, ಮಳೆ ಬರುವ ಸಾಧ್ಯತೆ ಇರುವ ಕಾರಣ ವಾಟರ್‌ಪ್ರೂಫ್ ಪೆಂಡಾಲ್ ಹಾಕಲಾಗಿದೆ.

ಭರದ ಸಿದ್ಧತೆ: ಜಿಲ್ಲೆಯ ಮೂರು ಭಾಗಗಳಿಗೆ ಒಂದೇ ದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಆಗಮಿಸುತ್ತಿರುವ ಹಿನ್ನೆಲೆಯಲ್ಲಿ ಭರದ ಸಿದ್ಧತೆಗಳು ನಡೆದಿದೆ. ಚಾಮರಾಜನಗರ ಮತ್ತು ಹನೂರಿನಲ್ಲಿ ಬೃಹತ್ ವೇದಿಕೆ ನಿರ್ಮಿಸಲಾಗಿದೆ ತುಂತುರು ಮಳೆ ನಡುವೆಯೂ ಸಿದ್ಧತೆಯೂ ಪೂರ್ಣಗೊಂಡಿದೆ. ಈ ಎರಡು ಕಡೆಗಳಲ್ಲೂ ಸಹಸ್ರಾರು ಜನರು ಪಾಲ್ಗೊಳ್ಳಲಿದ್ದಾರೆ. ಮಹದೇಶ್ವರಸ್ವಾಮಿ ಬೆಟ್ಟಕ್ಕೆ ಇದೇ ಮೊದಲ ಬಾರಿಗೆ ಮುಖ್ಯಮಂತ್ರಿಗಳು ಆಗಮಿಸುತ್ತಿರುವುದರಿಂದ ಸಂಪ್ರದಾಯದಂತೆ ದೇವಸ್ಥಾನವನ್ನು ಶೃಂಗರಿಸಲಾಗುತ್ತಿದೆ. ಬೆಟ್ಟದ ಪ್ರಾಧಿಕಾರದ ಸಭೆಗೆ ಎಲ್ಲಾ ಸಿದ್ಧತೆಗಳನ್ನು ಕೈಗೊಳ್ಳಲಾಗಿದೆ.

ಬಹಳ ನಿರೀಕ್ಷೆ: ಮುಖ್ಯಮಂತ್ರಿಗಳು ಜಿಲ್ಲೆಗೆ ಆಗಮಿಸುತ್ತಿರುವುದರಿಂದ ಜಿಲ್ಲೆಯ ಜನರು ಬಹಳ ನಿರೀಕ್ಷೆ ಇಟ್ಟುಕೊಂಡಿದ್ದಾರೆ. ಜಿಲ್ಲೆಯ ಅಭಿವೃದ್ಧಿಗೆ ವಿಶೇಷ ಅನುದಾನವನ್ನು ಘೋಷಿಸಬಹುದು. ಏನಾದರೂ ನೂತನ ಯೋಜನೆಯನ್ನು ಪ್ರಕಟಿಸಬಹುದು ಎಂಬ ನಿರೀಕ್ಷೆ ಹೊಂದಿದ್ದಾರೆ. ಈ ನಿರೀಕ್ಷೆ ನಿಜವಾಗುವುದೋ ಅಥವಾ ಹುಸಿಯಾಗುವುದೇ ಕಾದು ನೋಡಬೇಕಾಗಿದೆ.

ಜಾಗೇರಿ ಸಮಸ್ಯೆ ಇತ್ಯರ್ಥಕ್ಕೆ ಸರ್ವೆ ಕಾರ್ಯ: ವಿ. ಸೋಮಣ್ಣ



ಚಾಮರಾಜನಗರ, ಡಿ.12– ಕೊಳ್ಳೇಗಾಲ ತಾಲೂಕಿನ ಜಾಗೇರಿ ಸರ್ವೆ ನಂ. 174 ಭೂಮಿಗೆ ಸಂಬಂಧಿಸಿದಂತೆ ಸರ್ವೆ ಕಾರ್ಯ ನಡೆಸಬೇಕು. ಅಲ್ಲಿಯವರೆಗೆ ವ್ಯವಸಾಯ ಮಾಡುತ್ತಿರುವ ರೈತರಿಗೆ ಯಾವುದೇ ತರಹದ ತೊಂದರೆ ನೀಡಬಾರದು ಎಂದು ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಜಾಗೇರಿ ಗ್ರಾಮದಲ್ಲಿ ರೈತ ಮುಖಂಡರು ಹಾಗೂ ಗ್ರಾಮಸ್ಥರೊಂದಿಗೆ ನಡೆದ ಅಹವಾಲು ಆಲಿಕೆಯ ಸಭೆಯನ್ನುದ್ದೇಶಿಸಿ ಸಚಿವರು ಮಾತನಾಡಿದರು. ಸರ್ವೆ ನಂ.174 ರಲ್ಲಿ ರೈತರು ಭೂಮಿ ಯನ್ನು ಉಳುಮೆ ಮಾಡುತ್ತಿರುವ ಸಂಬಂಧ ಜಮೀನುಗಳನ್ನು ಸರ್ವೆ ನಡೆಸಿ ಜನವರಿ 20ರ ಒಳಗಾಗಿ ವರದಿ ತಯಾರಿಸಿ ನೀಡಬೇಕು. ಈ ವಿಷಯವನ್ನು ಮುಖ್ಯಮಂತ್ರಿಯವರ ಗಮನಕ್ಕೂ ತರಲಾಗುವುದು. ಸರ್ವೆ ಕಾರ್ಯ ನಡೆಯುವವರೆಗೆ ಯಾವುದೇ ತೊಂದರೆ ನೀಡುವುದು ಬೇಡ. ರೈತರ ಸಮಸ್ಯೆಗಳನ್ನು ಪರಿಹರಿಸಲಾಗುವುದು ಎಂದು ಸಚಿವರು ತಿಳಿಸಿದರು.

ನಾನು ರೈತರ ಕಷ್ಟ ಏನೆಂಬುದು ಹತ್ತಿರದಿಂದ ಬಲ್ಲೆ. ರೈತರಿಗೆ, ಇಲ್ಲಿನ ಜನರಿಗೆ ಯಾವುದೇ ತೊಂದರೆಯಾಗದಂತೆ ನೋಡಿ ಕೊಳ್ಳುತ್ತೇನೆ. ಸಮಸ್ಯೆ ಪರಿಹಾರಕ್ಕೆ ಎಲ್ಲಾ ಕ್ರಮ ತೆಗೆದುಕೊಳ್ಳುತ್ತೇನೆ. ತಕ್ಷಣವೇ ಸರ್ವೆ ಕಾರ್ಯ ಕೈಗೊಳ್ಳಲು ಅಧಿಕಾರಿಗಳಿಗೆ ಸೂಚಿಸುತ್ತಿದ್ದೇನೆ ಎಂದರು. ಶಾಸಕ ಆರ್. ನರೇಂದ್ರ ಮಾತನಾಡಿ, ಜಾಗೇರಿ ಅರಣ್ಯ ಜಮೀನನ್ನು ಹಲವಾರು ವರ್ಷಗಳಿಂದ ರೈತರು ಉಳುಮೆ ಮಾಡಿಕೊಂಡು ಬಂದಿದ್ದು ಬಿಗಿಯಾದ ಅರಣ್ಯ ಕಾಯ್ದೆಯಿಂದ ಹಲವರಿಗೆ ತೊಂದರೆಯಾಗಿದೆ. ಇದನ್ನು ಸರ್ಕಾರದ ಗಮನಕ್ಕೆ ತಂದು ಸರಿಪಡಿಸಬೇಕೆಂದು ಸಚಿವರಲ್ಲಿ ಮನವಿ ಮಾಡಿದರು.

ಶಾಸಕ ಎನ್.ಮಹೇಶ್, ಮಾಜಿ ಶಾಸಕ ಜಿ.ಎನ್. ನಂಜುಂಡಸ್ವಾಮಿ, ಜಿಲ್ಲಾಧಿಕಾರಿ ಡಿ.ಎಸ್. ರಮೇಶ್, ಜಿ ಪಂ ಸಿಇಓ ಕೆ.ಎಂ. ಗಾಯಿತ್ರಿ, ಎಸ್ಪಿ ಟಿ.ಪಿ.ಶಿವ ಕುಮಾರ್, ಹೆಚ್ಚುವರಿ ಜಿಲ್ಲಾಧಿಕಾರಿ ಎಸ್.ಕಾತ್ಯಾಯಿನಿ ದೇವಿ, ಡಿಎಫ್ಓ ಸಂತೋಷ್‌ಕುಮಾರ್, ಎಎಸ್ಪಿ ಕೆ.ಎಸ್. ಸುಂದರ್‌ರಾಜ್, ಎಸಿ ಗೀತಾ ಹುಡೇದ, ತಹಸೀಲ್ದಾರ್ ಮಂಜುಳ, ತಾಪಂ ಇಓ ಮಹೇಶ್ ಇತರರಿದ್ದರು.



ಗುಂಡ್ಲುಪೇಟೆ ಪಟ್ಟಣದ ಬಯಲು ರಂಗಮಂದಿರದಲ್ಲಿ ಕೇಕ್ ಕತ್ತರಿಸುವ ಮೂಲಕ ಶಾಸಕ ಸಿ.ಎಸ್.ನಿರಂಜನಕುಮಾರ್ ಹುಟ್ಟುಹಬ್ಬವನ್ನು ಆಚರಿಸಿಕೊಂಡರು. ಪುರಸಭಾಧ್ಯಕ್ಷ ಪಿ. ಗಿರೀಶ್, ಸದಸ್ಯ ದೀಪು ಇನ್ನಿತರರಿದ್ದರು.

ಒಂದನೇ ಪುಟದಿಂದ

ಮಚ್ಚು ತೋರಿಸಿ ದಂಪತಿ ಧಮ್ಕಿ

ಅಧಿಕಾರಿಗಳನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿ, ಹಲ್ಲೆಗೆ ಮುಂದಾಗಿದ್ದಾನೆ.

ವಿವರ: ಸಾತಗಳ್ಳಿ ಬಸ್ ನಿಲ್ದಾಣದಲ್ಲಿರುವ ವಾಣಿಜ್ಯ ಸಂಕೀರ್ಣವನ್ನು 12 ವರ್ಷಗಳ ಅವಧಿಗೆ ಗುತ್ತಿಗೆ ನೀಡಿ, ಕರಾರು ಒಪ್ಪಂದ ಮಾಡಿಕೊಳ್ಳಲಾಗಿತ್ತು. ಆದರೆ, ಆತ ಕೆಎಸ್‌ಆರ್‌ಟಿಸಿಗೆ ಪರವಾನಗಿ ಶುಲ್ಕ, ಜಿಎಸ್‌ಟಿ, ವಿದ್ಯುಚ್ಛಕ್ತಿ ಶುಲ್ಕವನ್ನು ಸರಿಯಾಗಿ ಪಾವತಿಸದೇ 1.89 ಕೋಟಿ ರೂ.ಗಳನ್ನು ಬಾಕಿ ಉಳಿಸಿಕೊಂಡಿದ್ದ. ಅಲ್ಲದೇ ನ್ಯಾಯಾಲಯದಿಂದ ಮಧ್ಯಂತರ ತಡೆಯಾಜ್ಞೆ ಪಡೆದಿದ್ದ. ಡಿಸೆಂಬರ್ 10ರಂದು ನ್ಯಾಯಾಲಯವು ಆತ ಹೂಡಿದ್ದ ದಾವೆಯನ್ನು ರದ್ದುಪಡಿಸಿ, ಆದೇಶ ಹೊರಡಿಸಿತ್ತು. ಈ ಆದೇಶವನ್ನು ಜಾರಿ ಮಾಡಲು ವಾಣಿಜ್ಯ ಸಂಕೀರ್ಣಕ್ಕೆ ಕೆಎಸ್‌ಆರ್‌ಟಿಸಿ ಡಿಟಿಓ ಮರೀಗೌಡ, ಕೆಎಸ್‌ಆರ್‌ಟಿಸಿ ಘಟಕದ ವ್ಯವಸ್ಥಾಪಕ ಶಂಕರ್, ಸಹಾಯಕ ಸಂಚಾರ ವ್ಯವಸ್ಥಾಪಕಿ ಕಲಾಶ್ರೀ, ಸಹಾಯಕ ಸಂಚಾರ ಅಧೀಕ್ಷಕ ಚೇತನ್ ಮತ್ತಿತರರು ತೆರಳಿದಾಗ ಶಫೀಕ್ ಅಹಮದ್ ಪತ್ನಿ ಸೈಯ್ಯದ್ ಮುನ್ನೀಸಾ ಕೈಯ್ಯಲ್ಲಿ ಮಚ್ಚು ಹಿಡಿದು ಝುಳಪಿಸುತ್ತಾ, ಅವಾಚ್ಯ ಪದಗಳಿಂದ ನಿಂದಿಸುತ್ತಾ ಸಾರಿಗೆ ಅಧಿಕಾರಿಗಳಿಗೆ ಬೆದರಿಕೆ ಹಾಕಿದ್ದಾಳೆ. ಅಲ್ಲದೇ ಶಫೀಕ್ ಅಹಮದ್ ಕೂಡ ಸಾರಿಗೆ ಅಧಿಕಾರಿಗಳನ್ನು ಅವಾಚ್ಯ ಪದಗಳಿಂದ ನಿಂದಿಸಿ, ಹಲ್ಲೆಗೆ ಮುಂದಾಗಿದ್ದಾನೆ. ಈ ವೇಳೆ ನೆರೆದಿದ್ದ ಸಾರ್ವಜನಿಕರು ಹಾಗೂ ಪ್ರಯಾಣಿಕರು ಭಯ–ಭೀತಿಯಿಂದ ಈ ದೃಶ್ಯವನ್ನು ನೋಡಿದ್ದಾರೆ. ಈ ಘಟನಾವಳಿಗಳ ವೀಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ.

ಕೆಎಸ್‌ಆರ್‌ಟಿಸಿಯಿಂದ ವಾಣಿಜ್ಯ ಸಂಕೀರ್ಣವನ್ನು ಗುತ್ತಿಗೆ ಪಡೆದಿದ್ದ ಶಫೀಕ್ ಅಹಮದ್ ಅದನ್ನು ಖಾಸಗಿ ಕಾಲೇಜಿಗೆ ಉಪಗುತ್ತಿಗೆ ನೀಡಿದ್ದಾನೆ ಎಂದು ಹೇಳಲಾಗಿದೆ. ನ್ಯಾಯಾಲಯದಲ್ಲಿ ಶಫೀಕ್ ಅಹಮದ್ ಹೂಡಿದ್ದ ದಾವೆ ವಜಾಗೊಂಡಿರುವಾಗ ಸದರಿ ಕಟ್ಟಡವನ್ನು ಕೆಎಸ್‌ಆರ್‌ಟಿಸಿ ಅಧಿಕಾರಿಗಳು ವಶಕ್ಕೆ ಪಡೆಯಬೇಕಾಗಿತ್ತು. ಆದರೆ, ಅಲ್ಲಿ ಕಾಲೇಜು ನಡೆಯುತ್ತಿದ್ದರಿಂದ ಅಧಿಕಾರಿಗಳು ಕಟ್ಟಡವನ್ನು ವಶಕ್ಕೆ ಪಡೆದಿಲ್ಲ ಎಂದು ಹೇಳಲಾಗಿದೆ.

ಈ ಸಂಬಂಧ ಕೆಎಸ್‌ಆರ್‌ಟಿಸಿ ಡಿಟಿಓ ಮರೀಗೌಡರು ನೀಡಿದ ದೂರನ್ನು ಭಾರತೀಯ ದಂಡ ಸಂಹಿತೆ 353, 504, 506, 34ರಡಿ ದಾಖಲಿಸಿಕೊಂಡಿರುವ ಉದಯಗಿರಿ ಠಾಣೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ಸಾರ್ವಜನಿಕರ ಸಮ್ಮುಖದಲ್ಲೇ ಹಾಡಹಗಲೇ ಬಸ್ ನಿಲ್ದಾಣದಲ್ಲಿ ಮಚ್ಚು ಹಿಡಿದು ಸರ್ಕಾರಿ ಅಧಿಕಾರಿಗಳಿಗೆ ಬೆದರಿಕೆ ಹಾಕಿರುವ ಆರೋಪಿಗಳನ್ನು ಪೊಲೀಸರು ಇನ್ನೂ ಬಂಧಿಸಿಲ್ಲ. ಮಚ್ಚು ಹಿಡಿದು ಬೆದರಿಕೆ ಹಾಕಿರುವುದು ಕೊಲೆ ಯತ್ನ ಅಪರಾಧವಾಗಿದ್ದರೂ ಪೊಲೀಸರು ಆ ಆರೋಪಕ್ಕೆ ಸಂಬಂಧಿಸಿದಂತೆ ಭಾರತೀಯ ದಂಡ ಸಂಹಿತೆ 307 ಅನ್ನು ಎಫ್‌ಐಆರ್‌ನಲ್ಲಿ ದಾಖಲಿಸದೇ ಇರುವುದು ಸಾರ್ವಜನಿಕರಿಂದ ಟೀಕೆಗೆ ಗುರಿಯಾಗಿದ್ದಾರೆ. ಸರ್ಕಾರಿ ಅಧಿಕಾರಿಗಳನ್ನೇ ಮಚ್ಚು ತೋರಿಸಿ, ಸಾರ್ವಜನಿಕವಾಗಿ ಬೆದರಿಸಿರುವ ಆರೋಪಿಗಳ ವಿರುದ್ಧ ಕಠಿಣವಾದ ಸೆಕ್ಷನ್‌ಗಳಡಿ ದೂರನ್ನು ದಾಖಲಿಸದೆ, ಆರೋಪಿಗಳನ್ನು ಬಂಧಿಸದೇ ಇರುವುದರ ಬಗ್ಗೆ ಸಾರ್ವಜನಿಕರು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಸರ್ಕಾರಿ ಅಧಿಕಾರಿಗಳ ಸ್ಥಿತಿಯೇ ಹೀಗಾದರೆ ಜನಸಾಮಾನ್ಯರು ಪೊಲೀಸರಿಂದ ಯಾವ ರೀತಿಯ ರಕ್ಷಣೆ ನಿರೀಕ್ಷಿಸಲು ಸಾಧ್ಯ ಎಂದು 'ಮೈಸೂರು ಮಿತ್ರ'ನಿಗೆ ಕರೆ ಮಾಡಿದ್ದ ನಾಗರಿಕರೊಬ್ಬರು ಪ್ರಶ್ನಿಸಿದ್ದಾರೆ.

> **ಶಫೀಕ್ ಅಹಮದ್ ಜೊತೆ ಕೆಎಸ್‌ಆರ್‌ಟಿಸಿ ಮಾಡಿಕೊಂಡಿರುವ ಕರಾರು ಒಪ್ಪಂದದಲ್ಲಿ ಉಪಗುತ್ತಿಗೆ ನೀಡಲು ಅವಕಾಶ ಕಲ್ಪಿಸಲಾಗಿದೆ. ಈ ಪ್ರಕರಣದಲ್ಲಿ ಆತ ಸಂಸ್ಥೆಗೆ ಹಣ ಪಾವತಿಸಿಲ್ಲ ಎಂಬುದನ್ನು ಬಿಟ್ಟರೆ, ಬೇರೆ ಯಾವುದು ಕರಾರಿಗೆ ವಿರುದ್ಧವಾಗಿ ನಡೆದಂತೆ ಕಂಡುಬಂದಿಲ್ಲ. ಈಗ ಆತನಿಗೆ ನೀಡಿದ್ದ ಪರವಾನಗಿಯನ್ನು ರದ್ದುಪಡಿಸಲಾಗಿದೆ. ಹೀಗಾಗಿ ಆತನಿಗೂ ಸಾತಗಳ್ಳಿ ಬಸ್ ನಿಲ್ದಾಣದಲ್ಲಿರುವ ವಾಣಿಜ್ಯ ಸಂಕೀರ್ಣಕ್ಕೂ ಯಾವುದೇ ಸಂಬಂಧವಿಲ್ಲ. ಆತನಿಂದ ಉಪಗುತ್ತಿಗೆ ಪಡೆದಿರುವವರಿಂದ ನಾವು ಕಟ್ಟಡವನ್ನು ವಶಕ್ಕೆ ಪಡೆದಿಲ್ಲ. ಈ ಸಂಬಂಧ ಕೇಂದ್ರ ಕಚೇರಿಗೆ ಪತ್ರ ಬರೆಯಲಿದ್ದೇವೆ. ಅಲ್ಲಿಂದ ಬರುವ ನಿರ್ದೇಶನದಂತೆ ಮುಂದಿನ ಕ್ರಮ ಕೈಗೊಳ್ಳುತ್ತೇವೆ.**
> – ಮರೀಗೌಡ, ಕೆಎಸ್‌ಆರ್‌ಸಿ ಮೈಸೂರು ಡಿಟಿಓ.

ಕೆಎಸ್‌ಆರ್‌ಟಿಸಿ ಅಧಿಕಾರಿಗಳಿಗೆ ಮಚ್ಚು ತೋರಿಸಿ ಕೊಲೆ ಬೆದರಿಕೆ

ವರ್ಲ್ಡ್ ಹ್ಯೂಮನ್ ರೈಟ್ಸ್ ಸೇವಾ ಕೇಂದ್ರ ಸಂಘಟನೆ ಖಂಡನೆ

ಮೈಸೂರಿನಲ್ಲಿ ಕೆಎಸ್‌ಆರ್‌ಟಿಸಿ ಅಧಿಕಾರಿಗಳಿಗೆ ಮಚ್ಚು ತೋರಿಸಿ ಕೊಲೆ ಬೆದರಿಕೆ ಹಾಕಿರುವ ಘಟನೆಯನ್ನು ವರ್ಲ್ಡ್ ಹ್ಯೂಮನ್ ರೈಟ್ಸ್ ಸೇವಾ ಕೇಂದ್ರ ಸಂಘಟನೆ ತೀವ್ರವಾಗಿ ಖಂಡಿಸಿದೆ. ಮೈಸೂರಿನ ಸಾತಗಳ್ಳಿ ಬಸ್ ನಿಲ್ದಾಣದಲ್ಲಿ ಬಸ್ ಅಧಿಕಾರಿಗಳನ್ನು ಶಫೀಕ್ ಹಾಗೂ ಆತನ ಪತ್ನಿ ಅತ್ಯಂತ ಅಸಹ್ಯ ಪದಗಳಿಂದ ನಿಂದಿಸಿದ್ದಾರೆ. ಅಲ್ಲದೆ ಹಾಡಹಗಲೇ ರಾಜಾರೋಷವಾಗಿ ಮಚ್ಚು ತೋರಿಸಿ ಕೊಲೆ ಬೆದರಿಕೆ ಹಾಕಿದ್ದಾರೆ. ಘಟನೆ ವೇಳೆ ಸ್ಥಳದಲ್ಲಿದ್ದ ಪೊಲೀಸರು ಮೌನವಾಗಿ ಸಿನಿಮಾ ರೀತಿ ನೋಡುತ್ತಾ ನಿಂತಿರುವ ವಿಡಿಯೋ ವೈರಲ್ ಆಗಿದೆ. ಮೈಸೂರಿನಲ್ಲಿ ಕೆಸರೆರಚಾಟ ನಡೆದಿರುವ ಈ ಸಂದರ್ಭದಲ್ಲಿ ಮಹಿಳೆ ಮಾರಕಾಸ್ತ್ರಗಳನ್ನು ಝಳಪಿಸಿರುವುದು ಅತ್ಯಂತ ಗಂಭೀರ ಹಾಗೂ ಸೂಕ್ಷ್ಮ ವಿಚಾರ. ಆದರೆ ಪೊಲೀಸರು ಸ್ಥಳದಲ್ಲೇ ಆರೋಪಿಗಳನ್ನು ಬಂಧಿಸದೆ ನಿರ್ಲಕ್ಷ್ಯ ತೋರಿರುವುದು ಸರಿಯಲ್ಲ ಎಂದು ವರ್ಲ್ಡ್ ಹ್ಯೂಮನ್ ರೈಟ್ಸ್ ಸೇವಾ ಕೇಂದ್ರ ಸಂಘಟನೆ ಅಧ್ಯಕ್ಷ ಸಿದ್ದಲಿಂಗೇಗೌಡ ಪ್ರಕಟಣೆಯಲ್ಲಿ ವಿಷಾದಿಸಿದ್ದಾರೆ.

ಈ ಪ್ರಕರಣವನ್ನು ಪೊಲೀಸ್ ಇಲಾಖೆ ಗಂಭೀರವಾಗಿ ಪರಿಗಣಿಸಬೇಕು. ಸಾರಿಗೆ ಸಂಸ್ಥೆ ಅಧಿಕಾರಿಗಳಿಗೆ ಪ್ರಾಣಬೆದರಿಕೆ ಹಾಕಿರುವವರನ್ನು ಕೂಡಲೇ ಬಂಧಿಸಿ ಶಿಸ್ತು ಕ್ರಮ ಜರುಗಿಸಬೇಕು. ಈ ಮೂಲಕ ಪೊಲೀಸರು ಸಾರ್ವಜನಿಕರಲ್ಲಿರುವ ಆತಂಕ ಹೋಗಲಾಡಿಸಬೇಕು. ಮೈಸೂರಿನಲ್ಲಿ ಶಾಂತಿ ಸಾಮರಸ್ಯದ ಜೊತೆಗೆ ಇಲ್ಲಿನ ಪಾವಿತ್ರ್ಯತೆಯನ್ನೂ ಕಾಪಾಡಬೇಕು ಎಂದು ಅವರು ಆಗ್ರಹಿಸಿದ್ದಾರೆ.

ಬಿಜೆಪಿ ತೊರೆಯಲು ಸಂದೇಶ್ ನಿರ್ಧಾರ

ನನಗೆ ಸಾಕಾ ಗಿದೆ. ಎಚ್.ವಿಶ್ವನಾಥ್ ಅವರಿಗೂ ಅನ್ಯಾಯ ಮಾಡಿದರು. ನನಗೂ ಅನ್ಯಾಯ ಮಾಡಿ ದರು ಎಂದು ವಾಗ್ದಾಳಿ ನಡೆಸಿದರು.

ಒಂದೇ ಕಲ್ಲಲ್ಲಿ ಎರಡು ಹಕ್ಕಿಹೊಡೆಯಲು ಪ್ಲಾನ್

ಬಿಜೆಪಿ ನಾಯಕರು ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಅವರ ಮೇಲೆ ಸಿಟ್ಟಿನಲ್ಲಿದ್ದ ಮುಗಿಬಿದ್ದಿದ್ದಾರೆ. ಒಂದೇ ಕಲ್ಲಲ್ಲಿ ಎರಡು ಹಕ್ಕಿಯನ್ನು ಹೊಡೆಯಲು ತಂತ್ರ ರೂಪಿಸಿದ್ದಾರೆ. ಅದರ ಒಂದು ಭಾಗವಾಗಿ ಬಿ.ಎಸ್.ಯಡಿಯೂರಪ್ಪನವರನ್ನು ಒಳ್ಳೆತನದಲ್ಲೇ ಮುಗಿಸಿದ್ದಾರೆ. ಇದರಿಂದ ಬಿಜೆಪಿಗೆ 40ಗಳ ಸ್ಥಾನ ಹಿನ್ನಡೆ ಖಚಿತ. ಎರಡನೇ ಹಂತದಲ್ಲಿ ಈಗ ಬಿ.ವೈ.ವಿಜಯೇಂದ್ರನನ್ನು ವರುಣಕ್ಕೆ ಕಳಿಸಿ ತರುವ ಮೂಲಕ ಅವರನ್ನು ಮುಗಿಸಲು ಹೊರಟಿದ್ದಾರೆ. ಆ ಮೂಲಕ ಒಂದೇ ಕಲ್ಲಿನಲ್ಲಿ ಎರಡು ಹಕ್ಕಿ ಹೊಡೆಯುವಲ್ಲಿ ಯಶಸ್ವಿ ಯಾಗಲಿದ್ದಾರೆ. ವರುಣಾದಲ್ಲಿ ಸಿದ್ದರಾಮಯ್ಯ ಸ್ಪರ್ಧಿಸಿದರೆ ಅವರ ಮುಂದೆ ಯಾರೇ ಸ್ಪರ್ಧಿಸಿದರೂ 50 ಸಾವಿರ ಮತಗಳ ಅಂತರದಿಂದ ಸಿದ್ದರಾಮಯ್ಯ ಗೆಲ್ಲುತ್ತಾರೆ ಎಂದರು. ವರುಣಾದಲ್ಲಿ ಬಲಿ ಕೊಡಲೆಂದೇ ವಿಜಯೇಂದ್ರನನ್ನು ಕರೆ ತರುತ್ತಿದ್ದಾರೆ. ವಿಜಯೇಂದ್ರಗೆ ರಾಜಕೀಯ ಭವಿಷ್ಯ ಚೆನ್ನಾಗಿದೆ. ಅವರು ಶಿಕಾರಿಪುರದಲ್ಲೇ ಸ್ಪರ್ಧೆ ಮಾಡಬೇಕು. ಬಿಜೆಪಿ ನಾಯಕರ ಮೋಸದ ವರ್ತನೆಯಿಂದ ಮುಂದಿನ ದಿನಗಳಲ್ಲಿ 10ಕ್ಕೂ ಅಧಿಕ ಶಾಸಕರು ಪಕ್ಷ ತೊರೆಯಲು ನಿರ್ಧರಿಸಿದ್ದಾರೆ ಎಂದು ತಿಳಿಸಿದರು. ತಾವು ಮುಂದಿನ ಜನವರಿ–ಫೆಬ್ರವರಿಯಲ್ಲಿ ಮುಂದಿನ ರಾಜಕೀಯ ನಿರ್ಧಾರ ಕೈಗೊಳ್ಳುತ್ತೇನೆ ಎಂದು ಇದೇ ವೇಳೆ ಅಭಿಪ್ರಾಯಪಟ್ಟರು.

ಟಿಕೆಟ್‌ಗೆ ಶಿಫಾರಸು ಬೇಡ

ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ವಿಧಾನಸಭೆಯ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಒಂದಾಗಿ ಚುನಾವಣೆ ಎದುರಿಸಿದರೆ, ನಾವು ಸುಲಭವಾಗಿ ಅಧಿಕಾರ ಹಿಡಿಯುತ್ತೇವೆ ಎಂಬ ಮಾತನಾಡಿದ್ದಾರೆ. ಕರ್ನಾಟಕದಲ್ಲಿ ನಮ್ಮ ಪರ ಇರುವ ವಾತಾವರಣವನ್ನು ಮುಂದಿನ ದಿನಗಳಲ್ಲಿ ಮತ್ತಷ್ಟು ಬಲಿಷ್ಠಗೊಳಿಸಬೇಕು. ನಾಯಕರುಗಳಲ್ಲಿರುವ ಗೊಂದಲಗಳನ್ನು ನಿವಾರಿಸಿಕೊಂಡು ಮುನ್ನಡೆದರೆ ನಾವು ಮತ್ತೆ ಅಧಿಕಾರಕ್ಕೆ ಬಂದೇ ಬರುತ್ತೇವೆ. ಮುಂದಿನ ಮುಖ್ಯಮಂತ್ರಿ ಯಾರೆಂದು ಚುನಾವಣೆಗೂ ಮುನ್ನ ಬಿಂಬಿಸುವುದು ಬೇಡ, ನೀವೆಲ್ಲರೂ ಸಾಮೂಹಿಕ ನಾಯಕತ್ವದಲ್ಲೇ ಪಕ್ಷವನ್ನು ಮುನ್ನಡೆಸಿ. ನೆಲ ಕಚ್ಚಿದ್ದ ಕರ್ನಾಟಕ ಕಾಂಗ್ರೆಸ್‌ ಶಿವಕುಮಾರ್–ಸಿದ್ದರಾಮಯ್ಯ ಸಾರಥ್ಯದಲ್ಲಿ ನೀವೆಲ್ಲರೂ ಪಕ್ಷವನ್ನು ಅಧಿಕಾರಕ್ಕೆ ತರುವ ಹಂತಕ್ಕೆ ಬಂದಿದ್ದೀರಿ. ಈ ಹುಮ್ಮಸ್ಸು ಹಾಗೆಯೇ ಮುಂದುವರೆಯಲಿ. ಚುನಾವಣೆ ಸಮೀಪ ವಾಗುತ್ತಿದ್ದಂತೆ ಕೇಂದ್ರದ ಬಿಜೆಪಿ ಸರ್ಕಾರ ನಮ್ಮಲ್ಲಿನ ಕೆಲವು ನಾಯಕರಿಗೆ ಕಾನೂನು ತೊಡಕುಗಳನ್ನು ಮುಂದೊಡ್ಡಿ ನಿಮ್ಮ ಬಲ ಕುಗ್ಗಿಸುವ ಕೆಲಸ ಮಾಡುತ್ತದೆ. ಇವನ್ನು ಎದುರಿಸಲು ನಿಮ್ಮ ಜೊತೆ ನಾವಿದ್ದೇವೆ. ಪಕ್ಷದಿಂದ ಪಕ್ಷಕ್ಕೆ ಜಿಗಿಯುವವರಿಗೆ ಯಾವುದೇ ಕಾರಣಕ್ಕೂ ಮಣೆ ಹಾಕಬೇಡಿ. ಆ ಕ್ಷೇತ್ರದಲ್ಲಿ ನಮ್ಮ ಕಾರ್ಯಕರ್ತರಿಗೆ ಟಿಕೆಟ್ ನೀಡಿ, ಆಮಿಷಗಳಿಗೆ ಬಲಿಯಾಗುವವರಿಗೆ ಅವಕಾಶ ನೀಡಬೇಡಿ.

ಅರ್ಹತೆ ಅಭ್ಯರ್ಥಿಗಳಿಗೆ ಟಿಕೆಟ್ ನೀಡುವುದಕ್ಕೂ ಮುನ್ನ ಉಳಿದ ಆಕಾಂಕ್ಷಿಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಿ. ಅಲ್ಪ ಸಂಖ್ಯಾತರ ಜೊತೆಗೆ ಸಣ್ಣಪುಟ್ಟ ಸಮುದಾಯಗಳನ್ನು ವಿಶ್ವಾಸಕ್ಕೆ ಪಡೆದುಕೊಳ್ಳಿ ಎಂದು ಖರ್ಗೆ ರಾಜ್ಯ ನಾಯಕರಿಗೆ ಕಿವಿಮಾತು ಹೇಳಿದ್ದಾರೆ.

ಈ ಚುನಾವಣೆಯಲ್ಲಿ ವೀರಶೈವ ಸಮುದಾಯ ಪೂರ್ಣವಾಗಿ ಬಿಜೆಪಿ ಪರ ನಿಲ್ಲದು. ಅದನ್ನು ರಾಜಕೀಯವಾಗಿ ಬಳಸಿಕೊಳ್ಳುವಂತೆಯೂ ತಿಳಿ ಹೇಳಿದ್ದಾರೆ. ಅಲ್ಲದೆ, ಚುನಾವಣೆಗೆ ಸಂಪನ್ಮೂಲ ಕ್ರೋಢೀಕರಣದ ಬಗ್ಗೆಯೂ ಸಭೆಯಲ್ಲಿ ಚರ್ಚೆಯಾಗಿದೆ.

ಎಐಸಿಸಿ ನಾಯಕರು ಕರೆದ ಸಭೆಯಲ್ಲಿ ಡಿ.ಕೆ. ಶಿವಕುಮಾರ್, ಸಿದ್ದರಾಮಯ್ಯ ಅಲ್ಲದೆ, ವಿಧಾನಪರಿಷತ್ತಿನ ಪ್ರತಿಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್, ಮಾಜಿ ಉಪಮುಖ್ಯಮಂತ್ರಿ ಡಾ.ಜಿ. ಪರಮೇಶ್ವರ್, ಕೇಂದ್ರದ ಮಾಜಿ ಸಚಿವ ಕೆ.ಎಚ್. ಮುನಿಯಪ್ಪ, ಮಾಜಿ ಸಚಿವರಾದ ರಾಮಲಿಂಗಾರೆಡ್ಡಿ, ಎಂಬಿ ಪಾಟೀಲ್, ಕೆ.ಜೆ. ಜಾರ್ಜ್, ಕಾರ್ಯಾಧ್ಯಕ್ಷರುಗಳಾದ ಸಲೀಂ ಅಹಮದ್, ಸತೀಶ್ ಜಾರಕಿಹೊಳಿ, ಧ್ರುವನಾರಾಯಣ, ಈಶ್ವರಖಂಡ್ರೆ ಸೇರಿದಂತೆ ರಾಜ್ಯದ 14 ಮಂದಿ ಭಾಗವಹಿಸಿದ್ದರು.

ಪ್ರಾದೇಶಿಕ ಪ್ರಾಕೃತಿಕ ವಿಜ್ಞಾನ ವಸ್ತು ಸಂಗ್ರಹಾಲಯದಲ್ಲಿ

ಪಶ್ಚಿಮ ಘಟ್ಟದ ಹಲವು ಗಿರಿಶಿಖರಗಳ ಸುಂದರ ಭೂದೃಶ್ಯಾವಳಿ ಅನಾವರಣ

ಅಂತಾರಾಷ್ಟ್ರೀಯ ಪರ್ವತ ದಿನದ ಪ್ರಯುಕ್ತ ಸಹ್ಯಾದ್ರಿ ಪರ್ವತ ಶ್ರೇಣಿಗಳ ಛಾಯಾಚಿತ್ರ ಪ್ರದರ್ಶನ



> ಪಶ್ಚಿಮ ಘಟ್ಟಗಳ ಪೈಕಿ ಮೈಸೂರಿಗೆ ಸಮೀಪವಿರುವ ಸ್ಥಳಗಳ ಛಾಯಾಚಿತ್ರ ಇಲ್ಲಿವೆ. ಕೊಡಗು ಜಿಲ್ಲೆಯ ವಿವಿಧ ಭಾಗಗಳ ಬೆಟ್ಟದ ಕಾನನ, ವನ್ಯಜೀವಿಗಳು, ಕೃಷಿ ಚಟುವಟಿಕೆಯಲ್ಲಿ ನಿರತರಾದ ಮಹಿಳಾ ಕೃಷಿ ಕಾರ್ಮಿಕರ ಛಾಯಾಚಿತ್ರಗಳು ಪ್ರದರ್ಶನದಲ್ಲಿವೆ. ಶೇ.80ರಷ್ಟು ಕೊಡಗು ಭಾಗದ ಚಿತ್ರಗಳಿದ್ದರೆ ಉಳಿದಂತೆ ಕೇರಳ ಮುನ್ನಾರ್ ಮತ್ತು ಊಟಿಯ ಕೆಲ ಪ್ರದೇಶಗಳ ಚಿತ್ರಾ ಇಲ್ಲಿ ಮೂಡಿಬಂದಿದೆ.
> -ಕೆ.ಸಿ.ಮಂದಪ್ಪ, ಬರಹಗಾರರು ಮತ್ತು ಛಾಯಾಗ್ರಾಹಕರು.





> ವನ್ಯಜೀವಿ ಮತ್ತು ಸಸ್ಯ ಸಂಪತ್ತಿಗಿಂತಲೂ ಹೆಚ್ಚಾಗಿ ಪರ್ವತಗಳ ಭೂದೃಶ್ಯಾವಳಿ ಛಾಯಾಚಿತ್ರಗಳನ್ನು ಕೆ.ಸಿ.ಮಂದಪ್ಪ ಇಲ್ಲಿ ಪ್ರದರ್ಶಿಸಿದ್ದಾರೆ. ಛಾಯಾಚಿತ್ರದೊಂದಿಗೆ ಆ ಪ್ರದೇಶದ ಬಗ್ಗೆ ಮಂದಪ್ಪ ಸಾಕಷ್ಟು ಅಧ್ಯಯನ ಮಾಡಿ, ವಿವರಗಳನ್ನು ಪ್ರಕಟಿಸಿದ್ದಾರೆ. ಬೆಟ್ಟಗಳು ಇದ್ದರೆ ಕೆರೆ ಕಟ್ಟೆಗಳು, ನದಿಗಳು ಜನ್ಮತಾಳಲು ಸಾಧ್ಯ. ಅದರಿಂದ ಕೃಷಿ ಚಟುವಟಿಕೆ ಹುಟ್ಟಿಕೊಳ್ಳಲು ಅವಕಾಶವಾಗುತ್ತದೆ. ಪರ್ವತ ಇದ್ದರೆ ಸಸ್ಯ ಸಂಕುಲ, ವನ್ಯಜೀವಿಗಳು ಮಾತ್ರವಲ್ಲದೆ, ಜನಜೀವನವೂ ಇರುತ್ತದೆ.
> -ಜಿ.ಎಸ್.ಯೋಗೇಂದ್ರ, ಶಿಕ್ಷಣ ಅಧಿಕಾರಿಗಳು, ಆರ್‌ಎಂಎನ್‌ಹೆಚ್

ಮೈಸೂರು,ಡಿ.12(ಪಿಎಂ)– ರಾಜ್ಯವೂ ಸೇರಿದಂತೆ ವಿವಿಧ ರಾಜ್ಯಗಳಲ್ಲಿ ವಿಸ್ತಾರವಾಗಿ ಹರಡಿಕೊಂಡಿರುವ ಪಶ್ಚಿಮ ಘಟ್ಟಗಳು ಅಥವಾ ಸಹ್ಯಾದ್ರಿ ಪರ್ವತ ಶ್ರೇಣಿಗಳು ಜಲಪಾತ, ನದಿಗಳಿಗೆ ಜನ್ಮ ನೀಡಿರುವ ಜೊತೆಗೆ ಸಸ್ಯ–ಪ್ರಾಣಿ ಸಂಕುಲದ ಆಶ್ರಯ ತಾಣಗಳೂ ಆಗಿವೆ. ಅಲ್ಲದೆ, ಪ್ರಾಕೃತಿಕ ಸೌಂದರ್ಯದೊಂದಿಗೆ ಜನಜೀವನಕ್ಕೂ ಆಸರೆಯಾಗಿರುವ ಇವುಗಳ ಸಂರಕ್ಷಣೆ ಅತ್ಯಗತ್ಯವೂ ಆಗಿದೆ.

ಪಶ್ಚಿಮ ಘಟ್ಟಗಳ ಪೈಕಿ ಕೊಡಗು ಜಿಲ್ಲೆಯ ಬೆಟ್ಟಗಳ ವಿಹಂಗಮ ನೋಟ ಸೇರಿದಂತೆ ತಮಿಳುನಾಡಿನ ಊಟಿ ಹಾಗೂ ಕೇರಳದ ಮುನ್ನಾರ್ ಗಿರಿಗಳ ಪ್ರಾಕೃತಿಕ ಸೌಂದರ್ಯದ ಛಾಯಾಚಿತ್ರಗಳು ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ಪ್ರಾದೇಶಿಕ ಪ್ರಾಕೃತಿಕ ವಿಜ್ಞಾನ ವಸ್ತು ಸಂಗ್ರಹಾಲಯದಲ್ಲಿ (ಆರ್‌ಎಂಎನ್‌ಹೆಚ್) ಅನಾವರಣಗೊಂಡಿವೆ.

ಪಶ್ಚಿಮ ಘಟ್ಟಗಳ ಸಂರಕ್ಷಣೆಯ ಮಹತ್ವದ ಬಗ್ಗೆ ಅರಿವು ಮೂಡಿಸಲು ತಿಂಗಳ ಅವಧಿಗೆ ಈ ಛಾಯಾಚಿತ್ರ ಪ್ರದರ್ಶನ ಆಯೋಜಿಸಿದ್ದು, ಇದಕ್ಕೆ ಅಂತಾರಾಷ್ಟ್ರೀಯ ಪರ್ವತ ದಿನವಾದ ಭಾನುವಾರ (ಡಿ.11) ಚಾಲನೆ ನೀಡಲಾಗಿದೆ. ಮಾನವನೂ ಸೇರಿದಂತೆ ಸಕಲ ಜೀವ ಸಂಕುಲಕ್ಕೆ ಪರ್ವತಗಳ ಸಂರಕ್ಷಣೆಯ ಅಗತ್ಯತೆ ಬಗ್ಗೆ ಅರಿವು ಮೂಡಿಸಲು ಪ್ರತಿ ವರ್ಷ ಡಿ.11ರಂದು ಅಂತಾರಾಷ್ಟ್ರೀಯ ಪರ್ವತ ದಿನ ಆಚರಣೆ ಮಾಡಲಾಗುತ್ತಿದೆ.

ಅಂತೆಯೇ ಆರ್‌ಎಂಎನ್‌ಹೆಚ್, ಸಾರ್ವಜನಿಕರಲ್ಲಿ ಪಶ್ಚಿಮ ಘಟ್ಟಗಳ ಸಂರಕ್ಷಣೆಯ ಅವಶ್ಯಕತೆ ಬಗ್ಗೆ ಜಾಗೃತಿ ಮೂಡಿಸಲು ಈ ಛಾಯಾಚಿತ್ರ ಪ್ರದರ್ಶನ ಹಮ್ಮಿಕೊಂಡಿದೆ. ಇಲ್ಲಿ ಪ್ರದರ್ಶನದಲ್ಲಿರುವ ಎಲ್ಲಾ ಛಾಯಾಚಿತ್ರಗಳೂ ಸೇರಿದಂತೆ ಪಶ್ಚಿಮ ಘಟ್ಟದ ಮಹತ್ತರ ಮಾಹಿತಿಗಳು ಕೊಡಗು ಜಿಲ್ಲೆ ನಿವಾಸಿಯಾದ ಬರಹಗಾರ, ಛಾಯಾಗ್ರಾಹಕ ಕೆ.ಸಿ.ಮಂದಪ್ಪ ಅವರ ಕೊಡುಗೆಯಾಗಿವೆ.

2023ರ ಜ.10ರವರೆಗೆ ಪ್ರದರ್ಶನ

ಪ್ರದರ್ಶನವು 2023ರ ಜ.10ರವರೆಗೆ ಇರಲಿದ್ದು, ಸಂಗ್ರಾಹಲಯದ ವಾರದ ರಜೆ ದಿನವಾದ ಸೋಮವಾರ ಮತ್ತು ಸರ್ಕಾರಿ ರಜೆ ದಿನಗಳನ್ನು ಹೊರತುಪಡಿಸಿ ಪ್ರತಿದಿನ ಬೆಳಗ್ಗೆ 10ರಿಂದ ಸಂಜೆ 6ರವರೆಗೆ ಸಾರ್ವಜನಿಕರು ಭೇಟಿ ನೀಡಬಹುದು. ಸದರಿ ಪ್ರದರ್ಶನಕ್ಕೆ ಮಾತ್ರವಲ್ಲದೆ, ಸಂಗ್ರಹಾಲಯಕ್ಕೆ ಪ್ರವೇಶ ಉಚಿತವಿದೆ.

'ಪಶ್ಚಿಮ ಘಟ್ಟಗಳ ಸಂರಕ್ಷಣೆಯ ಮಹತ್ವದ ಅಂಶಗಳಲ್ಲಿ ಸ್ಥಳೀಯತೆಯೂ ಒಂದು. ಇಲ್ಲಿನ ಅನೇಕ ಸಸ್ಯ ಮತ್ತು ಪ್ರಾಣಿ ಸಂಕುಲ ಪ್ರಪಂಚದ ಬೇರೆ ಎಲ್ಲಿಯೂ ಕಂಡುಬರುವುದಿಲ್ಲ. ಇಲ್ಲಿ ಕಂಡುಬರುವ ಅರ್ಧಕ್ಕಿಂತ ಹೆಚ್ಚು ಜಾತಿಯ ಮರಗಳು, ಪ್ರಾಣಿಗಳು, ಮೀನುಗಳು ಬೇರೆಲ್ಲೂ ಕಾಣಸಿಗುವುದಿಲ್ಲ' ಎಂಬ ಮಹತ್ವದ ಅಂಶವನ್ನೂ ಛಾಯಾಚಿತ್ರಗಳ ಜೊತೆಯಲ್ಲಿ ಪ್ರದರ್ಶಿಸಲಾಗಿದೆ.

ಇಲ್ಲಿರುವ ಒಟ್ಟು 36 ಛಾಯಾಚಿತ್ರಗಳ ಪೈಕಿ ಹೆಚ್ಚಾಗಿ ಕೊಡಗು ಜಿಲ್ಲೆಯ ವಿವಿಧ ಬೆಟ್ಟಗುಡ್ಡಗಳ ಪ್ರಾಕೃತಿಕ ರಮಣೀಯತೆಯನ್ನು ಕೆ.ಸಿ.ಮಂದಪ್ಪ ಸೆರೆ ಹಿಡಿದಿದ್ದಾರೆ. ಇಲ್ಲಿನ ಕಾವೇರಿ ನದಿಯ ತೊರೆಗಳು, ಪ್ರಾಣಿ, ಪಕ್ಷಿಗಳ ಅಪರೂಪದ ನೋಟವನ್ನು ತಮ್ಮ ಕ್ಯಾಮರಾದಲ್ಲಿ ಕ್ಲಿಕ್ಕಿಸಿದ್ದಾರೆ ಜೊತೆಗೆ ಊಟಿ ಮತ್ತು ಮುನ್ನಾರ್‌ನ ಕೆಲ ತಾಣಗಳನ್ನೂ ಸೆರೆ ಹಿಡಿದು ಇಲ್ಲಿ ಅನಾವರಣಗೊಳಿಸಿದ್ದಾರೆ.

ಕೊಡಗು ಜಿಲ್ಲೆಯ ವಿರಾಜಪೇಟೆ ತಾಲೂಕಿನ ಪಾಲಿಬೆಟ್ಟದ ಕೆರೆಕಟ್ಟೆಯೊಳಗೆ ಹಾದು ಹೋಗುತ್ತಿರುವ ಎರಡು ಕಾಡಾನೆಗಳ ಚಿತ್ರವು ವನ್ಯಜೀವಿ ಸಂಕುಲದ ಸಂಕೇತವಾಗಿ ಇಲ್ಲಿ ಅನಾವರಣಗೊಂಡಿದೆ. ಇದೇ ತಾಲೂಕಿನ ಕುಟ್ಟದಲ್ಲಿ ಹಸಿರು ಕಾನನದಲ್ಲಿ ಕಂಡರೂ ಕಾಣದಂತಿರುವ ಹಸಿರು ಹಾವಿನ ಚಿತ್ರ ಇಲ್ಲಿ ಸೃಷ್ಟಿಯ ವೈಚಿತ್ರವನ್ನು ಉಲ್ಲೇಖಿಸಿದೆ. ಮೂರು ಪರ್ವತ ಶ್ರೇಣಿಯ ಸಂಗಮವಾದ ಕೇರಳದ ಮುನ್ನಾರ್‌ನಲ್ಲಿ ಅಪರೂಪದ ಜೀವ ಸಂಕುಲ ಎನ್ನಲಾಗಿರುವ ನೀಲಗಿರಿ ಕಾಡು ಮೇಕೆ (ನೀಲಗಿರಿಥಾರ್) ಒಂದರ ಚಿತ್ರವೂ ಇಲ್ಲಿದೆ.

ಪರ್ವತ ಶ್ರೇಣಿಯ ಸೂರ್ಯಾಸ್ತ: ಕೊಡಗಿನ ಕಕ್ಕಬೆಯಲ್ಲಿರುವ ಪಾಡಿ ಇಗ್ಗುತಪ್ಪ ದೇವಾಲಯ ಬಳಿಯಿಂದ ಪರ್ವತ ಶ್ರೇಣಿಯಲ್ಲಿ ಇಣುಕುವಂತಿರುವ ಸೂರ್ಯಾಸ್ತದ ಛಾಯಾಚಿತ್ರವೂ ಇಲ್ಲಿ ಆಕರ್ಷಕವಾಗಿದೆ. ನಾಪೋಕ್ಲು ಬಳಿಯಲ್ಲಿ ಕಾವೇರಿ ನದಿ ತೊರೆಯಾಗಿ ಹರಿದು ಬರುತ್ತಿರುವ ಚಿತ್ರಣವೂ ಜೀವನದಿಯ ರಮಣೀಯತೆಯನ್ನು ಅನಾವರಣಗೊಳಿಸಿದೆ. 'ಪಶ್ಚಿಮ ಘಟ್ಟಗಳು ನಮ್ಮ ದೇಶದ ದಕ್ಷಿಣ ಭಾಗದಲ್ಲಿ 250 ದಶಲಕ್ಷಕ್ಕೂ ಹೆಚ್ಚು ಜನತೆಗೆ ಕುಡಿಯಲು ಸೇರಿದಂತೆ ನಿತ್ಯಕರ್ಮಗಳಿಗೆ ನೀರು ಒದಗಿಸುತ್ತಿವೆ. ನಮ್ಮ ಆಹಾರ ಉತ್ಪಾದನೆಗೂ ನೀರು ಅತ್ಯಗತ್ಯ. ನಾವು ಪರ್ವತಗಳಲ್ಲಿ ವಾಸಿಸದಿದ್ದರೂ ನಮ್ಮ ದೈನಂದಿನ ಜೀವನ ನಿರ್ಧರಿಸುವಲ್ಲಿ ಈ ಪರ್ವತಗಳು ಪ್ರಮುಖ ಪಾತ್ರ ವಹಿಸುತ್ತವೆ. ಹಾಗಾಗಿ ಅವುಗಳ ಸಂರಕ್ಷಣೆ ಮುಖ್ಯ' ಎಂಬ ಸಂದೇಶವೂ ಇಲ್ಲಿ ಪ್ರಕಟಗೊಂಡಿದೆ.

ಪಶ್ಚಿಮ ಘಟ್ಟದ ಮಹತ್ವದ ಅಂಶಗಳ ಪಟ್ಟಿಯನ್ನು ಇಲ್ಲಿ ಪ್ರದರ್ಶಿಸಲಾಗಿದೆ. ಒಟ್ಟು ಪ್ರದೇಶ 160,000 ಚದರ ಕಿ.ಮೀ., ಉದ್ದ 1600 ಕಿ.ಮೀ., ಅತ್ಯಂತ ಎತ್ತರದ ಶಿಖರ ಆನೆಮುಡಿ (2695) ಎಂಬ ಅಂಕಿ ಅಂಶ ನೀಡಲಾಗಿದೆ. ಜೊತೆಗೆ 7,402 ಹೂಬಿಡುವ ಸಸ್ಯಗಳು, 139 ಜಾತಿಯ ಸಸ್ತನಿಗಳು, 508 ಜಾತಿಯ ಪಕ್ಷಿಗಳು ಇವೆ ಎಂಬುದೂ ಸೇರಿದಂತೆ ಹಲವು ಮಹತ್ವದ ಅಂಶಗಳನ್ನು ಇಲ್ಲಿ ಉಲ್ಲೇಖಿಸಲಾಗಿದೆ. 'ಈ ಪ್ರದರ್ಶನವು ನಮ್ಮ ಸಮೀಪದಲ್ಲೇ ಇರುವ ಪರ್ವತ ಶ್ರೇಣಿಯ ವೈಭವದ ನೈಸರ್ಗಿಕ ಪರಂಪರೆಯ ಪರಿಚಯಿಸುವ ಪ್ರಯತ್ನವಾಗಿದೆ. ಆ ಮೂಲಕ ನಮ್ಮೆಲ್ಲರ ಜೀವನ ಮತ್ತು ನಮ್ಮ ಜೀವನೋಪಾಯಕ್ಕೆ ಅತ್ಯಗತ್ಯವಾಗಿರುವ ಈ ಗಿರಿಶಿಖರಗಳ ಸಂರಕ್ಷಣೆಯ ಸಂದೇಶ ರವಾನಿಸುವ ಉದ್ದೇಶ ಹೊಂದಲಾಗಿದೆ' ಎನ್ನುತ್ತಾರೆ ಕೆ.ಸಿ.ಮಂದಪ್ಪ.

ಚಾಲನೆ: ಅಂತಾರಾಷ್ಟ್ರೀಯ ಪರ್ವತ ದಿನವಾದ ಭಾನುವಾರ ಪ್ರಾದೇಶಿಕ ಪ್ರಾಕೃತಿಕ ವಿಜ್ಞಾನ ಸಂಗ್ರಹಾಲಯದಲ್ಲಿ ಛಾಯಾಚಿತ್ರ ಪ್ರದರ್ಶನಕ್ಕೆ ಚಾಲನೆ ನೀಡಲಾಯಿತು. ಮುನ್ನಾರ್‌ನ ಟಾಟಾ ಟೀ ಎಸ್ಟೇಟ್‌ನ ವ್ಯವಸ್ಥಾಪಕ ಡಾ.ಕೆ.ಎನ್.ಚೆಂಗಪ್ಪ ಚಾಲನೆ ನೀಡಿದರು. ಛಾಯಾಗ್ರಾಹಕ ಕೆ.ಸಿ.ಮಂದಪ್ಪ, ಮೈಸೂರು ಆರ್‌ಎಂಎನ್‌ಹೆಚ್‌ನ ಮುಖ್ಯಸ್ಥರೂ ಆದ ವಿಜ್ಞಾನಿ ಡಾ.ಎ.ಪಿ.ತಿವಾರಿ, ಆರ್‌ಎಂಎನ್ ಹೆಚ್‌ನ ವಿಜ್ಞಾನಿ ಎಂ.ವಿಜಯ್, ಶಿಕ್ಷಣ ಅಧಿಕಾರಿ ಬಿ.ಎಸ್. ಯೋಗೇಂದ್ರ ಮತ್ತಿತರರು ಹಾಜರಿದ್ದರು.

ನಿರ್ಮಾಣ ಸಾಮಾಗ್ರಿಗಳ ಪ್ರದರ್ಶನ ಮೈಬಿಲ್ಡ್ –22ಕ್ಕೆ ತೆರೆ

ಹೈದರಾಬಾದ್ ಮೂಲದ ವೆವಿನ್ ವೆಕ್ಟಿಸ್, ಡೆಬುಟೆಂಟ್ ಮಳಿಗೆಗೆ ಸಮಗ್ರ ಪ್ರಶಸ್ತಿ

ಮೈಸೂರು, ಡಿ.12(ಎಸ್‌ಪಿಎನ್)– ಬಿಲ್ಡರ್ ಅಸೋಸಿಯೇಷನ್ ಆಫ್ ಇಂಡಿಯಾ ಮೈಸೂರು ಕೇಂದ್ರದ ವತಿಯಿಂದ ಆಯೋಜಿಸಿದ್ದ ಮೂರು ದಿನಗಳ ಮೈಬಿಲ್ಡ್–22 ಪ್ರದರ್ಶನ ಹಲವು ತಂತ್ರಜ್ಞಾನಗಳನ್ನು ಗ್ರಾಹಕರಿಗೆ ಪರಿಚಯಿಸುವ ಮೂಲಕ ಸೋಮವಾರ ತೆರೆ ಕಂಡಿತು.

ಈ ಪ್ರದರ್ಶನದಲ್ಲಿ ನವ ನವೀನ ತಂತ್ರಜ್ಞಾನ ಅಳವಡಿಸಿ ಇದೇ ಪ್ರಥಮ ಬಾರಿಗೆ ಮೈ ಬಿಲ್ಡ್–22ರಲ್ಲಿ ಪಾಲ್ಗೊಂಡಿದ್ದ ಹೈದರಾಬಾದ್ ಮೂಲದ ವೆವಿನ್ ವೆಕ್ಟಿಸ್, ಡೆಬುಟೆಂಟ್ ಕಂಪನಿಯ ಮಳಿಗೆಗಳಿಗೆ ಸಮಗ್ರ ಪ್ರಶಸ್ತಿ ಹಾಗೂ ಎಸ್ ಕೆ ಸ್ಟಾಲ್‌ಗೆ ಸಮಾಧಾನಕರ ಬಹುಮಾನವನ್ನು ಸೋಮವಾರ ನೀಡಲಾಯಿತು.

ಮೈಸೂರು ಮಹಾರಾಜ ಕಾಲೇಜು ಮೈದಾನದಲ್ಲಿ ಕಳೆದ ಮೂರು ದಿನಗಳಿಂದ ನಡೆಯುತ್ತಿದ್ದ ಮೈಬಿಲ್ಡ್–22 ಪ್ರದರ್ಶನದ ಮುಕ್ತಾಯ ಸಮಾರಂಭದಲ್ಲಿ ಬೆಂಗಳೂರಿನ ಅಲ್ಟ್ರಾಟೆಕ್ ಸಿಮೆಂಟ್ (ಲಿ)ನ ರಿಜಿನಲ್ ಹೆಡ್ ಅಶೋಕ್ ರೆಡ್ಡಿ ಹಾಗೂ ಮೈಸೂರು ಬಿಲ್ಡರ್ ಚಾರಿಟಬಲ್ ಟ್ರಸ್ಟ್‌ನ ವ್ಯವಸ್ಥಾಪಕ ಟ್ರಸ್ಟಿ ಎ.ವಿ.ಶ್ರೀಧರ್ ನೇತೃತ್ವದಲ್ಲಿ ಪ್ರಮಾಣ ಪತ್ರ ವಿತರಿಸಲಾಯಿತು.

ಪ್ಲಾಟಿನಂ ಬ್ಲಾಕ್‌ನಲ್ಲಿದ್ದ ಸಿಂಗಲ್ ಸ್ಟಾರ್ ಮಳಿಗೆಗಳ ಸಾಲಿನಲ್ಲಿ ಶ್ರೀ ರಾಘವೇಂದ್ರ ಎಂಟರ್ ಪ್ರೈಸಸ್ ವತಿಯಿಂದ 'ಯುರೋಪ್ ಲಾಕ್ಸ್' ಪ್ರದರ್ಶಿಸಿದ್ದ ಮಳಿಗೆಗೆ (ಪ್ರ), ಪವರ್ ಗೇಟ್ ಎನರ್ಜಿ ಮಳಿಗೆಗೆ (ದ್ವಿ), ಸ್ಟೋನ್ ಸಿಂಕ್ ಮಳಿಗೆಗೆ ತೃತೀಯ ಬಹುಮಾನ ನೀಡಲಾಯಿತು.

ಮಲ್ಟಿ ಸ್ಟಾರ್ ಕೆಟಗರಿಯಲ್ಲಿ ಸುಮುಖ ಬಿಲ್ಡಿಂಗ್ ಸಲ್ಯೂಷನ್ ವತಿಯಿಂದ ಆಧುನಿಕ ತಂತ್ರಜ್ಞಾನವುಳ್ಳ 'ಲಿಫ್ ಸ್ಟೀಲ್ ಡೋರ್ಸ್' ಪ್ರದರ್ಶಿಸಿದ್ದ ಮಳಿಗೆಗೆ (ಪ್ರ), ಆರ್‌ಕೆಬಿ ಬಿಲ್ಡಿಂಗ್ ಪ್ರಾಡಕ್ಟ್ಸ್ ಮಳಿಗೆ(ದ್ವಿ), ರಿಲೆಕಾಂಪ್ ಎಲಿವೆಟರ್ಸ್ ಪ್ರೈ ಲಿ ಮಳಿಗೆಗೆ ತೃತೀಯ ಬಹುಮಾನವನ್ನು ಆಯಾಯ ಮಳಿಗೆಯ ಪ್ರತಿನಿಧಿಗಳಿಗೆ ನೀಡಿ, ಗೌರವಿಸಲಾಯಿತು.

ಡೈಮಂಡ್ ಸಿಂಗಲ್ ಸ್ಟಾರ್ ಕೆಟಗರಿಯಲ್ಲಿ 'ಇ–3 ವುಡ್' ಮಳಿಗೆಗೆ(ಪ್ರ), ಇನ್ನೋವೇಟಿವ್ ಡಿಸೈನ್ ಮಳಿಗೆಗೆ (ದ್ವಿ), ಎಸ್‌ಓಜಿ ಇನ್‌ಟೀರಿಯರ್ ಅಂಡ್ ಲೈಫ್ ಸ್ಟೈಲ್ ಮಳಿಗೆಗೆ ತೃತೀಯ ಬಹುಮಾನ ನೀಡಿ ಗೌರವಿಸಲಾಯಿತು. ನಕ್ಷ ಬಿಲ್ಡರ್ಸ್ ಮಳಿಗೆಗೆ (ಪ್ರ), ಗೀತಾಸ್ ಡೋರ್ ಎನ್ ಮಳಿಗೆಗೆ (ದ್ವಿ), ಟಫ್‌ವುಡ್ ಅಂಡ್ ಆದೇಶಿವ್ಸ್ ಮಳಿಗೆಗೆ ತೃತೀಯ ಬಹುಮಾನ ಗೌರವಿಸಲಾಯಿತು.

ಬಹುಮಾನ ವಿತರಿಸಿ ಮಾತನಾಡಿದ ಬೆಂಗಳೂರಿನ ಅಲ್ಟ್ರಾಟೆಕ್ ಸಿಮೆಂಟ್ (ಲಿ)ನ ರಿಜಿನಲ್ ಹೆಡ್ ಅಶೋಕ್ ರೆಡ್ಡಿ, ಈ ಬಾರಿಯ ಮೈ ಬಿಲ್ಡ್ 22 ಪ್ರದರ್ಶನ ಅದ್ಧೂರಿಯಾಗಿ ಆಯೋಜಿಸಲಾಗಿದೆ. ದೇಶದ ವಿವಿಧ ಕಂಪನಿಗಳಿಗೆ ಮೈ ಬಿಲ್ಡ್‌ಗೆ ಆಹ್ವಾನ ನೀಡಿ, ರಿಯಲ್ ಎಸ್ಟೇಟ್ ಉದ್ಯಮದ ತಂತ್ರಜ್ಞಾನದಲ್ಲಿ ಆಗುತ್ತಿರುವ ಬದಲಾವಣೆ ಬಗ್ಗೆ ಮೈ ಬಿಲ್ಡ್ ಪ್ರದರ್ಶನ ಅನಾವರಣಗೊಳಿಸಿದೆ. ಇಂತಹ ದೊಡ್ಡ ಪ್ರದರ್ಶನ ಬೆಂಗಳೂರು ಬಿಟ್ಟರೆ ಮೈಸೂರಿನಲ್ಲಿ ಆಯೋಜಿಸಿರುವುದು ಉತ್ತಮ ಬೆಳವಣಿಗೆ ಎಂದರು.

ನಂತರ ಮೈಸೂರು ಬಿಲ್ಡರ್ಸ್ ಚಾರಿಟೆಬಲ್ ಟ್ರಸ್ಟ್‌ನ ವ್ಯವಸ್ಥಾಪಕ ಟ್ರಸ್ಟಿ ಎ.ವಿ.ಶ್ರೀಧರ್ ಮಾತನಾಡಿ, ಮೊದಲ ಬಾರಿಗೆ ನಂಜರಾಜ ಬಹುದ್ದೂರ್ ಛತ್ರದಲ್ಲಿ ಕೇವಲ 20 ಮಳಿಗೆಗಳ ಮೂಲಕ ಕೆಲವು ವರ್ಷಗಳ ಹಿಂದೆ ಆರಂಭವಾಯಿತು. ಇಂದು ಮಹಾರಾಜ ಕಾಲೇಜು ಮೈದಾನದಲ್ಲಿ ಬೃಹತ್ ಪ್ರದರ್ಶನ ಏರ್ಪಡಿಸಿರುವುದರ ಹಿಂದೆ ಹಲವರ ಶ್ರಮವಿದೆ ಎಂದರು.

ಈ ವೇಳೆ ಬಿಎಐ ಛೇರ್ಮನ್ ಆರ್.ರಘುನಾಥ್, ಮೈಬಿಲ್ಡ್–22 ಛೇರ್ಮನ್ ಮಹಬಲೇಶ್ವರ್ ಬೈರಿ, ಬಿಎಐ ಕಾರ್ಯದರ್ಶಿ ವಿ.ಶ್ರೀನಾಥ್, ಮೈಬಿಲ್ಡ್22 ಕಾರ್ಯದರ್ಶಿ ಕೆಟಿಗೋವಿಂದರಾಜು ಸೇರಿದಂತೆ ಇತರರಿದ್ದರು.



ಮೈ ಬಿಲ್ಡ್–22ರಲ್ಲಿ ಇದೇ ಪ್ರಥಮ ಬಾರಿಗೆ ಪಾಲ್ಗೊಂಡಿದ್ದ ಹೈದರಾಬಾದ್ ಮೂಲದ ವೆವಿನ್ ವೆಕ್ಟಿಸ್, ಡೆಬುಟೆಂಟ್ ಕಂಪನಿಯ ಮಳಿಗೆಗಳಿಗೆ ಸಮಗ್ರ ಪ್ರಶಸ್ತಿಯನ್ನು ಬೆಂಗಳೂರಿನ ಅಲ್ಟ್ರಾಟೆಕ್ ಸಿಮೆಂಟ್ (ಲಿ)ನ ರಿಜಿನಲ್ ಹೆಡ್ ಅಶೋಕ್ ರೆಡ್ಡಿ ಹಾಗೂ ಮೈಸೂರು ಬಿಲ್ಡರ್ ಚಾರಿಟೆಬಲ್ ಟ್ರಸ್ಟ್‌ನ ವ್ಯವಸ್ಥಾಪಕ ಟ್ರಸ್ಟಿ ಎ.ವಿ.ಶ್ರೀಧರ್ ನೇತೃತ್ವದಲ್ಲಿ ಪ್ರದಾನ ಮಾಡಲಾಯಿತು.

ನರೇಗಾ ಯೋಜನೆಯಡಿ ತಾಲೂಕಿನ 3500ಕ್ಕೂ ಹೆಚ್ಚು ಮಂದಿ ಫಲಾನುಭವಿಗಳಿಗೆ ಗಿಡಗಳ ವಿತರಣೆ

ಮೈಸೂರು, ಡಿ.12– ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ತಾಲೂಕಿನ 34 ಗ್ರಾಪಂ ವ್ಯಾಪ್ತಿಯಲ್ಲಿ 3500ಕ್ಕೂ ಹೆಚ್ಚು ಮಂದಿ ಫಲಾನುಭವಿಗಳಿಗೆ ಗಿಡಗಳನ್ನು ವಿತರಣೆ ಮಾಡಲಿದ್ದು, ಗಿಡಗಳ ಜೊತೆಗೆ 3190 ರೂ. ಕೂಲಿ ಮೊತ್ತ ದೊರೆಯಲಿದೆ ಎಂದು ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳಾದ ಸಿ.ಆರ್.ಕೃಷ್ಣಕುಮಾರ್ ತಿಳಿಸಿದರು.

ಸೋಮವಾರ ತಾಲೂಕಿನ ಕಂಪಲಾಪುರ ಗ್ರಾಮಪಂಚಾಯಿತಿ ಎದುರು ವೈಯಕ್ತಿಕ ಪೌಷ್ಠಿಕ ಕೈ ತೋಟ ನಿರ್ಮಾಣಕ್ಕೆ ಗಿಡಗಳನ್ನು ವಿತರಿಸಿ ಮಾತನಾಡಿದ ಅವರು, ತೋಟಗಾರಿಕೆ ಇಲಾಖೆ ವತಿಯಿಂದ ಆರೋಗ್ಯಕ್ಕೆ ಪೂರಕವಾದಂತಹ ಗಿಡಗಳನ್ನು ಫಲಾನುಭವಿಗಳಿಗೆ ಒದಗಿಸಲಾಗಿದೆ. ಗಿಡಗಳನ್ನು ಈ ದಿನವೇ ನಾಟಿ ಮಾಡಿ, ಸಂರಕ್ಷಿಸುವುದು ನಿಮ್ಮ ಜವಾಬ್ದಾರಿಯಾಗಿದೆ. ಗಿಡಗಳನ್ನು ಮಾರಾಟ ಮಾಡದೇ, ಸ್ವತಃ ತಮ್ಮ ಜಮೀನಿನಲ್ಲಿ ನಾಟಿ ಮಾಡಿಕೊಂಡು ಅದರ ಲಾಭ ಪಡೆಯಬೇಕು ಎಂದು ಸಲಹೆ ನೀಡಿದರು.

ಪ್ರತಿ ಗ್ರಾಪಂ ಮಟ್ಟದಲ್ಲಿ ಸ್ವ–ಸಹಾಯ ಸಂಘದ 101 ಮಂದಿ ಫಲಾನುಭವಿಗಳನ್ನು ಆಯ್ಕೆ ಮಾಡಿದ್ದು, ಪ್ರತಿ ಫಲಾನುಭವಿಗೆ ತೆಂಗು, ನುಗ್ಗೆ, ನಲ್ಲಿ, ಕರಿಬೇವು, ನಿಂಬೆ, ಚಕ್ರಮುನಿ, ಸೀಬೆ, ಸಪೋಟ ಸೇರಿದಂತೆ ಒಟ್ಟು 15 ಗಿಡಗಳನ್ನು ವಿತರಿಸಲು ನಿರ್ಧರಿಸಲಾಗಿದೆ.

ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರಾದ ಬಿ.ಎನ್.ಸುವೇದ ಅವರು ಮಾತನಾಡಿ, ಮಹಿಳೆಯರು ಗಿಡಗಳನ್ನು ತಮ್ಮ ಜಮೀನಿನಲ್ಲಿ ನಾಟಿ ಮಾಡಿ, ಅಗತ್ಯ ಗೊಬ್ಬರ, ನೀರು ಪೂರೈಸಬೇಕು. ತೆಂಗು, ಚಕ್ರಮುನಿ, ನಿಂಬೆ, ಕರಿಬೇವು ಹೀಗೆ ಉಪಯುಕ್ತವಾದ ಗಿಡಗಳನ್ನು ವಿತರಿಸುತ್ತಿದ್ದು, ಸದುಪಯೋಗಪಡಿಸಿಕೊಳ್ಳಿ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಸಹಾಯಕ ನಿರ್ದೇಶಕರಾದ(ಗ್ರಾ.ಉ) ಕರುಣಾಕರ್, ಗ್ರಾಮಪಂಚಾಯಿತಿ ಅಧ್ಯಕ್ಷರಾದ ಮಮತಾ, ಉಪಾಧ್ಯಕ್ಷರು ಕೆ.ಎನ್.ರಾಮಲಿಂಗಂ, ಪಿಡಿಒ ಪರಮೇಶ್, ಎಂಜಿನಿಯರ್ ರಶ್ಮಿ, ಐಇಸಿ ಸಂಯೋಜಕ ಡಿ.ರವಿಕುಮಾರ್ ಸೇರಿದಂತೆ ಗ್ರಾ.ಪಂ ಸದಸ್ಯರು ಉಪಸ್ಥಿತರಿದ್ದರು.

ಮಧ್ಯ ಪ್ರದೇಶ: ಸಂವಿಧಾನ ಉಳಿಸಲು ಮೋದಿ ಹತ್ಯೆಗೆ ಕರೆ; ಕಾಂಗ್ರೆಸ್ ಮುಖಂಡನ ವಿರುದ್ಧ ಎಫ್ ಐಆರ್, ಸರ್ಕಾರ ಆದೇಶ

ಭೂಪಾಲ್: ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಮಧ್ಯ ಪ್ರದೇಶದ ಹಿರಿಯ ಕಾಂಗ್ರೆಸ್ ನಾಯಕರೊಬ್ಬರು ವಿವಾದಾತ್ಮಕ ಹೇಳಿಕೆ ನೀಡಿದ್ದಾರೆ. ಸಂವಿಧಾನ ರಕ್ಷಿಸಲು ಮತ್ತು ದಲಿತರು, ಅಲ್ಪಸಂಖ್ಯಾತರ ಭವಿಷ್ಯಕ್ಕಾಗಿ ಪ್ರಧಾನಿ ಮೋದಿ ಅವರ ಹತ್ಯೆಗೆ ಸಜ್ಜಾಗುವಂತೆ ಪಕ್ಷದ ಕಾರ್ಯಕರ್ತರಿಗೆ ಕರೆ ನೀಡಿದ್ದಾರೆ. ಈ ಹೇಳಿಕೆ ನೀಡಿರುವ ಮಾಜಿ ಸಚಿವ ರಾಜಾ ಪಟೇರಿಯಾ ವಿರುದ್ಧ ಎಫ್‌ಐಆರ್ ದಾಖಲಿಸಲು ರಾಜ್ಯ ಸರ್ಕಾರ ಆದೇಶಿಸಿದೆ. ಪ್ರಧಾನಿ ಮೋದಿ ಅವರನ್ನು ಕೊಲ್ಲಲು ರೆಡಿಯಾಗಿ ಎಂದು ಪಟೇರಿಯಾ, ಕಾಂಗ್ರೆಸ್ ಕಾರ್ಯಕರ್ತರಿಗೆ ನೀಡಿರುವ ಹೇಳಿಕೆಯ ವಿಡಿಯೋ ಸೋಮವಾರ ಬೆಳಗ್ಗೆ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿದೆ.

ಮೋದಿ ಚುನಾವಣೆಗೆ ಅಂತ್ಯ ಕಾಣಿಸುತ್ತಾರೆ. ಧರ್ಮ, ಜಾತಿ ಮತ್ತು ಭಾಷೆ ಆಧಾರದ ಮೇಲೆ ವಿಭಜಿಸುತ್ತಿದ್ದಾರೆ. ದಲಿತರು, ಬುಡಕಟ್ಟು ಮತ್ತು ಅಲ್ಪಸಂಖ್ಯಾತರ ಭವಿಷ್ಯ ಅಪಾಯದಲ್ಲಿದೆ. ನೀವು ಸಂವಿಧಾನವನ್ನು ಉಳಿಸಲು ಬಯಸಿದರೆ, ಮೋದಿ ಹತ್ಯೆಗೆ ಸಿದ್ಧರಾಗಿ. ಮೋದಿ ಅವರನ್ನು ಸೋಲಿಸುವ ಭಾವನೆಯೊಂದಿಗೆ ಹತ್ಯೆ ಮಾಡಿ ಎಂದು ಪಟೇರಿಯಾ ಪನ್ನಾ ಜಿಲ್ಲೆಯ ಪವೈಯಲ್ಲಿ ನಡೆದ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಹೇಳಿದ್ದಾರೆ.

ಇದೇ ಮೊದಲು ರಾಜ್ಯ ಬಜೆಟ್‌ನಲ್ಲಿ ಯುವ ಬಜೆಟ್ ಮಂಡನೆಗೂ ಸಿದ್ಧತೆ

ರಾಜ್ಯ ಮಟ್ಟದ ಯೋಗವ್ಯೂಹ ರಚನಾ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಿಸಿದ ನಂತರ ಕ್ರೀಡಾ ಸಚಿವ ಡಾ.ಕೆ.ಸಿ.ನಾರಾಯಣಗೌಡರಿಂದ ಮಾಹಿತಿ



ಮೈಸೂರು, ಡಿ.12(ಆರ್‌ಕೆಬಿ)– ಮುಂಬರುವ ರಾಜ್ಯ ಬಜೆಟ್‌ನಲ್ಲಿ ಇದೇ ಮೊದಲ ಬಾರಿಗೆ ಯುವ ಬಜೆಟ್ ಮಂಡಿಸಲಾಗುವುದು ಎಂದು ಕ್ರೀಡಾ ಸಚಿವ ಡಾ.ಕೆ.ಸಿ.ನಾರಾಯಣಗೌಡ ಇಂದಿಲ್ಲಿ ತಿಳಿಸಿದರು.

ಮೈಸೂರು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ವಿಭಾಗದ ಸ್ಪೋರ್ಟ್ಸ್ ಪೆವಿಲಿಯನ್‌ನಲ್ಲಿ ಕ್ರೀಡಾ ಭಾರತಿ ಜಿಲ್ಲಾ ಘಟಕ ಸೋಮವಾರ ಆಯೋಜಿಸಿದ್ದ ಜಿಲ್ಲಾ ಮಟ್ಟದ ಕ್ರೀಡಾಕೂಟ ಮತ್ತು ರಾಜ್ಯ ಮಟ್ಟದ ಯೋಗವ್ಯೂಹ ರಚನಾ ಸ್ಪರ್ಧೆ ವಿಜೇತ ಶಾಲೆಗಳಿಗೆ ನಗದು ಬಹುಮಾನ ವಿತರಿಸಿ ಅವರು ಮಾತನಾಡಿದರು.

ರಾಷ್ಟ್ರೀಯ, ಅಂತಾರಾಷ್ಟ್ರೀಯ ಕ್ರೀಡೆಗಳಲ್ಲಿ ಸಾಧನೆ ಮಾಡಿದ ರಾಜ್ಯದ ಕ್ರೀಡಾಪಟುಗಳಲ್ಲಿ ಶೇ.50ರಷ್ಟು ಮಂದಿಗೆ ಉದ್ಯೋಗ ನೀಡಲು ಯೋಜಿಸಲಾಗಿದೆ. ಅಲ್ಲದೆ, ವಿವಿಧ ಇಲಾಖೆಗಳಲ್ಲಿ ಶೇ.2ರಷ್ಟು ಉದ್ಯೋಗ ಮೀಸಲಿಡಲು ಮುಖ್ಯಮಂತ್ರಿಗಳು ಸಹ ಒಪ್ಪಿದ್ದಾರೆ ಎಂದು ಹೇಳಿದರು.

ರಾಜಕಾರಣಿಗಳಲ್ಲೂ ಕ್ರೀಡಾ ಮನೋಭಾವ ಅಗತ್ಯ: ಕ್ರೀಡೆಗಳಲ್ಲಿ ಸೋಲು–ಗೆಲುವು ಮುಖ್ಯವಲ್ಲ. ಸೋತವರು–ಗೆದ್ದವರು ಇಬ್ಬರಿಗೂ ಗೆಲುವಿದ್ದಂತೆಯೇ. ಇಂತಹ ಕ್ರೀಡಾ ಮನೋಭಾವ ರಾಜಕಾರಣಿಗಳಲ್ಲೂ ಅಗತ್ಯ. ಸೋತವರು, ಮೋಸ ಹೋದವರೆಂಬ ಭೇದವಿಲ್ಲದೆ ಉತ್ತಮ ಕೆಲಸ, ಕಾರ್ಯ ಮಾಡಿದ ಆತ್ಮವಿಶ್ವಾಸ ಹೊಂದಬೇಕು ಎಂದು ಸಲಹೆ ನೀಡಿದರು.

ಕ್ರೀಡಾ ಭಾರತಿಯ ಸ್ಪರ್ಧಾ ಕ್ರೀಡಾಕೂಟದ ಬಗ್ಗೆ ಪ್ರಶಂಸೆ ವ್ಯಕ್ತಪಡಿಸಿದ ಅವರು, ಸರ್ಕಾರದಿಂದ ಕ್ರೀಡಾ ಭಾರತಿಯ ಈ ಕಾರ್ಯಕ್ರಮಕ್ಕೆ 5 ಲಕ್ಷ ಅನುದಾನ ನೀಡುವುದಾಗಿ ಘೋಷಿಸಿದರು.

ಇದೇ ಸಂದರ್ಭದಲ್ಲಿ ಸಚಿವರು ರಾಜ್ಯಮಟ್ಟದ ಯೋಗವ್ಯೂಹ ರಚನಾ ಸ್ಪರ್ಧೆಯಲ್ಲಿ ವಿಜೇತರಾದ ಮೈಸೂರಿನ ಪೋದಾರ್ ಇಂಟರ್‌ನ್ಯಾಷನಲ್ ಸ್ಕೂಲ್‌ಗೆ ಒಂದು ಲಕ್ಷ ರೂ. (ಪ್ರಥಮ) ನಗದು ಬಹುಮಾನ, ಮೈಸೂರಿನ ಪೊಲೀಸ್ ಪಬ್ಲಿಕ್ ಸ್ಕೂಲ್‌ಗೆ 50 ಸಾವಿರ ರೂ. (ದ್ವಿತೀಯ) ನಗದು ಬಹುಮಾನ, ಮೈಸೂರಿನ ಹರಿ ವಿದ್ಯಾಲಯಕ್ಕೆ (ತೃತೀಯ) 25 ಸಾವಿರ ರೂ. ನಗದು ಬಹುಮಾನ ವಿತರಿಸಿದರು.

ಜಿಲ್ಲಾ ಮಟ್ಟದ ಸ್ಪರ್ಧಾಕೂಟದಲ್ಲಿ ಭಾಗವಹಿಸಿದ್ದ ಪಥಸಂಚಲನ, ಸ್ಕೂಲ್ ಬ್ಯಾಂಡ್, ದೇಸಿ ಕ್ರೀಡೆಗಳಾದ ಲಗೋರಿ, ಹಗ್ಗ ಜಗ್ಗಾಟ ಸ್ಪರ್ಧೆಗಳಲ್ಲಿ ಭಾಗವಹಿಸಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು.

ಕ್ರೀಡಾಸ್ಪರ್ಧೆಯಲ್ಲಿ ಭಾಗವಹಿಸಿದ್ದ 1200 ಮಕ್ಕಳಿಗೂ ರಾಜ್ ಪುರೋಹಿತ್ ಸಮಾಜದ ವತಿಯಿಂದ ಊಟದ ವ್ಯವಸ್ಥೆ ಕಲ್ಪಿಸಲಾಗಿತ್ತು. ಕಾರ್ಯಕ್ರಮದಲ್ಲಿ ಕ್ರೀಡಾ ಭಾರತಿಯ ದಕ್ಷಿಣ ಭಾರತ ಸಂಯೋಜಕ ಚಂದ್ರಶೇಖರ್ ಜಾಗಿರ್ದಾರ್, ನವದೆಹಲಿಯ ಎನ್‌ಸಿಸಿ ಆಲ್ ಇಂಡಿಯಾ ರಾಜ್‌ಪಥ್ ಪರೇಡ್ ಕಮಾಂಡರ್ ಪ್ರಮೀಳಾ ಕುಂವರ್, ವಿದ್ಯಾವಿಕಾಸ ಶಿಕ್ಷಣ ಸಂಸ್ಥೆಗಳ ಕಾರ್ಯದರ್ಶಿ ಕವೀಶ್‌ಗೌಡ, ರಾಷ್ಟ್ರೀಯ ಈಜುಪಟು ರಾಮಚಂದ್ರೇಗೌಡ, ಮೈಸೂರು ವಿವಿ ಕುಲಸಚಿವೆ ಶೈಲಜಾ, ಕ್ರೀಡಾ ಭಾರತಿ ದಕ್ಷಿಣ ವಿಭಾಗದ ಕಾರ್ಯದರ್ಶಿ ಮಹೇಂದ್ರ ಪ್ರಸಾದ್, ಜಿಲ್ಲಾಧ್ಯಕ್ಷ ಅಮೃತ ಪುರೋಹಿತ್, ನಗರಾಧ್ಯಕ್ಷ ಸುಬ್ರಹ್ಮಣ್ಯ ಇನ್ನಿತರರು ಉಪಸ್ಥಿತರಿದ್ದರು.




ಬಿ.ವಿ.ಕಾರಂತ ರಂಗಚಾವಡಿ ರಸಘಳಿಗೆಗಳಲ್ಲಿ ಕಿರಗಸೂರು ರಾಜಪ್ಪ ಮತ್ತು ತಂಡದಿಂದ ರಂಗಗೀತೆಗಳ ಗಾಯನ ನಡೆಯಿತು.



ಬಹುರೂಪಿ ರಾಷ್ಟ್ರೀಯ ರಂಗೋತ್ಸವ ಕಾರ್ಯಕ್ರಮ ವೀಕ್ಷಿಸಿದ ಎಸ್‌ಡಿಎಂ ಕಾಲೇಜಿನ ವಿದ್ಯಾರ್ಥಿನಿಯರು

'ಟಿಪ್ಪು ನಿಜಕನಸುಗಳು' ಕೃತಿಗೆ ಡಿಮ್ಯಾಂಡ್



ಮೈಸೂರು, ಡಿ.12(ಎಸ್‌ಪಿಎನ್)– ಅಯೋಧ್ಯಾ ಪಬ್ಲಿಕೇಶನ್ ಹೊರತಂದಿರುವ, ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ರಚಿತ 'ಟಿಪ್ಪು ನಿಜಕನಸುಗಳು' ನಾಟಕ ಕೃತಿ ಬಹುರೂಪಿ ಆರಂಭವಾದ ಮೂರೇ ದಿನದಲ್ಲಿ 170ಕ್ಕೂ ಹೆಚ್ಚು ಕೃತಿಗಳು ಮಾರಾಟವಾಗಿವೆ.

ಬಹುರೂಪಿ ರಂಗೋತ್ಸವದ ಕರಕುಶಲ ಮೇಳದ ಮಳಿಗೆಯಲ್ಲಿ ಮಾರಾಟವಾಗಿವೆ ಎಂದು ಅಯೋಧ್ಯಾ ಪಬ್ಲಿಕೇಶನ್ ಪ್ರತಿನಿಧಿ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.

ಈ ಕೃತಿ ಬಿಡುಗಡೆಗೊಂಡ ನಂತರ 4 ನೇ ಮುದ್ರಣ ಕಂಡಿದ್ದು, ಗ್ರಾಹಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಅಲ್ಲದೆ, ರಂಗಾಯಣದಲ್ಲಿ ಈ ಕೃತಿಯ ನಾಟಕ ಪ್ರದರ್ಶನ ವಾಗುತ್ತಿರುವುದರಿಂದ ಬೇಡಿಕೆ ಹೆಚ್ಚಾಗಿದೆ ಎಂದರು.

ರಾಜ್ಯದಲ್ಲಿ ಮೊದಲ ಝೀಕಾ ವೈರಲ್ ಸೋಂಕು ಪತ್ತೆ

ಬೆಂಗಳೂರು: ರಾಜ್ಯದಲ್ಲಿ ಮೊದಲ ಝೀಕಾ ವೈರಲ್ ಸೋಂಕು ವರದಿಯಾಗಿದೆ ಎಂದು ಆರೋಗ್ಯ ಸಚಿವ ಡಾ. ಕೆ ಸುಧಾಕರ್ ತಿಳಿಸಿದ್ದಾರೆ.

ಬೆಂಗಳೂರಿನ ಆರೋಗ್ಯಸೌಧದಲ್ಲಿ ಮಾತನಾಡಿದ ಅವರು, ರಾಯಚೂರು ಜಿಲ್ಲೆಯ ಐದು ವರ್ಷದ ಬಾಲಕಿಗೆ ಸೋಂಕು ದೃಢಪಟ್ಟಿದೆ. ಪುಣೆ ವೈರಾಲಜಿ ಲ್ಯಾಬ್‌ನಿಂದ ಪಾಸಿಟಿವ್ ರಿಪೋರ್ಟ್ ಬಂದಿದೆ. ಝೀಕಾ ವೈರಸ್ ಸೋಂಕಿನ ಬಾಲಕಿ ಮೇಲೆ ತೀವ್ರ ನಿಗಾ ವಹಿಸಿದ್ದೇವೆ. ಇನ್ನು ಝೀಕಾ ಸೋಂಕು ಪತ್ತೆಯಾದ ಬಾಲಕಿ ಟ್ರಾವೆಲ್ ಹಿಸ್ಟರಿ ಈವರೆಗೂ ಲಭ್ಯವಾಗಿಲ್ಲ ಎಂದರು.



ಬಾಲಕಿ ಕಳೆದ 15 ದಿನಗಳಿಂದ ಜ್ವರ, ವಾಂತಿ, ಭೇದಿಯಿಂದ ಬಳಲುತ್ತಿದ್ದಳು. ಈ ಹಿನ್ನೆಲೆಯಲ್ಲಿ ನವೆಂಬರ್ 13ರಂದು ಜ್ವರ ಕಾಣಿಸಿಕೊಂಡಿತ್ತು ಮೊದಲು ಸಿಂಧನೂರು ತಾಲೂಕು ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗಿತ್ತು. ಬಳಿಕ ಡೆಂಘೀ ಜ್ವರ ದೃಢಪಟ್ಟ ಹಿನ್ನೆಲೆ ವಿಜಯನಗರದ ವಿಮ್ಸ್ ಆಸ್ಪತ್ರೆಗೆ ರವಾನಿಸಲಾಯಿತು. ಅಲ್ಲಿ ವೈದ್ಯರು ಬಾಲಕಿಯ ಸ್ಯಾಂಪಲ್ ಸಂಗ್ರಹಿಸಿ ಲ್ಯಾಬ್‌ಗೆ ಕಳುಹಿಸಿದ್ದು ಡಿ. 9ರಂದು ಪಾಸಿಟಿವ್ ಬಂದಿತ್ತು ಎಂದರು. ಇನ್ನು ಸೋಂಕು ಕಾಣಿಸಿಕೊಂಡಿರುವುದರಿಂದ ರಾಯಚೂರು ಹಾಗೂ ನೆರೆಯ ಜಿಲ್ಲೆಗಳಲ್ಲಿ ಕಟ್ಟೆಚ್ಚರ ವಹಿಸುವಂತೆ ಸೂಚನೆ ನೀಡಲಾಗಿದೆ. ಝೀಕಾ ವೈರಸ್ ಸೋಂಕು ಕುರಿತಂತೆ ಯಾರೂ ಆತಂಕಪಡುವ ಅಗತ್ಯವಿಲ್ಲ. ಈ ಬಗ್ಗೆ ಆರೋಗ್ಯ ಇಲಾಖೆ ಸಂಜೆ ಪ್ರತ್ಯೇಕ ಮಾರ್ಗಸೂಚಿ ಬಿಡುಗಡೆ ಮಾಡಲಿದೆ ಎಂದು ಸಚಿವರು ತಿಳಿಸಿದ್ದಾರೆ.

ಕನ್ನಡದ ಹಾಸ್ಯ ನಟ ಗಂಡಸಿ ನಾಗರಾಜ್ ವಿಧಿವಶ

ಬೆಂಗಳೂರು: ಸ್ಯಾಂಡಲ್‌ವುಡ್‌ನ ಜನಪ್ರಿಯ ಕಾಸ್ಟ್ಯೂಮ್ ಡಿಸೈನರ್ ಮತ್ತು ಹಾಸ್ಯ ನಟ ಗಂಡಸಿ ನಾಗರಾಜ್ ಇಂದು ನಿಧನರಾಗಿದ್ದಾರೆ. ಅನಾರೋಗ್ಯದಿಂದ ಬಳಲುತ್ತಿದ್ದ ಸ್ಯಾಂಡಲ್‌ವುಡ್ ಖ್ಯಾತ ಹಾಸ್ಯ ನಟ ಗಂಡಸಿ ನಾಗರಾಜ್ ಅವರು ಬೆಂಗಳೂರಿನಲ್ಲಿ ವಿಧಿವಶರಾಗಿದ್ದಾರೆ.



ಅವರಿಗೆ 65 ವರ್ಷ ವಯಸ್ಸಾಗಿತ್ತು. ಗಂಡಸಿ ನಾಗರಾಜ್ ಕನ್ನಡದ 1,000ಕ್ಕೂ ಹೆಚ್ಚು ಚಲನಚಿತ್ರಗಳ ನಟಿಸಿದ್ದಾರೆ. ಗಂಡಸಿ ನಾಗರಾಜ್ ಅವರು ಗುಂಡನ ಮದುವೆ, ರಾಯರ ಮಗ, ಹಬ್ಬ, ಪರ್ವ, ಮಾತಾಡ್ ಮಾತಾಡು ಮಲ್ಲಿಗೆ, ಕೋಟಿಗೊಬ್ಬ–3 ಚಿತ್ರಗಳಲ್ಲಿ ನಟಿಸಿದ್ದರು.

ಹಾಗೆಯೇ, ನವರಸ ನಾಯಕ ಜಗ್ಗೇಶ್ ಅವರ ಆಪ್ತರಾಗಿದ್ದು ವಸ್ತ್ರಾಲಂಕಾರ ಮಾಡುತ್ತಿದ್ದರು. ಅವರು ನಟಿಸಿದ ಪ್ರಮುಖ ಚಿತ್ರಗಳೆಂದರೆ ಸರ್ವರ್ ಸೋಮಣ್ಣ, ಬಂಡ ನನ್ನ ಗಂಡ, ಹಬ್ಬ, ಶ್ರೀ ಮಂಜುನಾಥ ಮತ್ತು ರಾಜಾ ಹುಲಿಯಲ್ಲಿ ಅವರು ಅಭಿನಯಿಸಿದ್ದಾರೆ. ಜೊತೆಗೆ ಕೆ3 ಚಿತ್ರದಲ್ಲಿ ಕೊನೆ ಬಾರಿಗೆ ಅವರು ನಟಿಸಿದ್ದರು. 2020ರಲ್ಲಿಯೇ ತಮ್ಮ ಎರಡೂ ಕಿಡ್ನಿಯನ್ನು ಕಳೆದುಕೊಂಡು ಅನಾರೋಗ್ಯಕ್ಕೆ ತುತ್ತಾಗಿದ್ದ ಗಂಡಸಿ ನಾಗರಾಜ್, ಇತ್ತೀಚಿನ ದಿನಗಳಲ್ಲಿ ಹಾಸಿಗೆ ಹಿಡಿದಿದ್ದರು.

ಅಪರಿಚಿತನ ಶವ ಪತ್ತೆ

ಮೈಸೂರು, ಡಿ.12– ಮೈಸೂರಿನ ಬೋಗಾದಿ 2ನೇ ಹಂತ ಅಮೃತಾನಂದಮಯಿ ಕಾಲೇಜು ಬಸ್ ಸ್ಟಾಪ್ ಬಳಿ ಸುಮಾರು 60 ವರ್ಷದ ಅಪರಿಚಿತ ನಿನ್ನೆ(ಡಿ.11) ಮೃತಪಟ್ಟಿದ್ದಾರೆ. ಇಲ್ಲಿನ ಟೀ ಅಂಗಡಿಯ ಮಾಲೀಕ ಮಾಹಿತಿ ನೀಡಿದ ಬಳಿಕ ಸ್ಥಳಕ್ಕೆ ಧಾವಿಸಿದ ಪೊಲೀಸರು, ಮೃತದೇಹವನ್ನು ಶವಾಗಾರಕ್ಕೆ ಸ್ಥಳಾಂತರಿಸಿದ್ದಾರೆ. ಮೃತ ವ್ಯಕ್ತಿ ಸುಮಾರು 5.6 ಅಡಿ ಎತ್ತರವಿದ್ದು, ಎಡ ಮುಂಗೈ ಮತ್ತು ಮುಂಗಾಲಿನಲ್ಲಿ ಹಳೆ ಗಾಯದ ಗುರುತುಗಳಿವೆ. ಶರ್ಟ್ ಕಾಲರ್‌ನಲ್ಲಿ TWINKEL, ARSHNAKUNTE, M.NAGARA ಎಂದು ಬರೆದಿದೆ. ಈ ಸಂಬಂಧ ಸರಸ್ವತಿಪುರಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಮೃತರ ವಾರಸುದಾರರಿದ್ದಲ್ಲಿ ಪೊಲೀಸ್ ಕಂಟ್ರೋಲ್ ರೂಂ(0821–2418339) ಅಥವಾ ಠಾಣೆ(2418323) ಸಂಪರ್ಕಿಸುವಂತೆ ಪೊಲೀಸರು ತಿಳಿಸಿದ್ದಾರೆ.

ಕಾಬೂಲ್‌ನ ಚೀನಾದ ಅತಿಥಿ ಗೃಹದ ಬಳಿ ಭಾರೀ ಸ್ಫೋಟ, ಗುಂಡಿನ ದಾಳಿ

ಕಾಬೂಲ್: ಅಫ್ಘಾನಿಸ್ತಾನದ ರಾಜಧಾನಿ ಕಾಬೂಲ್‌ನಲ್ಲಿರುವ ಚೀನಾದ ಅತಿಥಿಗೃಹದ ಬಳಿ ದೊಡ್ಡ ಸ್ಫೋಟ ಮತ್ತು ಗುಂಡಿನ ದಾಳಿ ನಡೆದಿದ್ದು ಆಫ್ಘಾನ್ ಪಡೆ ಕಟ್ಟಡವನ್ನು ಸುತ್ತುವರೆದಿದೆ. ಕಳೆದ ವರ್ಷ ಆಗಸ್ಟ್‌ನಲ್ಲಿ ಅಧಿಕಾರಕ್ಕೆ ಬಂದ ನಂತರ ಅಫ್ಘಾನಿಸ್ತಾನದಲ್ಲಿ ಭದ್ರತಾ ಪರಿಸ್ಥಿತಿ ಸುಧಾರಿಸಿದೆ ಎಂದು ತಾಲಿಬಾನ್ ಹೇಳಿಕೊಂಡರೂ, ಅಲ್ಲಿ ಅನೇಕ ಸ್ಫೋಟಗಳು ಮತ್ತು ದಾಳಿಗಳು ನಡೆಯುತ್ತಲೇ ಇವೆ. ಈ ಹಲವು ದಾಳಿಗಳ ಹೊಣೆಯನ್ನು ಇಸ್ಲಾಮಿಕ್ ಸ್ಟೇಟ್ ಹೊತ್ತುಕೊಂಡಿದೆ.

ಇನ್ನು ಸ್ಫೋಟ ಸಂಬಂಧ ಪ್ರತ್ಯಕ್ಷದರ್ಶಿಯೊಬ್ಬರು ಮಾಹಿತಿ ನೀಡಿದ್ದು ಅತಿಥಿ ಗೃಹದ ಬಳಿ ಭಾರೀ ಸ್ಫೋಟ ಸಂಭವಿಸಿದ್ದು ನಂತರ ಅನೇಕ ಗುಂಡಿನ ದಾಳಿ ನಡೆದವು ಎಂದು ಹೇಳಿರುವುದಾಗಿ ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ.

ಸ್ಫೋಟದ ಬಗ್ಗೆ ಪ್ರತಿಕ್ರಿಯಿಸಲು ಭದ್ರತಾ ಅಧಿಕಾರಿಗಳು ನಿರಾಕರಿಸಿದ್ದಾರೆ. ಕಾಬೂಲ್‌ನ ಪ್ರಮುಖ ವಾಣಿಜ್ಯ ಪ್ರದೇಶಗಳಲ್ಲಿ ಒಂದಾದ ಶಹರ್–ಎ–ನಾವ್‌ನಲ್ಲಿ ಸ್ಫೋಟ ಸಂಭವಿಸಿದೆ. ತಾಲಿಬಾನ್ ಅಧಿಕಾರಕ್ಕೆ ಬಂದ ನಂತರ ಚೀನಾದ ಅನೇಕ ಉದ್ಯಮಿಗಳು ಅಫ್ಘಾನಿಸ್ತಾನಕ್ಕೆ ಬಂದು ಹೋಗಲಾರಂಭಿಸಿದ್ದಾರೆ. ಬೀಜಿಂಗ್ ಅಫ್ಘಾನಿಸ್ತಾನದಲ್ಲಿ ತನ್ನ ರಾಯಭಾರ ಕಚೇರಿಯನ್ನು ಪ್ರಾರಂಭಿಸಿದೆ. ಆದರೆ ಅಫ್ಘಾನಿಸ್ತಾನದಲ್ಲಿ ತಾಲಿಬಾನ್ ಆಡಳಿತವನ್ನು ಚೀನಾ ಅಧಿಕೃತವಾಗಿ ಗುರುತಿಸುವುದಿಲ್ಲ.

ಹಾಸ್ಯ, ಅಹಂಕಾರದೊಂದಿಗೆ ಗಂಭೀರ ಚಿಂತನೆಗೂ ಒರೆಹಚ್ಚುವ

ಬಹುರೂಪಿಯ ಬಹು ಅಪರೂಪದ ನಾಟಕಗಳು



ಭೂಮಿಗೀತ ವೇದಿಕೆಯಲ್ಲಿ ಮಣಿಪುರಿ 'ಇಮಾ ನಂಗಿ ನತಂಬಾಕ್ತ' ನಾಟಕ

ಮೈಸೂರು, ಡಿ.12(ಎಂಕೆ)– 'ಗೌಡ್ರ ಗದ್ಲ'ದ ಮಸ್ತ್ ಮನರಂಜನೆಯಲ್ಲಿ ಮಿಂದೆದ್ದ ಕಲಾಭಿಮಾನಿಗಳಿಗೆ ವಿದ್ಯಾರ್ಥಿಯೊರ್ವನ ಬದುಕಿನ ಚಿತ್ರಣದ ಜೊತೆಗೆ ಸಂಪ್ರದಾಯದ ಹೆಸರಲ್ಲಿ ನಡೆಯುತ್ತಿರುವ ಜಾತಿ ಶೋಷಣೆ ಕುರಿತು ಅರಿವು ಮೂಡಿಸಲಾಯಿತು.

ಮೈಸೂರು ರಂಗಾಯಣದಲ್ಲಿ ನಡೆಯುತ್ತಿರುವ 'ಬಹುರೂಪಿ ರಾಷ್ಟ್ರೀಯ ರಂಗೋತ್ಸವ'ದಲ್ಲಿ ಸೋಮವಾರ ಪೌರಾಣಿಕ ಹಾಗೂ ಆಧುನಿಕ ಸಂಸ್ಕೃತಿಯನ್ನೊಳಗೊಂಡ ನಾಟಕಗಳು ಪ್ರದರ್ಶನಗೊಂಡವು. ಕಲಾಮಂದಿರದಲ್ಲಿ 'ಗೌಡ್ರ ಗದ್ಲ'(ಕನ್ನಡ), ಸಂಪತ್‌ರಂಗಮಂದಿರ (ಕಿರುರಂಗಮಂದಿರ)ದಲ್ಲಿ 'ಕಾಪ'(ತುಳು) ಹಾಗೂ ಭೂಮಿಗೀತ ವೇದಿಕೆಯಲ್ಲಿ 'ಇಮಾ ನಂಗಿ ನತಂಬಾಕ್ತ'(ಮಣಿಪುರಿ) ನಾಟಕಗಳು ನೋಡುಗರಿಗೆ ವಿಶೇಷ ಅನುಭವ ನೀಡಿದವು.

ಕಲಾಮಂದಿರ: ಕನ್ನಡ ಚಿತ್ರರಂಗದ ಖ್ಯಾತ ಖಳನಟ ಸುಧೀರ್ ಪತ್ನಿ ಹಾಗೂ ರಂಗಕರ್ಮಿ ಮಾಲತಿ ಸುಧೀರ್ ನಿರ್ದೇಶನದಲ್ಲಿ ಹಾಸ್ಯಭರಿತ, ಸಾಮಾಜಿಕ ಕಳಕಳಿಯುಳ್ಳ 'ಗೌಡ್ರ ಗದ್ಲ' ನಾಟಕ ಕಲಾಮಂದಿರದಲ್ಲಿ ಪ್ರದರ್ಶನಗೊಂಡಿತು.

ಕರ್ನಾಟಕ ಕಲಾ ವೈಭವ ಸಂಘದ ಕಲಾವಿದರು, ಇಬ್ಬರು ಗೌಡರ ನಡುವಿನ ವ್ಯತ್ಯಾಸವನ್ನು ಪ್ರತಿಬಿಂಬಿಸುತ್ತಾ ದುರ್ಮಾರ್ಗಕ್ಕಿಂತ ಸನ್ಮಾರ್ಗದಲ್ಲಿ ಸಾಗುವುದೇ ಸದಾ ಒಳಿತನ್ನು ನೀಡುತ್ತದೆ. ದುರಹಂಕಾರದಿಂದ ಏನನ್ನೂ ಸಾಧಿಸಲಾಗದು ಎಂಬುದನ್ನು ಹಾಸ್ಯಭರಿತ ಸಂಭಾಷಣೆ, ಸಿನಿಮಾ ಹಾಡುಗಳ ಮಿಶ್ರಣದ ಜೊತೆಗೆ ಪೌರಾಣಿಕ ನಾಟಕ ಶೈಲಿಯಲ್ಲಿ ಪ್ರಸ್ತುತಪಡಿಸಲಾಯಿತು.

ಸಂಪತ್‌ರಂಗಮಂದಿರ(ಕಿರುರಂಗಮಂದಿರ): ತುಳು ಭಾಷೆಯ ಪ್ರಸಿದ್ಧ ನಾಟಕಗಳಲ್ಲೊಂದಾದ 'ಕಾಪ' ನಾಟಕ ಸಂಪತ್ ರಂಗಮಂದಿರ(ಕಿರುರಂಗಮಂದಿರ)ದಲ್ಲಿ ಪ್ರದರ್ಶನಗೊಂಡಿತು. ದೀವಾಕರ್ ಕಟೀಲ್ ನಿರ್ದೇಶನದಲ್ಲಿ ಉಡುಪಿಯ ಸುಮನಸಾನ ಕೊಡವೂರು ತಂಡದ ಕಲಾವಿದರ ಅಚ್ಚುಕಟ್ಟು ಅಭಿನಯ ಎಲ್ಲರ ಮನಸೆಳೆಯಿತು.

ಸಂಸ್ಕೃತಿ, ಸಂಪ್ರದಾಯದ ಹೆಸರಿನಲ್ಲಿ ಜಾತಿ ಆಚರಣೆ, ಸಮಾಜದಲ್ಲಿ ಒಳ್ಳೆಯವರೆನಿಕೊಂಡವರೇ ನಾಜೂಕಾಗಿ ಜಾತಿ ವ್ಯವಸ್ಥೆ ಮುಂದುವರೆಸುವ ಬಗೆ ಹಾಗೂ ಜಾತಿ ವ್ಯವಸ್ಥೆಗೆ ವಿರೋಧ ವ್ಯಕ್ತವಾದಾಗಲೆಲ್ಲಾ ಹೇಗೆಲ್ಲಾ ಮಟ್ಟಹಾಕುತ್ತಾರೆ ಎಂಬುದನ್ನು 'ಕಾಪ' ನಾಟಕ ಎಳೆಎಳೆಯಾಗಿ ಬಿಚ್ಚಿಟ್ಟಿತು.

ಭೂಮಿಗೀತ: ಪರಾರಿಯಾಗಿದ್ದ ತನ್ನ ತಂದೆಯ ಗುರುತುಗಳನ್ನು ಪತ್ತೆಹಚ್ಚಲು ಬಯಸುವ ವಿದ್ಯಾರ್ಥಿ, ತಂದೆ ಓದಿದ ಪುಸ್ತಕಗಳನ್ನು ಅಧ್ಯಯನ ನಡೆಸುವುದು. ತರಗತಿಯಲ್ಲಿ ಎಲ್ಲರಿಗಿಂತ ಮುಂದಿದ್ದ ಆತ, ಕೊಲೆಗಾರನಾಗಿ ಕಡೆಗೆ ತನ್ನನ್ನು ತಾನು ಪೊರಕೆಯಾಗಿ ಪರಿವರ್ತಿಸಿಕೊಳ್ಳುವ ವಿಶಿಷ್ಟ ಕತೆಯುಳ್ಳ 'ಇಮಾ ನಂಗಿ ಸತಂಬಾಕ್ತೆ ಮಣಿಪುರಿ ನಾಟಕ ಭೂಮಿಗೀತ ವೇದಿಕೆಯಲ್ಲಿ ಪ್ರದರ್ಶನಗೊಂಡಿತು.

ನೋಡುಗರ ಹೃದಯಕ್ಕೆ ತಾಕುವಂತಹ ಸಂಗೀತ ಸಂಯೋಜನೆಯಿಂದ ಕೂಡಿದ್ದ ನಾಟಕವನ್ನು ಹೈಸ್ನಾಂ ತೋಂಬ ನಿರ್ದೇಶನ ಮಾಡಿದ್ದು, ಮಣಿಪುರ ಕಲಾಕ್ಷೇತ್ರದ ಕಲಾವಿದರ ಭಾವನಾತ್ಮಕ ಅಭಿನಯ ನೋಡುಗರ ಕುತೂಹಲ ಹೆಚ್ಚಿಸುವಂತಿತ್ತು.

ಸೋಮನ ಕುಣಿತ, ಕರಗ ಕೋಲಾಟದ ಮಿಂಚು...

ರಂಗಾಯಣದ ಬಿ.ವಿ.ಕಾರಂತ ರಂಗ ಚಾವಡಿಯಲ್ಲಿ ಜಾನಪದ ಪ್ರಕಾರಗಳಾದ ಸೋಮನ ಕುಣಿತ ಹಾಗೂ ಕರಗ ಕೋಲಾಟ ಮಿಂಚು ಹರಿಸಿತು. ಚಿಕ್ಕಮಗಳೂರಿನ ರಂಗನಾಥ ಮತ್ತು ತಂಡದವರಿಂದ ಸೋಮನ ಕುಣಿತ ಹಾಗೂ ಉಡುಪಿಯ ಪುನೀತ್ ಮತ್ತು ತಂಡದ ಕಲಾವಿದರಿಂದ ನಡೆದ ಕರಗ ಕೋಲಾಟ ಪ್ರದರ್ಶನ ಅಪಾರ ಮೆಚ್ಚುಗೆಗೆ ಪಾತ್ರವಾಯಿತು.



ಕಲಾಮಂದಿರದಲ್ಲಿ 'ಗೌಡ್ರ ಗದ್ಲ' ನಾಟಕ ಪ್ರದರ್ಶನಗೊಂಡಿತು



ತುಳು ಭಾಷೆಯ 'ಕಾಪ' ನಾಟಕ ದೃಶ್ಯ.

ಮಣ್ಣಿನ ಕಲಾಕೃತಿ ಮಾಡುವುದನ್ನು ನೀವೂ ಕಲಿಯಬೇಕೆ!

ಬಹುರೂಪಿ ರಾಷ್ಟ್ರೀಯ ರಂಗೋತ್ಸವದ ಕರಕುಶಲ ಮೇಳದಲ್ಲಿ ಅವಕಾಶವಿದೆ



ಮೈಸೂರು, ಡಿ.12(ಎಸ್‌ಪಿಎನ್)– ಜೇಡಿ ಮಣ್ಣಿನಲ್ಲಿ ಮಡಿಕೆ, ಕುಡಿಕೆ ಸೇರಿದಂತೆ ಇತರೆ ಅಲಂಕಾರಿಕ ಕಲಾಕೃತಿಗಳನ್ನು ನೀವು, ನಿಮ್ಮ ಮಕ್ಕಳೊಂದಿಗೆ ಕಲಿಯಬೇಕೆಂಬ ಮನದಿಂಗಿತವೇ! ಹಾಗಾದರೆ ಮೈಸೂರು ರಂಗಾಯಣದ ಕರಕುಶಲ ಮೇಳಕ್ಕೆ ಒಮ್ಮೆ ಭೇಟಿ ಕೊಡಿ...

ಹೌದು., ಮೈಸೂರು ರಮಾಬಾಯಿ ನಗರದ ನಿವಾಸಿ ಹಾಗೂ ಕರಕುಶಲ ಕರ್ಮಿ ಭಾಗ್ಯವತಿ ಎಂಬುವವರು ಬಹುರೂಪಿ ರಾಷ್ಟ್ರೀಯ ರಂಗೋತ್ಸವದ ಕರಕುಶಲ ಮೇಳದಲ್ಲಿ ಪಾಲ್ಗೊಂಡು, ಈ ಮೇಳಕ್ಕೆ ಬರುವ ಕಿರಿಯರಿಂದ ಹಿಡಿದು 70 ವರ್ಷದ ಹಿರಿಯರವರೆಗೂ ಮಣ್ಣಿನ ಅಲಂಕಾರಿಕ ಕಲಾಕೃತಿಗಳನ್ನು ಪರಿಚಯಿಸುತ್ತಿದ್ದಾರೆ.

ಅಲ್ಲದೆ, ಮಣ್ಣಿನ ಮಡಿಕೆ, ಕುಡಿಕೆ, ದೀಪ ಹಾಗೂ ಇತರೆ ಅಲಂಕಾರಿಕ ವಸ್ತುಗಳನ್ನು ಒಮ್ಮೆಯಾದರೂ ಬಿಡಿಸಬೇಕೆಂಬ ಆಸೆ ಎಷ್ಟೋ ಮಂದಿಗೆ ಮನದಲ್ಲಿ ಇರುತ್ತದೆ. ಅದು ಬೇರೆ ಬೇರೆ ಕಾರಣಕ್ಕಾಗಿ ಸಾಧ್ಯವಾಗಿರುವುದಿಲ್ಲ. ಸ್ವ–ಇಚ್ಛೆಯಿಂದ ಕಲಿಯಲು ಮುಂದಾಗುವ ನಾಗರಿಕರು, ಒಮ್ಮೆ ಭೇಟಿ ನೀಡಿದರೆ, ನಮ್ಮ ಕಲೆಯನ್ನು ಪರಿಚಯಿಸುತ್ತೇವೆ ಎಂದು ಕರಕುಶಲ ಕರ್ಮಿ ಭಾಗ್ಯವತಿ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಈ ಮೇಳದಲ್ಲಿ ಕಲಿಯುವವರಿಗೆ ಕಲಾಕೃತಿ ಮಾಡುವುದನ್ನು ಸ್ಥಳದಲ್ಲೇ ಹೇಳಿಕೊಟ್ಟು, ಅದರಲ್ಲಿ ಎರಡು ಕಲಾಕೃತಿಗೆ ಬೇಕಾದ ಮಣ್ಣು ಹದ ಮಾಡುವುದರಿಂದ ಹಿಡಿದು, ಕಲಾಕೃತಿ ರಚಿಸುವವರೆಗೂ ಹೇಳಿಕೊಡುತ್ತೇವೆ. ಕಳೆದೆರಡು ವರ್ಷಗಳಿಂದ ಇಂತಹ ಮೇಳದಲ್ಲಿ ಪಾಲ್ಗೊಂಡ ಆಸಕ್ತರಿಗೆ ತರಬೇತಿ ನೀಡುತ್ತಿದ್ದೇವೆ. ಇದನ್ನು ವೃತ್ತಿಗಾಗಿ ಕಲಿಯುವವರಿಗೆ 3 ತಿಂಗಳ ಶಿಬಿರವನ್ನು ರಮಾಬಾಯಿನಗರದಲ್ಲಿ ಆರಂಭಿಸಿದ್ದೇವೆ. ಇದರಲ್ಲಿ ಪಾಲ್ಗೊಂಡು ಪೂರ್ಣ ಪ್ರಮಾಣದಲ್ಲಿ ಕಲಿತುಕೊಳ್ಳಬಹುದು ಎಂದು ಮಾಹಿತಿ ನೀಡಿದರು.

ಈ ಕಲೆ ನಮ್ಮ ಪೂರ್ವಜರಿಂದ ಬಳುವಳಿಯಾಗಿ ಬಂದಿದ್ದು, ಅಲ್ಲದೆ, ಬೆಳಗಾವಿ ಮತ್ತು ರಾಮನಗರ ಜಿಲ್ಲೆಯ ಬಿಡದಿಯಲ್ಲಿ ಕರಕುಶಲ ಕಲಿಕಾ ಕೇಂದ್ರಗಳನ್ನು ರಾಜ್ಯ ಮತ್ತು ಕೇಂದ್ರ ಸರ್ಕಾರದ ಸಹಯೋಗದೊಂದಿಗೆ ಸ್ಥಾಪಿಸಿವೆ ಈ ಕೇಂದ್ರದ ಮೂಲಕ ಆಸಕ್ತರು ಅಥವಾ ಸ್ವಯಂ ಉದ್ಯೋಗದಡಿ ಕಲಿಯುವ ಯುವಕರಿಗೆ ಇಲ್ಲಿ ತರಬೇತಿ ಪಡೆದು, ಪ್ರಮಾಣ ಪತ್ರವನ್ನು ಪಡೆಯಬಹುದು ಎಂದು ಸಲಹೆ ನೀಡಿದರು.

ಕಡಿಮೆ ಸಂಬಳಕ್ಕೆ ಖಾಸಗಿ ಕಾರ್ಖಾನೆಗಳಲ್ಲಿ ದುಡಿಯಲು ಆಸಕ್ತಿ ಇಲ್ಲದವರು, ಇಲ್ಲವೇ ವೃತ್ತಿಯಲ್ಲಿದ್ದುಕೊಂಡೇ ಹವ್ಯಾಸಕ್ಕಾಗಿ ಕಲಿಯುವವರಿದ್ದರೆ, ಅಂತಹವರಿಗೂ ಈ ಕಲಾಕೃತಿ ಮಾಡುವುದನ್ನು ಹೇಳಿಕೊಡಲು ಸಿದ್ಧರಿದ್ದೇವೆ. ಇದಕ್ಕೆ ಕಲಿಕಾರ್ಥಿಗಳ ಆಸಕ್ತಿ ಬಹಳ ಮುಖ್ಯ ಎಂದರು.

ನಿರ್ದೇಶಕರ ಮುತುವರ್ಜಿಗೆ ಮೆಚ್ಚುಗೆ: ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪನವರು ನಮ್ಮ ಕಲೆಯನ್ನು ಮುಂದಿನ ಪೀಳಿಗೆಗೂ ಕಲಿಸುವ ಕುರಿತು ತನ್ನ ಆಸಕ್ತಿ ವ್ಯಕ್ತಪಡಿಸಿದಾಗ ಮರುಕ್ಷಣವೇ ಉಚಿತವಾಗಿ ಮಳಿಗೆ ನೀಡಿ ಪ್ರೋತ್ಸಾಹಿಸಿದ್ದಾರೆ. ನನಗೆ ಕಳೆದೆರಡು ವರ್ಷದಿಂದ ಈ ಕರಕುಶಲ ಮೇಳದಲ್ಲಿ ಸ್ಥಳಾವಕಾಶ ನೀಡಿ, ನಮ್ಮ ಕಲೆ ಪ್ರೋತ್ಸಾಹಿಸಿರುವುದಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು.

ಜಮೀನು ಸರ್ವೆ: ಕೋರ್ಟ್ ಆದೇಶ ಪಾಲನೆಗೆ ವಿಳಂಬ

ಪಾಂಡವಪುರ ತಹಶೀಲ್ದಾರ್‌ಗೆ 3 ಲಕ್ಷ ರೂ. ದಂಡ

ಬೆಂಗಳೂರು: ಜಮೀನು ಸರ್ವೆ ಸಂಬಂಧ ಕೋರ್ಟ್ ಆದೇಶ ಪಾಲನೆಗೆ 8 ವರ್ಷ ವಿಳಂಬಕ್ಕೆ ಕಾರಣರಾದ ಪಾಂಡವಪುರ ತಹಶೀಲ್ದಾರ್‌ಗಳಿಗೆ 3 ಲಕ್ಷ ದಂಡ ವಿಧಿಸಿ ಹೈಕೋರ್ಟ್ ಆದೇಶ ನೀಡಿದೆ. ನ್ಯಾಬಿ.ವೀರಪ್ಪ ನ್ಯಾಕೆಎಸ್.ಹೇಮಲೇಖಾರವರಿದ್ದ ಪೀಠ ಈ ಆದೇಶ ಹೊರಡಿಸಿದೆ. ಅಧಿಕಾರಿಗಳ ವಿಳಂಬ ನೀತಿಗೆ ಹೈಕೋರ್ಟ್ ತೀವ್ರ ಅಸಮಾಧಾನ ಹೊರ ಹಾಕಿದೆ. ಜನ ಕೊನೆಯ ದಾರಿ ಎಂದು ನ್ಯಾಯಾಲಯಕ್ಕೆ ಬರುತ್ತಾರೆ. ಕೋರ್ಟ್ ಆದೇಶ ಪಾಲನೆಯಾಗದಿದ್ದರೆ ಜನ ನ್ಯಾಯಾಲಯದ ಮೇಲಿನ ವಿಶ್ವಾಸ ಕಳೆದುಕೊಳ್ಳುತ್ತಾರೆ ಎಂದು ತಪ್ಪಿತಸ್ಥ ತಹಶೀಲ್ದಾರ್‌ಗಳಿಂದ 3 ಲಕ್ಷ ರೂ. ದಂಡ ವಸೂಲಿಗೆ ಕೋರ್ಟ್ ಆದೇಶ ನೀಡಿದೆ

72 ವರ್ಷದ ರೈತ ಮಹಿಳೆ ಪಾರ್ವತಮ್ಮ ಹೈಕೋರ್ಟ್‌ಗೆ ನ್ಯಾಯಾಂಗ ನಿಂದನೆ ಅರ್ಜಿ ಸಲ್ಲಿಸಿದ್ದರು. ಹೈಕೋರ್ಟ್ 2014ರ ಜುಲೈ ತಿಂಗಳಲ್ಲಿ ತಹಸೀಲ್ದಾರ್‌ಗೆ ಆದೇಶ ನೀಡಿದ್ದರೂ ಮಂಡ್ಯದ ಪಾಂಡವಪುರದ ವಡೇಸಮುದ್ರ ಗ್ರಾಮದ ಸರ್ವೆ ನಂಬರ್123/P4 ನ ಸರ್ವೆ ಹಾಗೂ ಪೋಡಿ ಮಾಡಿ ದುರಸ್ತಿ ಮಾಡಿಕೊಟ್ಟಿಲ್ಲವೆಂದು ಆರೋಪಿಸಿದ್ದರು. ಈ ನ್ಯಾಯಾಂಗ ನಿಂದನೆ ಅರ್ಜಿ ವಿಚಾರಣೆ ವೇಳೆ ಪ್ರಮಾಣ ಪತ್ರ ಸಲ್ಲಿಸಿದ ಪಾಂಡವಪುರದ ಈಗಿನ ತಹಸೀಲ್ದಾರ್ ನಯನಾ ಎಸ್.ಎಲ್., ವಿಳಂಬಕ್ಕೆ ಆಡಳಿತಾತ್ಮಕ ಕಾರಣಗಳನ್ನು ನೀಡಿದ್ದರು. ಆದರೆ ಈಗ ಸರ್ವೆ ಮಾಡಿ ಹೊಸ ನಂಬರ್ ನೀಡಲಾಗಿದೆ, ಕೋರ್ಟ್ ಆದೇಶ ಪಾಲಿಸಲಾಗಿದೆ ಎಂದು ಪ್ರಮಾಣಪತ್ರದಲ್ಲಿ ತಿಳಿಸಿದ್ದರು.

ಆದರೆ 2014ರ ಆದೇಶ ಪಾಲನೆಗೆ 8 ವರ್ಷ ವಿಳಂಬವಾಗಿರುವ ಬಗ್ಗೆ ಹೈಕೋರ್ಟ್ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ. ಜೊತೆಗೆ ಸರ್ಕಾರ ಹೈಕೋರ್ಟ್ ಆದೇಶ ಪಾಲನೆಗೆ ವಿಳಂಬ ಮಾಡದಂತೆ 2022ರ ಜನವರಿ 31ರಂದು ಸುತ್ತೋಲೆ ಹೊರಡಿಸಿದ್ದರೂ ಸಮರ್ಪಕವಾಗಿ ಪಾಲಿಸದ ಅಧಿಕಾರಿಗಳ ಬಗ್ಗೆ ಹೈಕೋರ್ಟ್ ಅತೃಪ್ತಿ ವ್ಯಕ್ತಪಡಿಸಿದೆ. ವಿಳಂಬಕ್ಕೆ ಕಾರಣರಾದ ತಹಶೀಲ್ದಾರ್‌ಗಳಿಂದ 3 ಲಕ್ಷ ರೂ. ದಂಡವನ್ನು ಮಂಡ್ಯದ ಜಿಲ್ಲಾಧಿಕಾರಿ ವಸೂಲು ಮಾಡಬೇಕು. ಅವರ ಸೇವಾ ದಾಖಲೆಯಲ್ಲೂ ಇದನ್ನು ನಮೂದು ಮಾಡಬೇಕು. ವಸೂಲು ಮಾಡಿದ ಹಣವನ್ನು ಅರ್ಜಿದಾರರಾದ ಪಾರ್ವತಮ್ಮನವರಿಗೆ ನೀಡಬೇಕೆಂದು ಹೈಕೋರ್ಟ್ ಸೂಚಿಸಿದೆ.

ಕಾವೇರಿ ನದಿ ಹೊಂಡದಲ್ಲಿ ಯುವಕನ ಶವ ಪತ್ತೆ; ಕೊಲೆ ಶಂಕೆ

ಮೈಸೂರು, ಡಿ.12– ತಿ.ನರಸೀಪುರ ತಾಲೂಕು ರಂಗನಾಥಪುರ ಗ್ರಾಮದ ಕಾವೇರಿ ನದಿ ದಡದ ಹೊಂಡದಲ್ಲಿ ಯುವಕನ ಮೃತದೇಹ ಪತ್ತೆಯಾಗಿದೆ.

ಗ್ರಾಮದ ಶ್ರೀ ಬ್ರಹ್ಮೇಶ್ವರ ದೇವಾಲಯ ಸಮೀಪ ನದಿ ಪಕ್ಕದ ನೀರಿನ ಹೊಂಡದಲ್ಲಿ ಡಿ.10ರಂದು ಪತ್ತೆಯಾಗಿರುವ 25–30 ವರ್ಷದ ಯುವಕನ ಮೃತದೇಹದಲ್ಲಿ ಗಾಯದ ಗುರುತುಗಳಿವೆ. ದುಷ್ಕರ್ಮಿಗಳು ಮಾರಕಾಸ್ತ್ರಗಳಿಂದ ತಲೆಯ ಹಿಂಭಾಗಕ್ಕೆ ಹೊಡೆದು ಕೊಲೆ ಮಾಡಿದ ನಂತರ ಮೃತದೇಹವನ್ನು ಹೊಂಡಕ್ಕೆ ಬಿಸಾಡಿ ಹೋಗಿರಬಹುದು ಎಂದು ಪೊಲೀಸರು ಸಂಶಯ ವ್ಯಕ್ತಪಡಿಸಿದ್ದಾರೆ. ಮೃತ ಯುವಕ ಸುಮಾರು 5.7 ಅಡಿ ಎತ್ತರವಿದ್ದು, ಸಾಧಾರಣ ಮೈಕಟ್ಟಿನವನಾಗಿದ್ದಾನೆ. ಈ ಸಂಬಂಧ ಬನ್ನೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಮೃತನ ವಾರಸುದಾರರಿದ್ದಲ್ಲಿ ದೂ.ಸಂ.08227–275632, 0821–226249 ಸಂಪರ್ಕಿಸುವಂತೆ ಠಾಣೆಯ ಇನ್ಸ್‌ಪೆಕ್ಟರ್ ಕೋರಿದ್ದಾರೆ.

ಅರುಣಾಚಲಪ್ರದೇಶದ ಎಲ್‌ಎಸಿಯಲ್ಲಿ ಮತ್ತೆ ಭಾರತ–ಚೀನಾ ಸೈನಿಕರ ನಡುವೆ ಸಂಘರ್ಷ

ಹಲವು ಯೋಧರಿಗೆ ಗಾಯ



ನವದೆಹಲಿ: ಇಂಡೋ–ಚೀನಾ ಗಡಿಯಲ್ಲಿ ಮತ್ತೆ ಸಂಘರ್ಷ ಏರ್ಪಟ್ಟಿದ್ದು, ಉಭಯ ದೇಶಗಳ ನಡುವಿನ ಸೈನಿಕರು ಸಂಘರ್ಷಕ್ಕಿಳಿದ ಪರಿಣಾಮ ಉಭಯ ದೇಶಗಳ ಹಲವು ಯೋಧರು ಗಾಯಗೊಂಡಿದ್ದಾರೆ ಎಂದು ತಿಳಿದುಬಂದಿದೆ.

ಸೇನಾ ಮೂಲಗಳ ಪ್ರಕಾರ ಅರುಣಾಚಲ ಪ್ರದೇಶದ ತವಾಂಗ್ ಸೆಕ್ಟರ್‌ನ ವಾಸ್ತವ ಗಡಿ ರೇಖೆ ಬಳಿ ಬಂದಿದ್ದ ಚೀನಾದ ಸೈನಿಕರಿಗೆ ಭಾರತೀಯ ಯೋಧರು ಪ್ರತಿರೋಧ ತೋರಿದ್ದು, ಈ ವೇಳೆ ಎರಡೂ ಕಡೆಯವರ ನಡುವೆ ಸಂಘರ್ಷ ಏರ್ಪಟ್ಟು ಪರಸ್ಪರ ಕೈಕೈ ಮಿಲಾಯಿಸಿದ್ದಾರೆ ಎನ್ನಲಾಗಿದೆ. ಡಿಸೆಂಬರ್ 9ರಂದು ಈ ಕಾದಾಟ ನಡೆದಿದ್ದು, ತಡವಾಗಿ ಈ ಘಟನೆ ಬೆಳಕಿಗೆ ಬಂದಿದೆ. ಘರ್ಷಣೆಯಲ್ಲಿ ಉಭಯ ದೇಶಗಳ ಹಲವು ಯೋಧರು ಗಾಯಗೊಂಡಿದ್ದಾರೆ ಎಂದು ಹೇಳಲಾಗಿದೆ. ಘರ್ಷಣೆಯ ನಂತರ ಭಾರತ ಮತ್ತು ಚೀನಾದ ಪೀಪಲ್ ಲಿಬರೇಷನ್ ಆರ್ಮಿಯ ಸೈನಿಕರೂ ಸ್ಥಳದಿಂದ ನಿರ್ಗಮಿಸಿದ್ದಾರೆ ಎಂದು ಸುದ್ದಿ ಸಂಸ್ಥೆ ಸೋಮವಾರ ವರದಿ ಮಾಡಿದೆ.

ಘಟನೆಯ ಹಿನ್ನೆಲೆಯಲ್ಲಿ ತವಾಂಗ್‌ನ ಭಾರತದ ಸೇನಾ ಕಮಾಂಡರ್ ಚೀನಾದ ಸೇನಾ ಅಧಿಕಾರಿಗಳೊಂದಿಗೆ ಸಭೆ ನಡೆಸಿದ್ದು, ಸಂಘರ್ಷ ನಡೆದ ಪ್ರದೇಶದಲ್ಲಿ ಶಾಂತಿ ಕಾಪಾಡುವ ನಿಟ್ಟಿನಲ್ಲಿ ರಚನಾತ್ಮಕ ಕಾರ್ಯವಿಧಾನಗಳನ್ನು ಅನುಸರಿಸಿದ್ದಾರೆ ವರದಿಯಲ್ಲಿ ಉಲ್ಲೇಖಿಸಲಾಗಿದೆ. ಅರುಣಾಚಲ ಪ್ರದೇಶದ ತವಾಂಗ್ ಸೆಕ್ಟರ್‌ನ ವಾಸ್ತವ ಗಡಿ ರೇಖೆಯುದ್ದಕ್ಕೂ ಕೆಲವು ವಿವಾದಿತ ಪ್ರದೇಶಗಳಿವೆ. ಎರಡೂ ಕಡೆಯವರು ತಮ್ಮ ನಿಯಂತ್ರಣದಲ್ಲಿರುವ ಪ್ರದೇಶಗಳ ಅಂಚಿನ ವರೆಗೆ ಗಸ್ತು ತಿರುಗುತ್ತಾರೆ. 2006ರಿಂದ ಈ ಪ್ರವೃತ್ತಿ ನಡೆಯುತ್ತಲೇ ಬಂದಿದೆ ಎಂದು ಸೇನಾ ಮೂಲಗಳು ತಿಳಿಸಿವೆ.



ಮೈಸೂರು–ಬೆಂಗಳೂರು ರಸ್ತೆಯ ನಾಗುವನಹಳ್ಳಿ ಗೇಟ್ ಸಮೀಪದಲ್ಲಿರುವ ಸೆಂಟ್ ಫ್ರಾನ್ಸಿಸ್ ಶಾಲೆಯ ವಾರ್ಷಿಕೋತ್ಸವ ಸಮಾರಂಭ ನಡೆಯಿತು. ಎನ್‌ಸಿಸಿ ಕಮಾಂಡಿಂಗ್ ಆಫೀಸರ್ ಮನೀಶ್ ಪ್ರಸಾದ್, ಶ್ರೀರಂಗಪಟ್ಟಣ ಡಿವೈಎಸ್‌ಪಿ ಎಸ್.ಎನ್.ಸಂದೇಶ್‌ಕುಮಾರ್, ಬಿಇಓ ಅನಂತರಾಜು, ಪಿ.ಎಂ.ಥಾಮಸ್, ಪ್ರಾಂಶುಪಾಲ ಪಿ.ಸಿ.ಥಾಮಸ್, ಪೋಷಕರು, ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಮಹಿಳೆಯರ ಸ್ವಾವಲಂಬಿ ಜೀವನಕ್ಕೆ ಪ್ರಧಾನಮಂತ್ರಿ ಉಚಿತ ಹೊಲಿಗೆ ಯಂತ್ರ ಒತ್ತಾಸೆ

ಮೈಸೂರು, ಡಿ.12(ಎಸ್‌ಬಿಡಿ)– ಮಹಿಳೆಯರ ಸ್ವಾವಲಂಬಿ ಜೀವನಕ್ಕೆ ಪ್ರಧಾನಮಂತ್ರಿ ಉಚಿತ ಹೊಲಿಗೆ ಯಂತ್ರ ಯೋಜನೆ ಒತ್ತಾಸೆಯಾಗಿದೆ ಎಂದು ಚಾಮರಾಜ ಕ್ಷೇತ್ರದ ಶಾಸಕ ಎಲ್.ನಾಗೇಂದ್ರ ಹೇಳಿದರು.



ಮೈಸೂರಿನ ದೇವರಾಜ ಮೊಹಲ್ಲಾ 23ನೇ ವಾರ್ಡ್ ಕಾರ್ಪೊರೇಟರ್ ಎಂ.ಪ್ರಮೀಳಾ ಭರತ್ ಕಚೇರಿ ಬಳಿ, ಹೊಲಿಗೆ ತರಬೇತಿ ಪಡೆದ 24 ಮಹಿಳೆಯರಿಗೆ ನಗರ ಪಾಲಿಕೆಯ ಶೇ.24.10 ಯೋಜನೆ ಅನುದಾನದಿಂದ ಸೋಮವಾರ ಉಚಿತವಾಗಿ ಹೊಲಿಗೆ ಯಂತ್ರ ವಿತರಿಸಿ ಮಾತನಾಡಿದ ಅವರು, ಸ್ವಯಂ ಉದ್ಯೋಗಕ್ಕೆ ಉತ್ತೇಜನ ನೀಡುವ ಸರ್ಕಾರದ ಸೌಲಭ್ಯಗಳನ್ನು ಸದ್ಬಳಕೆ ಮಾಡಿಕೊಳ್ಳುವಂತೆ ಸಲಹೆ ನೀಡಿದರು.

ನಿರುದ್ಯೋಗಿಗಳು ಸ್ವಯಂ ಉದ್ಯೋಗದ ಮೂಲಕ ಬದುಕು ಕಟ್ಟಿಕೊಳ್ಳಲು ಸರ್ಕಾರ ಸಾಕಷ್ಟು ಕಾರ್ಯಕ್ರಮಗಳನ್ನು ರೂಪಿಸಿದೆ. ಕರಕುಶಲ ಇನ್ನಿತರ ವೃತ್ತಿಪರ ಕೌಶಲ್ಯ ಪಡೆದಿರುವ ಯುವಕ–ಯುವತಿಯರಿಗೆ ಸೌಲಭ್ಯಗಳನ್ನು ಒದಗಿಸಿದ್ದು, ಅರ್ಹರು ಸದುಪಯೋಗಪಡಿಸಿಕೊಳ್ಳಬೇಕು. ಹಾಗೆಯೇ ಪ್ರಧಾನಮಂತ್ರಿ ಉಚಿತ ಹೊಲಿಗೆ ಯಂತ್ರ ಯೋಜನೆಯು ದೇಶದ ಮಹಿಳೆಯರ ಆರ್ಥಿಕ ಸ್ವಾವಲಂಬನೆಗೆ ಸಹಕಾರಿಯಾಗಿದೆ. ಈ ಯೋಜನೆಯಡಿ ಪ್ರಸಕ್ತ ವರ್ಷ 20ರಿಂದ 40 ವರ್ಷದ ಹೊಲಿಗೆ ತರಬೇತಿ ಪಡೆದ ಮಹಿಳೆಯರಿಗೆ ಹೊಲಿಗೆ ಯಂತ್ರವನ್ನು ಉಚಿತವಾಗಿ ನೀಡಲಾಗುತ್ತಿದೆ ಎಂದು ತಿಳಿಸಿದರು.

ಪಾಲಿಕೆ ಸದಸ್ಯೆ ಪ್ರಮೀಳಾ ಭರತ್ ಮಾತನಾಡಿ, ಹೊಲಿಗೆ ತರಬೇತಿ ಪಡೆದ 96 ಮಹಿಳೆಯರಲ್ಲಿ ಈಗಾಗಲೇ 72 ಮಹಿಳೆಯರಿಗೆ ಹೊಲಿಗೆ ಯಂತ್ರ ವಿತರಿಸಲಾಗಿದೆ. ಇನ್ನುಳಿದ 24 ಮಹಿಳೆಯರಿಗೆ ಇಂದು ಹೊಲಿಗೆ ಯಂತ್ರ ನೀಡಲಾಗಿದೆ. ಈಗಿನ ಪರಿಸ್ಥಿತಿಯಲ್ಲಿ ಗೃಹಿಣಿಯರೂ ದುಡಿದು ಸಂಪಾದಿಸುವುದು ಅನಿವಾರ್ಯ ಎಂಬಂತಾಗಿದೆ. ಹಾಗೆಯೇ ತಾವೂ ಕೂಡ ಆರ್ಥಿಕವಾಗಿ ಸದೃಢರಾಗ ಬೇಕೆಂಬ ಆಸೆ ಎಲ್ಲಾ ಮಹಿಳೆಯರಿಗೂ ಇದ್ದೇ ಇರುತ್ತದೆ. ಅದರಲ್ಲೂ ಮನೆ ಕೆಲಸದೊಂದಿಗೆ ಬಿಡುವಿನ ವೇಳೆಯಲ್ಲಿ ಮಾಡಬಹುದಾದ ಹೊಲಿಗೆ ಬಗ್ಗೆ ಹೆಚ್ಚು ಆಸಕ್ತಿ ಹೊಂದಿರುತ್ತಾರೆ. ಹಣವಿದ್ದವರು ತಾವೇ ಯಂತ್ರವನ್ನು ಖರೀದಿಸುತ್ತಾರೆ. ಆದರೆ ಚೆನ್ನಾಗಿ ಹೊಲಿಗೆ ಕಲಿತಿರುವ ಅನೇಕ ಮಹಿಳೆಯರು ಹೊಲಿಗೆ ಯಂತ್ರ ಕೊಳ್ಳಲಾಗದ ಅಸಹಾಯಕ ಸ್ಥಿತಿಯಲ್ಲಿದ್ದಾರೆ. ಇಂತಹವರಿಗೆ ಹೊಲಿಗೆ ಯಂತ್ರ ವಿತರಿಸುವ ಮೂಲಕ ಪಾಲಿಕೆ ನೆರವಾಗುತ್ತಿದ್ದು, ಈ ಸದಾವಕಾಶವನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದರು.

ಈ ವೇಳೆ ನಗರ ಪಾಲಿಕೆಯ ಕಂದಾಯಾಧಿಕಾರಿ ಮೋಹನ್, ಮಂಜುಳಾ, ಚರಣ್, ಬಿಜೆಪಿ ಚಾಮರಾಜ ಯುವ ಮೋರ್ಚಾ ಅಧ್ಯಕ್ಷ ಸಚಿನ್, ಗೋಪಾಲಕೃಷ್ಣ, ಗೋಪಿ, ಪಾಪಣ್ಣ ಚಂದ್ರಕುಮಾರ್, ಲೋಹಿತ್, ಭರತ್ ದೇಸಾಯಿ, ಸ್ವಾಮಿನಾಥ್, ಚೇತನ್, ಸುಕನ್ಯಾ, ಚಂದ್ರಕಲಾ ಸೇರಿದಂತೆ ಪಕ್ಷದ ಮುಖಂಡರು ಹಾಗೂ ಸ್ಥಳೀಯರು ಉಪಸ್ಥಿತರಿದ್ದರು.

ತೆರಿಗೆ ಹಣ ದುರುಪಯೋಗ, ಅಧಿಕಾರಿಗಳ ಭ್ರಷ್ಟಾಚಾರ ಆರೋಪ

ಪುರಸಭಾ ಸದಸ್ಯ ನಾಗರಾಜು ಏಕಾಂಗಿ ಉಪವಾಸ ಸತ್ಯಾಗ್ರಹ

ಹೆಚ್.ಡಿ.ಕೋಟೆ, ಡಿ.12– ಪಟ್ಟಣದ ಪುರಸಭೆಯಲ್ಲಿ ಕಳೆದ 10 ವರ್ಷಗಳಿಂದ ಸರ್ಕಾರದ ತೆರಿಗೆ ಹಣ ದುರುಪಯೋಗವಾಗಿದೆ. ಅಕ್ರಮ ಖಾತೆ ಮೂಲಕ ಅಧಿಕಾರಿಗಳು ಭ್ರಷ್ಟಾಚಾರದಲ್ಲಿ ತೊಡಗಿದ್ದಾರೆ. ಈ ಬಗ್ಗೆ ಪೌರಾಡಳಿತ ಸಚಿವಾಲಯ ಹಾಗೂ ಸಂಬಂಧಿಸಿದ ಅಧಿಕಾರಿಗಳಿಗೆ ದೂರು ನೀಡಿದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ಆರೋಪಿಸಿ ಪುರಸಭಾ ಸದಸ್ಯ ಮಿಲ್ ನಾಗರಾಜು ಉಪವಾಸ ಸತ್ಯಾಗ್ರಹ ಕೈಗೊಂಡಿದ್ದಾರೆ.

ಪಟ್ಟಣದ ಪುರಸಭೆ ಎದುರು ಉಪವಾಸ ಸತ್ಯಾಗ್ರಹ ಕೈಗೊಂಡಿರುವ ಪುರಸಭಾ ಸದಸ್ಯ ನಾಗರಾಜು ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವವರೆಗೂ ಸ್ಥಳದಿಂದ ತೆರಳುವುದಿಲ್ಲ ಎಂದು ಪಟ್ಟು ಹಿಡಿದಿದ್ದು, ಇವರಿಗೆ ಹಲವು ಪ್ರಗತಿಪರ ಸಂಘಟನೆಗಳ ಮುಖಂಡರು ಬೆಂಬಲ ವ್ಯಕ್ತಪಡಿಸಿದ್ದಾರೆ.

ಸದಸ್ಯ ಮಿಲ್ ನಾಗರಾಜು ಮಾತನಾಡಿ, ನಾನು ಪುರಸಭೆ ಸದಸ್ಯನಾಗಿ ಆಯ್ಕೆಯಾದ ಬಳಿಕ ಅಭಿವೃದ್ಧಿ ಕೆಲಸ ಮಾಡಲು ಸಾಧ್ಯವಾಗಿಲ್ಲ. ಕಾರಣ ಅಧಿಕಾರಿಗಳು ನಮಗೆ ಸಹಕಾರ ನೀಡುತ್ತಿಲ್ಲ ಎಂದು ಆರೋಪಿಸಿದರು.



ಸಾಮಾನ್ಯ ಸಭೆಯಲ್ಲಿ ಆಡಳಿತ ಮಂಡಳಿ ತೀರ್ಮಾನಿಸಿದ ಒಂದೇ ಒಂದು ನಿರ್ಣಯವನ್ನು ಅಧಿಕಾರಿಗಳು ಕಾರ್ಯಗತಗೊಳಿಸಲು ಮುಂದಾಗದೆ ಅಕ್ರಮದಲ್ಲಿ ತೊಡಗಿ ಪುರಸಭೆ ಅಭಿವೃದ್ಧಿಗೆ ಮಾರಕವಾಗಿದ್ದಾರೆ ಎಂದು ದೂರಿದರು.

ಪುರಸಭಾ ವ್ಯಾಪ್ತಿಯ ಸರ್ಕಾರಿ ಜಾಗಗಳನ್ನು ಅಕ್ರಮವಾಗಿ ಹಣ ಉಳ್ಳವರಿಗೆ ಖಾತೆ ಮಾಡಿಕೊಟ್ಟಿದ್ದಾರೆ. ಈ ವಿಚಾರವಾಗಿ ಸಂಬಂಧಪಟ್ಟ ಪೌರಾಡಳಿತ ನಿರ್ದೇಶಕರ ಕಚೇರಿಗೆ ದೂರು ನೀಡಿ ತನಿಖೆಗೆ ಒತ್ತಾಯಿಸಿ 9 ತಿಂಗಳು ಕಳೆದರೂ ಯಾವುದೇ ಕ್ರಮ ಕೈಗೊಳ್ಳದೇ ದೂರನ್ನು ಮುಚ್ಚಿಹಾಕುವ ಪ್ರಯತ್ನ ನಡೆದಿದೆ ಎಂದು ದೂರಿದರು.

ರೆವಿನ್ಯೂ ಜಾಗಗಳನ್ನು ಸರ್ಕಾರದ ನಿಯಮ ಉಲ್ಲಂಘಿಸಿ ಖಾತೆ ಹಾಗೂ ಇ–ಸ್ವತ್ತು ಮಾಡಿದ್ದಾರೆ. 2016–17ನೇ ಸಾಲಿನಲ್ಲಿ ಇಲ್ಲಿವರೆಗೂ ವಿತರಣೆಯಾದ ಆಶ್ರಯ ಮನೆಗಳ ಬಿಲ್ ಪಾವತಿ ಮಾಡುವಲ್ಲಿ ಅಧಿಕಾರಿಗಳು ವಿಫಲರಾಗಿದ್ದಾರೆ. ಕಂದಾಯ ವಸೂಲಿಯಲ್ಲಿ ಅವ್ಯವಹಾರ ನಡೆಸಿ ದಾಖಲಾತಿಗಳನ್ನು ಮರೆಮಾಚಿದ್ದಾರೆ. ಸಾಮಾನ್ಯ ಸಭೆಯಲ್ಲಿ ಅಧಿಕಾರಿಗಳ ಅವ್ಯವಹಾರದ ಬಗ್ಗೆ ಶಾಸಕ ಅನಿಲ್ ಚಿಕ್ಕಮಾದು ಅವರು ಠರಾವು ಪುಸ್ತಕದಲ್ಲಿ ನಮೂದಿಸಿದರೂ ಅಧಿಕಾರಿಗಳು ಯಾವುದೇ ಕ್ರಮ ಕೈಗೊಂಡಿಲ್ಲ. ಈ ಹಿಂದೆ ಅಧಿಕಾರ ನಡೆಸಿದ ಅಧ್ಯಕ್ಷರು, ಸ್ಥಾಯಿ ಸಮಿತಿ ಅಧ್ಯಕ್ಷರು, ಮಾಡಿರುವ ಅಭಿವೃದ್ಧಿ ಕೆಲಸಗಳನ್ನು ಅನುಷ್ಠಾನಗೊಳಿಸದೆ ವಿಫಲರಾಗಿದ್ದಾರೆ ಎಂದು ಆರೋಪಿಸಿದ ಅವರು ಕಂದಾಯ ಅಧಿಕಾರಿ ನಿಯೋಜನೆಗೊಂಡು 3 ತಿಂಗಳಾದರೂ ಈಗಿನ ಅಧಿಕಾರಿ ಚಾರ್ಜ್ ಕೊಡದೆ ವಿಳಂಬ ಧೋರಣೆ ಅನುಸರಿಸುತ್ತಿರುವುದು ಅನುಮಾನಕ್ಕೆ ಎಡೆ ಮಾಡಿಕೊಟ್ಟಿದೆ ಎಂದರು.

ಉಪವಾಸ ಸತ್ಯಾಗ್ರಹ ಕೈಗೊಂಡಿದ್ದ ಪುರಸಭಾ ಸದಸ್ಯ ಮಿಲ್ ನಾಗರಾಜ್ ಅವರನ್ನು ಭೇಟಿಯಾದ ಪುರಸಭಾಧ್ಯಕ್ಷೆ ಅನಿತಾ ಹಾಗೂ ಸ್ಥಾಯಿ ಸಮಿತಿ ಅಧ್ಯಕ್ಷ ಐಡಿಯಾ ವೆಂಕಟೇಶ್ ಸತ್ಯಾಗ್ರಹ ಹಿಂಪಡೆಯುವಂತೆ ಮನವೊಲಿಸಲು ಪ್ರಯತ್ನ ಮಾಡಿದರು. ಆದರೆ ಅದಕ್ಕೆ ಜಗ್ಗದ ಮಿಲ್ ನಾಗರಾಜು ಸ್ಥಳಕ್ಕೆ ಜಿಲ್ಲಾಧಿಕಾರಿಗಳು ಬಂದು ತನಿಖೆಗೆ ಆದೇಶಿಸಿದ ನಂತರ ಸತ್ಯಾಗ್ರಹ ಕೈಬಿಡುವುದಾಗಿ ತಿಳಿಸಿ ಸತ್ಯಾಗ್ರಹ ಮುಂದುವರೆಸಿದರು.

ಜ್ಞಾನವಿಕಾಸದಿಂದ ಸ್ವಾಭಿಮಾನದ ಬದುಕು



ಕಂಪಲಾಪುರ, ಡಿ.12– ಸಂಘ ಸಂಸ್ಥೆಗಳ ಮೂಲಕ ಮಹಿಳೆ ಸಮಾಜದ ಶಕ್ತಿಯಾಗಲು ಸಾಧ್ಯ ಎಂದು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿಸಿ ಟ್ರಸ್ಟ್ ಕೊಡಗು ಜಿಲ್ಲಾ ನಿರ್ದೇಶಕಿ ಲೀಲಾವತಿ ತಿಳಿಸಿದರು.

ಗ್ರಾಮದಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಜ್ಞಾನವಿಕಾಸ ಕೇಂದ್ರ ಉದ್ಘಾಟಿಸಿ ಮಾತನಾಡಿದ ಅವರು, ಹೆಣ್ಣು ಸಮಾಜದ ಕಣ್ಣು. ಆಕೆ ಸಂಘಗಳಿಗೆ ಸೇರ್ಪಡೆಯಾಗಿ ಸಾಲ ಸೌಲಭ್ಯಕ್ಕೆ ಮಾತ್ರ ಸೀಮಿತವಾಗಿರಬಾರದು. ಇಂತಹ ಜ್ಞಾನವಿಕಾಸ ಕೇಂದ್ರಗಳ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ತನ್ನ ಬದುಕನ್ನು ರೂಪಿಸಿಕೊಳ್ಳುವುದು ಹೇಗೆ, ಮಕ್ಕಳಿಗೆ ಶಿಕ್ಷಣ, ಪರಿಸರ ಸ್ವಚ್ಛತೆ, ಸರ್ಕಾರದ ಸೌಲಭ್ಯ ಪಡೆಯುವುದು ಹೇಗೆ ಮುಂತಾದ ವಿಚಾರಗಳನ್ನು ತಿಳಿದುಕೊಳ್ಳಬಹುದು.

ಹಿಂದೆ ಪ್ರತಿ ಕ್ಷಣ ಮಹಿಳೆಯರು ಪುರುಷರನ್ನು ಅವಲಂಬಿಸಬೇಕಿತ್ತು. ಸಂಘ ಸಂಸ್ಥೆಗಳು ಬಂದ ಮೇಲೆ ಆರ್ಥಿಕವಾಗಿ ಆಕೆಗೆ ತಿಳುವಳಿಕೆ ಬಂದಿದೆ. ತನ್ನ ಸ್ವಂತ ಬಲದಿಂದಲೇ ಸಂಸಾರದ ಜವಾಬ್ದಾರಿ ಹೊರಲು ಆಕೆ ಶಕ್ತಳಾಗಿದ್ದಾಳೆ ಎಂದರು.

ಮಹಿಳಾ ಒಕ್ಕೂಟದ ಸದಸ್ಯರಿಂದ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲಾಗಿತ್ತು. ಈ ವೇಳೆ ತಾಲೂಕು ಯೋಜನಾಧಿಕಾರಿ ಸುರೇಶ್ ಶೆಟ್ಟಿ, ತಾಲೂಕು ಜ್ಞಾನವಿಕಾಸ ಕೇಂದ್ರದ ಸಮನ್ವಯಾಧಿಕಾರಿ ಶಾರದ, ಗ್ರಾಪಂ ಅಧ್ಯಕ್ಷೆ ಮಮತ, ಮಾಜಿ ಅಧ್ಯಕ್ಷೆ ರಾಣಿ, ಸತ್ಯನಾರಾಯಣ ಪೂಜಾ ಸಮಿತಿ ಅಧ್ಯಕ್ಷ ಕೆ.ಎನ್.ಜಯಣ್ಣ, ಮೇಲ್ವಿಚಾರಕಿ ರವಿಕಲಾಶೆಟ್ಟಿ, ಜ್ಞಾನವಿಕಾಸ ಕೇಂದ್ರದ ಅಧ್ಯಕ್ಷೆ ಆಶಾ, ಸೇವಾ ಪ್ರತಿನಿಧಿ ಆನಂದ್, ಎಸ್‌ಡಿಎಂಸಿ ಅಧ್ಯಕ್ಷ ಸದಾಶಿವ, ಸದಸ್ಯ ಜಯರಾಂ ಮತ್ತಿತರರಿದ್ದರು.



ದಾವಣಗೆರೆ ಜಿಲ್ಲೆ ಹರಿಹರ ತಾಲೂಕಿನ ರಾಜನಹಳ್ಳಿಯಲ್ಲಿ ಫೆ.8 ರಿಂದ 2 ದಿನಗಳ ಕಾಲ ನಡೆಯುವ 5ನೇ ವರ್ಷದ ವಾಲ್ಮೀಕಿ ಜಾತ್ರಾ ಮಹೋತ್ಸವಕ್ಕೆ ಆಹ್ವಾನಿಸಲು ತಲಕಾಡಿಗೆ ಆಗಮಿಸಿದ್ದ ರಾಜನಹಳ್ಳಿ ಗುರುಪೀಠದ ಶ್ರೀಪ್ರಸನ್ನಾನಂದ ಸ್ವಾಮೀಜಿ ಅವರನ್ನು ರಾಜ್ಯ ವಾಲ್ಮೀಕಿ ನಾಯಕ ಸಂಘಗಳ ಒಕ್ಕೂಟದ ಜಿಲ್ಲಾಧ್ಯಕ್ಷ ತಾಯೂರು ಪ್ರಕಾಶ್ ಸನ್ಮಾನಿಸಿದರು. ಈ ವೇಳೆ ಮಹರ್ಷಿ ವಾಲ್ಮೀಕಿ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಯಡದೊರೆ ಮಹೇಶ್ ನಾಯಕ್, ತಲಕಾಡು ಗ್ರಾಪಂ ಸದಸ್ಯ ಸುಂದರ ನಾಯಕ, ಬೂದಹಳ್ಳಿ ಸಿದ್ದರಾಜು, ತಲಕಾಡು ಮಂಜುನಾಯಕ, ಹೆಮ್ಮಿಗೆ ಸೋಮಣ್ಣ, ಹೊನ್ನನಾಯಕ, ಕೃಷ್ಣಮೂರ್ತಿ, ಮಹದೇವನಾಯಕ, ಯಜಮಾನರಾದ ರಾಜನಾಯಕ, ಕಾಡಿ ಮಹದೇವ, ಕುಮಾರ ನಾಯಕ ಮತ್ತಿತರರಿದ್ದರು.

ಹುಲಿ ದಾಳಿ: ರೈತನಿಗೆ ಗಾಯ



ಮಲ್ಲುಂಡಿ, ಡಿ.12– ಹುಲಿ ದಾಳಿಗೆ ರೈತ ಗಾಯಗೊಂಡಿರುವ ಘಟನೆ ಸೋಮವಾರ ಬಳ್ಳೂರುಹುಂಡಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ನಿವಾಸಿ ಸ್ವಾಮಿ ಗಾಯಗೊಂಡವರು. ಇವರು ತಮ್ಮ ಜಮೀನಿನಲ್ಲಿ ದನ ಮೇಯಿಸುತ್ತಿದ್ದ ವೇಳೆ ಹುಲಿ ಏಕಾಏಕಿ ದಾಳಿ ಮಾಡಿದೆ. ಇದನ್ನು ಕಂಡ ಪಕ್ಕದ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ರೈತರು ಕೂಗಾಡಿದ್ದರಿಂದ ಗಾಬರಿಗೊಂಡ ಹುಲಿ ಪರಾರಿಯಾಗಿದೆ. ಘಟನೆಯಲ್ಲಿ ಸ್ವಾಮಿ ಅವರ ತಲೆ ಹಾಗೂ ಕೆನ್ನೆ ಭಾಗಕ್ಕೆ ಗಾಯವಾಗಿದೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಯಡಿಯಾಲ ವಲಯ ಅರಣ್ಯಾಧಿಕಾರಿ ನಾರಾಯಣ ಹಾಗೂ ಸಿಬ್ಬಂದಿ ಪರಿಶೀಲನೆ ನಡೆಸಿ ಗಾಯಾಳುವನ್ನು ಆಸ್ಪತ್ರೆಗೆ ದಾಖಲಿಸಿದ್ದಾರೆ.

ತಾಪಂ ಮಾಜಿ ಅಧ್ಯಕ್ಷ ನಾಗೇಶ್‌ರಾಜ್ ಮಾತನಾಡಿ, ಬಳ್ಳೂರುಹುಂಡಿ ಗ್ರಾಮ ಕಾಡಂಚಿನ ಗ್ರಾಮವಾಗಿದ್ದು, ಕಾಡುಪ್ರಾಣಿಗಳ ಹಾವಳಿ ಹೆಚ್ಚಾಗಿದೆ. ಇದನ್ನು ತಡೆಗಟ್ಟಲು ಸರ್ಕಾರ ಸಂಪೂರ್ಣ ವಿಫಲವಾಗಿದೆ. ಒಂದೆಡೆ ರೈತರು ಬೆಳೆದ ಫಸಲುಗಳನ್ನು ನಾಶ ಮಾಡಿದರೇ, ಮತ್ತೊಂದೆಡೆ ಮನುಷ್ಯರನೇ ಬಲಿ ಪಡೆಯುತ್ತಿವೆ. ಇದರಿಂದ ರೈತರು ಜೀವನ ನಡೆಸಲು ಕಷ್ಟಕರವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ ಅವರು ಕೂಡಲೇ ಅರಣ್ಯಾಧಿಕಾರಿಗಳು ಹುಲಿ ಸೆರೆಗೆ ಕ್ರಮಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಬಂಚಹಳ್ಳಿಹುಂಡಿ ಶಾಲಾಭಿವೃದ್ಧಿಗೆ ಭೂಮಿ ಪೂಜೆ



ನಂಜನಗೂಡು, ಡಿ.12– ತಾಲೂಕಿನ ತಾಂಡವಪುರ ಗ್ರಾಪಂ ವ್ಯಾಪ್ತಿಯ ಬಂಚಹಳ್ಳಿ ಹುಂಡಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಭೂಮಿ ಪೂಜೆ ನೆರವೇರಿಸಿದರು.

ಬಳಿಕ ಮಾತನಾಡಿದ ಶಾಸಕರು, ಗ್ರಾಮದಲ್ಲಿ ಕನಕ ಸಮುದಾಯ ಭವನ, ವಾಲ್ಮೀಕಿ ಸಮುದಾಯ ಭವನ ಹಾಗೂ ಗ್ರಾಮದ ಎಲ್ಲಾ ರಸ್ತೆಗಳ ಅಭಿವೃದ್ಧಿ ಬಹುತೇಕ ಪೂರ್ಣಗೊಂಡಿದ್ದು ಇನ್ನುಳಿದ ಅಲ್ಪಸ್ವಲ್ಪ ಕಾಮಗಾರಿಗಳನ್ನು ಸದ್ಯದಲ್ಲೇ ಕೈಗೆತ್ತಿಕೊಂಡು ಆ ಕೆಲಸಗಳಿಗೂ ಭೂಮಿ ಪೂಜೆ ಮಾಡುವ ಮೂಲಕ ಗ್ರಾಮದ ಸಮಗ್ರ ಅಭಿವೃದ್ಧಿಗೆ ಗಮನ ಹರಿಸುತ್ತೇನೆ ಎಂದರು.

ಇದೇ ವೇಳೆ ಸಾರ್ವಜನಿಕರು ಕುಂದು ಕೊರತೆ ಆಲಿಸಿದ ಶಾಸಕರು, ಸಾರ್ವಜನಿಕರ ಸಮಸ್ಯೆಯನ್ನು ಆದಷ್ಟು ಬೇಗ ಬಗೆಹರಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಈ ಸಂದರ್ಭ ಗ್ರಾಪಂ ಅಧ್ಯಕ್ಷೆ ನಾಗವೇಣಿ, ಉಪಾಧ್ಯಕ್ಷ ಲೀಲಾವತಿ, ಕಾಂಗ್ರೆಸ್ ಯುವ ಮುಖಂಡ ಬಿ.ಆರ್.ರಾಕೇಶ್, ಗ್ರಾಪಂ ಮಾಜಿ ಉಪಾಧ್ಯಕ್ಷ ಬಿ.ಪಿ.ಮಹದೇವು, ಗ್ರಾಪಂ ಸದಸ್ಯರಾದ ಸಿದ್ದಮ್ಮ, ಮಾಲೇಗೌಡ, ಪ್ರಭು, ಎಂ.ಮಹದೇವು, ಬಸವರಾಜು, ಕೆಮರಿಗೌಡ, ಎಸ್.ಚಂದ್ರ ಮಧು, ಪಿಡಿಓ ಪ್ರಕಾಶ್ ಹಾಜರಿದ್ದರು.

ಕೋಲಾರದಲ್ಲಿ ಅಂಬೇಡ್ಕರ್‌ಗೆ ಅಪಮಾನ

ಧಿಕ್ಕಾರ ಕೂಗಿದವನ ಗಡಿಪಾರಿಗೆ ದಸಂಸ ಒತ್ತಾಯ



ತಿ.ನರಸೀಪುರ, ಡಿ.12– ಕೋಲಾರ ನಗರಸಭೆಯಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರಿಗೆ ಧಿಕ್ಕಾರ ಕೂಗಿ ಅಪಮಾನ ಮಾಡಿರುವ ವ್ಯಕ್ತಿ ವಿರುದ್ಧ ದೇಶ ದ್ರೋಹದ ಪ್ರಕರಣ ದಾಖಲಿಸಿ ಗಡಿಪಾರು ಮಾಡುವಂತೆ ದಲಿತ ಸಂಘರ್ಷ ಸಮಿತಿ ಒತ್ತಾಯಿಸಿದೆ.

ಈ ಸಂಬಂಧ ತಹಸೀಲ್ದಾರ್ ಮೂಲಕ ಮುಖ್ಯಮಂತ್ರಿ ಬೊಮ್ಮಾಯಿ ಅವರಿಗೆ ಮನವಿ ಪತ್ರ ಸಲ್ಲಿಸಿರುವ ಸಮಿತಿಯು ಡಾ.ಅಂಬೇಡ್ಕರ್ ಅವರಿಗೆ ಅಪಮಾನ ಮಾಡಿದ ಕೋಲಾರ ನಗರಸಭೆ ಸದಸ್ಯ ಅಂಬರೀಶ್ ವಿರುದ್ಧ ಪ್ರಕರಣ ದಾಖಲಿಸುವಂತೆ ಒತ್ತಾಯಿಸಿದೆ.

ಪಟ್ಟಣದ ತಾಲೂಕು ಕಚೇರಿಯಲ್ಲಿ ತಹಸೀಲ್ದಾರ್ ಸಿ.ಜೆ. ಗೀತಾ ಅವರಿಗೆ ಮನವಿ ಸಲ್ಲಿಸಿದ ಮುಖಂಡರು ಕೂಡಲೇ ಅಂಬರೀಶ್ ವಿರುದ್ಧ ಕಠಿಣ ಕ್ರಮ ಜರುಗಿಸಿ ಬಂಧಿಸುವಂತೆ ಆಗ್ರಹಿಸಿದರು.

ತಾಲೂಕು ಸಂಚಾಲಕ ಕೆಂಪಯ್ಯನಹುಂಡಿ ಆರ್.ರಾಜು ಮಾತನಾಡಿ, ಡಾ.ಬಿ.ಆರ್.ಅಂಬೇಡ್ಕರ್ ರಚಿಸಿರುವ ಭಾರತ ಸಂವಿಧಾನವನ್ನು ವಿಶ್ವದಲ್ಲೇ ಅತ್ಯಂತ ಗೌರವದಿಂದ ಕಾಣುತ್ತಿರುವ ಸಂದರ್ಭ ಕೋಲಾರ ನಗರಸಭೆ ಸದಸ್ಯ ಅಂಬರೀಶ್ ಎಂಬಾತ ಅಂಬೇಡ್ಕರ್ ಅವರ ಪರಿ ನಿರ್ವಾಣ ದಿನದಂದು ನಗರಸಭೆ ಕಚೇರಿ ಒಳಗೆ ಸಾರ್ವಜನಿಕವಾಗಿ ಧಿಕ್ಕಾರ ಕೂಗಿ ಅಪಮಾನ ಮಾಡಿರುವುದು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಅಂಬೇಡ್ಕರ್ ರಚನೆ ಮಾಡಿರುವ ಶಾಸಕಾಂಗದಡಿ ನಗರಸಭೆಯಲ್ಲಿ ಸದಸ್ಯನಾಗಿರುವ ಅಂಬರೀಶ್ ಆಸ್ತಿ ಮುಟ್ಟುಗೋಲು ಹಾಕಿಕೊಂಡು, ಈತನ ಪೌರತ್ವ ರದ್ದುಪಡಿಸಬೇಕು. ರಾಷ್ಟ್ರದ್ರೋಹಿ ಕಾಯ್ದೆಯಡಿ ಕಾನೂನು ರೀತ್ಯಾ ಕ್ರಿಮಿನಲ್ ಮೊಕದ್ದಮೆ ದಾಖಲಿಸಿ ನಗರಸಭೆ ಸದಸ್ಯ ಸ್ಥಾನದಿಂದ ವಜಾಮಾಡಿ ದೇಶದಿಂದಲೇ ಗಡಿಪಾರು ಮಾಡಬೇಕೆಂದು ಒತ್ತಾಯಿಸಿದರು.

ಈ ವೇಳೆ ಸಮಿತಿ ಸಂಘಟನಾ ಸಂಚಾಲಕ ಮನೋಜ್ ಕುಮಾರ್, ಜಿಲ್ಲಾ ವಿಭಾಗೀಯ ಸಂಚಾಲಕ ಕನ್ನಾಯಕನಹಳ್ಳಿ ಮರಿಸ್ವಾಮಿ, ತಾಲೂಕು ಸಂಚಾಲಕ ಮಾದಿಗಹಳ್ಳಿ ಮಹೇಶ್, ತೊಟ್ಟವಾಡಿ ರಾಜಪ್ಪ, ನಿಲಸೋಗೆ ಕುಮಾರ್ ಸೋಸಲೆ ಎಸ್.ವಿ.ಮಹೇಶ್, ಟೌನ್ ಸಂಚಾಲಕ ಶ್ರೀರಾಂಪುರ ಗಿರೀಶ್, ವಿನಯ್ ಕುಮಾರ್, ತೊಟ್ಟವಾಡಿ ಮಹದೇವ ಮತ್ತಿತರರಿದ್ದರು.

ಮಾನವೀಯತೆ ಶ್ರೇಯೋಭಿವೃದ್ಧಿಗಾಗಿ

ದಲೈಲಾಮಾ ಸಂದೇಶ ಕಾರ್ಯರೂಪಕ್ಕೆ ತನ್ನಿ

ಇಂಡೋ ಟಿಬೆಟಿಯನ್ ಫ್ರೆಂಡ್‌ಶಿಪ್ ಸಂಘದ ಅಧ್ಯಕ್ಷ ಬಿ.ವಿ.ಜವರೇಗೌಡ



ಬೈಲಕುಪ್ಪೆ, ಡಿ.12– ಮಾನವೀಯತೆಯ ಶ್ರೇಯೋಭಿವೃದ್ಧಿಗಾಗಿ ದಲೈಲಾಮಾ ಅವರ ಸಂದೇಶವನ್ನು ಕಾರ್ಯರೂಪಕ್ಕೆ ತರುವಲ್ಲಿ ಪ್ರತಿಯೊಬ್ಬ ವ್ಯಕ್ತಿ ಉಪಕ್ರಮ ತೆಗೆದುಕೊಂಡರೆ, ಶಾಂತಿಗೆ ಅಡ್ಡಿಯಾಗಿರುವ ಯುದ್ಧ, ಶೋಷಣೆ, ಆಕ್ರಮಣ ಮತ್ತು ದಮನಕ್ಕೆ ಹೆಚ್ಚಿನ ಕೊಡುಗೆ ನೀಡಿದಂತಾಗುತ್ತದೆ ಎಂದು ಇಂಡೋ ಟಿಬೆಟಿಯನ್ ಫ್ರೆಂಡ್‌ಶಿಪ್ ಸಂಘದ ಅಧ್ಯಕ್ಷ ಬಿ.ವಿ.ಜವರೇಗೌಡ ತಿಳಿಸಿದರು.

ಪಿರಿಯಾಪಟ್ಟಣ ತಾಲೂಕಿನ ಬೈಲಕುಪ್ಪೆಯ ಟಿಬೆಟಿಯನ್ ಕ್ಯಾಂಪಿನ ದಲೈಲಾಮ ಆವರಣದಲ್ಲಿ ನಡೆದ ಪವಿತ್ರ 14ನೇ ದಲೈಲಾಮಾ ಅವರಿಗೆ ನೋಬೆಲ್ ಶಾಂತಿ ಪ್ರಶಸ್ತಿಯ 33ನೇ ವಾರ್ಷಿಕೋತ್ಸವದ ಮುಖ್ಯ ಅತಿಥಿಯಾಗಿ ಅವರು ಮಾತನಾಡಿದರು.

ಅಹಿಂಸೆಯ ನಿರಂತರ ಪ್ರತಿಪಾದನೆಗಾಗಿ ದಲೈಲಾಮಾ ಅವರು ಪ್ರತಿಷ್ಠಿತ ನೋಬೆಲ್ ಶಾಂತಿ ಪ್ರಶಸ್ತಿ ಪಡೆದಿದ್ದು, ಈ ಪ್ರಶಸ್ತಿ ಅವರ ಪವಿತ್ರತೆಯ ರಚನಾತ್ಮಕ ಪ್ರಯತ್ನ ಮತ್ತು ಅಂತರಾಷ್ಟ್ರೀಯ ಸಂಘರ್ಷ ಪರಿಹಾರ, ಮಾನವ ಹಕ್ಕುಗಳ ಉಲ್ಲಂಘನೆ ಮತ್ತು ಜಾಗತಿಕ ಪರಿಸರ ಸವಾಲುಗಳನ್ನು ಪರಿಹರಿಸುವ ಮಾನ್ಯತೆಯನ್ನು ಸಂಕೇತಿಸುತ್ತದೆ ಎಂದು ಹೇಳುವುದರೊಂದಿಗೆ ದಲಾಮ ಅವರಿಗೆ ಭಾರತ ರತ್ನ ನೀಡಿ ಗೌರವಿಸಬೇಕು ಎಂದು ಕೇಂದ್ರ ಸರ್ಕಾರಕ್ಕೆ ಒತ್ತಾಯಿಸಿದರು.

ಇದೇ ಸಂದರ್ಭ ಬೈಲಕುಪ್ಪೆ ಟಿಬೆಟಿಯನ್ ವಿವಿಧ ಶಾಲಾ ಮಕ್ಕಳು ಸಂಗೀತ ಕಾರ್ಯಕ್ರಮಗಳೊಂದಿಗೆ ನೃತ್ಯ ಪ್ರದರ್ಶಿಸಿದರು. ಟಿಬೆಟ್‌ನ ವಿವಿಧ ಇಲಾಖೆಯಲ್ಲಿ 25 ವರ್ಷ ಸುದೀರ್ಘ ಸೇವೆ ಸಲ್ಲಿಸಿದವರಿಗೆ, ವಿವಿಧ ಶಾಲೆಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ, ಪ್ರಮಾಣ ಪತ್ರ ನೀಡಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಸ್ಥಳೀಯ ಟಿಬೆಟಿಯನ್ ಆಡಳಿತ ವರ್ಗದ ಅಧಿಕಾರಿಗಳು, ಟಿಬೆಟಿಯನ್ ಮಂದಿರದ ವಿವಿಧ ಹಿರಿಯ ಬೌದ್ಧ ಹಿರಿಯ ಬಿಕ್ಷುಗಳು, ಜೆಪಿ ಅರಸ್, ರಾಜೇಂದ್ರ ಸೇರಿದಂತೆ ಮತ್ತಿತರರಿದ್ದರು.

ಮಹಿಳಾ ಸಬಲೀಕರಣಕ್ಕೆ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಪೂರಕ

ತಿ.ನರಸೀಪುರ, ಡಿ.12– ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಗ್ರಾಮೀಣರ ಬದುಕಿನ ಅಭಿವೃದ್ಧಿ ಹಾಗೂ ಮಹಿಳಾ ಸಬಲೀಕರಣಕ್ಕೆ ಪೂರಕವಾಗಿವೆ ಎಂದು ಚಿದರವಳ್ಳಿ ಗ್ರಾಮದ ಸಿದ್ಧರಹಳ್ಳಿ ಪಾರಮಾರ್ಥ ಗವಿಮಠ ಬೊಮ್ಮನಹಳ್ಳಿಯ ಡಾ.ಮಲ್ಲಿಕಾರ್ಜುನ ಸ್ವಾಮೀಜಿ ತಿಳಿಸಿದರು.

ತಾಲೂಕಿನ ದೊಡ್ಡಬಾಗಿಲು ವಲಯದ ಮುಸುವಿನ ಕೊಪ್ಪಲು ಗ್ರಾಮದಲ್ಲಿ ನಡೆದ ಸಾಮೂಹಿಕ ಶ್ರೀಸತ್ಯನಾರಾಯಣಸ್ವಾಮಿ ಪೂಜೆ ಹಾಗೂ ಧಾರ್ಮಿಕ ಸಭಾ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಸತ್ಯ ಮತ್ತು ಧರ್ಮ ಒಂದೇ ನಾಣ್ಯದ ಎರಡು ಮುಖಗಳು. ಇವುಗಳನ್ನು ಜೋಪಾನವಾಗಿ ಕಾಪಾಡಿಕೊಂಡು ಹೋಗಬೇಕು. ಜೀವನದಲ್ಲಿ ಉತ್ತಮ ಮೌಲ್ಯಗಳನ್ನು ರೂಢಿಸಿಕೊಳ್ಳಬೇಕು ಎಂದರಲ್ಲದೇ ಮೌಲ್ಯಗಳ ಬಗ್ಗೆ ಮಾಹಿತಿ ನೀಡಿದರು.

ಯೋಜನೆ ಜಿಲ್ಲಾ ನಿರ್ದೇಶಕ ಎಂ.ಲಕ್ಷ್ಮಣ್ ಮಾತನಾಡಿ, ಗ್ರಾಮಾಭಿವೃದ್ಧಿ ಯೋಜನೆ ಮೂಲಕ ವೀರೇಂದ್ರ ಹೆಗ್ಗಡೆಯವರ ಮಾರ್ಗದರ್ಶನದಲ್ಲಿ ಪ್ರತಿಯೊಬ್ಬ ವ್ಯಕ್ತಿಗೂ ಅಗತ್ಯ ಸೌಲಭ್ಯ ದೊರಕಿಸುವ ಪ್ರಯತ್ನ ಮಾಡುತ್ತಿದ್ದೇವೆ.



ಜನಮಂಗಳ ಕಾರ್ಯಕ್ರಮ, ಮಾಸಾಶನ, ವಾತ್ಸಲ್ಯ ಕಾರ್ಯಕ್ರಮ, ನಮ್ಮೂರು ನಮ್ಮ ಕೆರೆ, ಕೃಷಿ ಅಭಿವೃದ್ಧಿ ಚಟುವಟಿಕೆಗಳು, ಮದ್ಯವರ್ಜನ ಶಿಬಿರದಂತಹ ಕಾರ್ಯಕ್ರಮಗಳ ಮೂಲಕ ಗ್ರಾಮೀಣರ ಮನೆ ಬಾಗಿಲು ತಲುಪುತ್ತಿದ್ದೇವೆ. ಯೋಜನೆಗಳ ಸದುಪಯೋಗ ಪಡಿಸಿಕೊಳ್ಳಬೇಕೆಂದು ತಿಳಿಸಿದರು.

ಜನಜಾಗೃತಿ ವೇದಿಕೆ ಸದಸ್ಯ ಕೆ.ಎನ್.ಪ್ರಭುಸ್ವಾಮಿ ಮಾತನಾಡಿ, ಮಹಿಳೆಯರಿಗೆ ಸಾಲ ನೀಡಲು ಯಾವುದೇ ಸಂಸ್ಥೆ ಮುಂದೆ ಬಂದಿರಲಿಲ್ಲ. ಗ್ರಾಮಾಭಿವೃದ್ಧಿ ಯೋಜನೆ ಸುಲಭ ಸಾಲ ಸೌಲಭ್ಯ ಸಿಗುವ ನಿಟ್ಟಿನಲ್ಲಿ, ಮಹಿಳೆಯರ ಸ್ವ ಉದ್ಯೋಗಕ್ಕೆ ಹೆಚ್ಚು ಒತ್ತು ನೀಡಿ ಅವರ ಕುಟುಂಬದ ಆರ್ಥಿಕ ಅಭಿವೃದ್ಧಿಗೆ ಸಹಕಾರಿಯಾಗಿದೆ. ನಮ್ಮ ಸಂಘಗಳನ್ನು ಸರಿಯಾದ ರೀತಿಯಲ್ಲಿ ಉತ್ತಮ ವ್ಯವಹಾರ ಮಾಡಿಕೊಂಡು ಪರಿವರ್ತನೆಯಾಗಿ ಅಭಿವೃದ್ಧಿ ಹೊಂದಿದಾಗ ನಾವು ಯೋಜನೆಗೆ ಗೌರವ ಸಲ್ಲಿಸಿದಂತಾಗುತ್ತದೆ ಎಂದು ತಿಳಿಸಿದರು.

ಸಾಮೂಹಿಕ ಶ್ರೀಸತ್ಯನಾರಾಯಣಸ್ವಾಮಿ ಪೂಜಾ ಸಮಿತಿ ಅಧ್ಯಕ್ಷ ಸೋಮಣ್ಣ, ಪ್ರಗತಿಪರ ರೈತ ಜೆ.ರಾಜಶೇಖರಮೂರ್ತಿ, ಮುತ್ತುಲವಾಡಿ ಗ್ರಾಪಂ ಅಧ್ಯಕ್ಷ ರಮೇಶ್, ದೊಡ್ಡಬಾಗಿಲು ಗ್ರಾಪಂ ಅಧ್ಯಕ್ಷ ಮಹದೇವಸ್ವಾಮಿ, ಬೆನಕನಹಳ್ಳಿ ಗ್ರಾಪಂ ಅಧ್ಯಕ್ಷೆ ಗೌರಮ್ಮ, ಸೋಸಲೆ ಗ್ರಾಪಂ ಅಧ್ಯಕ್ಷ ಮಹೇಶ್, ಪೂಜಾ ಸಮಿತಿ ಸದಸ್ಯರಾದ ಸೋಮಣ್ಣ, ಪುಷ್ಪಲತಾ, ಗಿರಿಯಪ್ಪ, ಸಿದ್ದಮ್ಮ, ರಮೇಶ್, ಬಸಪ್ಪ, ಮಹದೇವಯ್ಯ, ಕೃಷ್ಣ, ಮಂಜುಳಾ, ಅನಿತಾ ಯೋಜನಾಧಿಕಾರಿ ಹನುಮಂತಪ್ಪ, ಮೇಲ್ವಿಚಾರಕ ಸಂತೋಷ್, ಕೃಷಿ ಮೇಲ್ವಿಚಾರಕ ಟಿ.ಆರ್ ಕುಮಾರ್, ಸೇವಾ ಪ್ರತಿನಿಧಿ ಪ್ರಕಾಶ್, ಗಾಯಿತ್ರಿ, ಶೋಭಾ, ಸುಮತಿ, ರೇಖಾ, ಶೈಲಜಾ, ಸವಿತಾ, ಗಿರೀಶ್, ಒಕ್ಕೂಟದ ಅಧ್ಯಕ್ಷೆ ಮಂಜುಳಾ, ಉಪಾಧ್ಯಕ್ಷರು ಪದಾಧಿಕಾರಿಗಳು, ಪ್ರಗತಿ ಬಂಧು ಸ್ವಸಹಾಯ ಸಂಘದ ಸದಸ್ಯರು, ಗ್ರಾಮಸ್ಥರು ಭಾಗವಹಿಸಿದ್ದರು.

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1 ತ್ರಿಬಲ್ ರೈಡಿಂಗ್ (ಕ): ಬೆ.10.30ಕ್ಕೆ, ಸಲಾಂ ವೆಂಕಿ (ಹಿಂ): ಮ.1.30ಕ್ಕೆ, ರಾ.7.10ಕ್ಕೆ, ರಾ.9.55ಕ್ಕೆ, ಬಾಂಡ್ ರವಿ (ಕ): ಸಂ.4.10ಕ್ಕೆ.

ಸ್ಕ್ರೀನ್ 2 ಮೈಸೂರು ಡೈರಿಸ್ (ಕ): ಬೆ.11ಕ್ಕೆ, ರಾ.7.15ಕ್ಕೆ, ವರಲಾರು ಮುಕ್ಕಿಯಂ (ತ): ಮ.1.20ಕ್ಕೆ, ನೈ ಸೇಕರ್ ರಿಟರ್ನ್ಸ್ (ತ): ಸಂ.4.15ಕ್ಕೆ, ಗುರುತುಂದ ಶೀತಾಕಾಲಂ (ತೆ): ರಾ.9.50ಕ್ಕೆ.

ಸ್ಕ್ರೀನ್ 3 ವಿಜಯಾನಂದ (ಕ): ಬೆ.10.35ಕ್ಕೆ, ಸಂ.4ಕ್ಕೆ, ರಾ. 7ಕ್ಕೆ, ರಾ.10.10ಕ್ಕೆ, ಡಾ.56 (ಕ): ಮ.1.45ಕ್ಕೆ.

ಸ್ಕ್ರೀನ್ 4 ಗಂಧದ ಗುಡಿ (ಕ): ಬೆ.10.50ಕ್ಕೆ, ತ್ರಿಬಲ್ ರೈಡಿಂಗ್ (ಕ): ಮ.1ಕ್ಕೆ, ಬ್ಲಾಕ್ ಪ್ಯಾಂಥರ್ (3ಡಿ)(ಇಂ): ಸಂ.4ಕ್ಕೆ, ಕಾಂತಾರ (ಕ): ರಾ.7.05ಕ್ಕೆ, ಸೌದಿವೆಲ್ಲಕ್ಕ (ಮ): ರಾ.10ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1 ಹಿಟ್: ದಿ ಸೆಕೆಂಡ್ ಕೇಸ್ (ತೆ): ಬೆ.11.10ಕ್ಕೆ, ಸಂ.4.50ಕ್ಕೆ, ಬಾಂಡ್ ರವಿ (ಕ): ಮ.1.45ಕ್ಕೆ, ಕಾಂತಾರ (ಕ): ರಾ.7.25ಕ್ಕೆ, ರಾ.10.30ಕ್ಕೆ.

ಸ್ಕ್ರೀನ್ 2 ವಿಜಯಾನಂದ (ಕ): ಬೆ.10.15ಕ್ಕೆ, ಮ.1.20ಕ್ಕೆ, ಸಂ.6.45ಕ್ಕೆ, ರಾ.10ಕ್ಕೆ, ಗಂಧದ ಗುಡಿ (ಕ): ಸಂ.4.35ಕ್ಕೆ.

ಸ್ಕ್ರೀನ್ 3 ಕಾಂತಾರ (ಕ): ಬೆ.11.10ಕ್ಕೆ, ಡಾ.56 (ಕ): ಮ.2.05ಕ್ಕೆ, ವಿಜಯಾನಂದ (ಕ): ಸಂ.4.25ಕ್ಕೆ, ಮೈಸೂರು ಡೈರಿಸ್ (ಕ): ರಾ.7.40ಕ್ಕೆ, ಪಂಚತಾರಂ (ತೆ): ರಾ.10.10ಕ್ಕೆ.

ಸ್ಕ್ರೀನ್ 4 ಗುರುತುಂದ ಶೀತಾಕಾಲಂ (ತೆ): ಬೆ.10.25ಕ್ಕೆ, ರಾ.7.20ಕ್ಕೆ, ನೈ ಸೇಕರ್ ರಿಟರ್ನ್ಸ್ (ತ): ಮ.1.15ಕ್ಕೆ, ಕಾಂತಾರ (ಕ): ಸಂ.4.15ಕ್ಕೆ, ವರಲಾಕು ಮುಕ್ಕಿಯಂ (ತ): ರಾ.10.20ಕ್ಕೆ,

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1 ಓ (ಕ): ಬೆ.10.30ಕ್ಕೆ, ಯಶೋಧಾ (ತೆ): ಮ.1.15ಕ್ಕೆ, ರಾಣಾ (ಕ): ಸಂ.4ಕ್ಕೆ, ಲವ್ ಟುಡೆ (ತ): ಸಂ.6.30ಕ್ಕೆ, ಯೆಲ್ಲೋ ಗ್ಯಾಂಗ್ಸ್ (ಕ): ರಾ.9.30ಕ್ಕೆ.

ಸ್ಕ್ರೀನ್ 2 ಹುಬ್ಬಳ್ಳಿ ಡಾಬಾ (ಕ): ಬೆ.10.15ಕ್ಕೆ, ಕಾಂತಾರ (ಕ): ಮ.12.45ಕ್ಕೆ, ಸಂ.6.35ಕ್ಕೆ, ದಿಲ್ ಪಸಂದ್ (ಕ): ಮ.3.40ಕ್ಕೆ, ಗಂಧದಗುಡಿ (ಕ): ರಾ.9.30ಕ್ಕೆ.

ಸ್ಕ್ರೀನ್ 3 ಕಾಂತಾರ (ಕ): ಬೆ.10.30ಕ್ಕೆ, ಮ.3.25ಕ್ಕೆ, ಗಂಧದ ಗುಡಿ (ಕ): ಮ.1.25ಕ್ಕೆ, ಬ್ಲಾಕ್ ಪ್ಯಾಂಥರ್ (3ಡಿ)(ಇಂ): ಸಂ.6.20ಕ್ಕೆ, ರಾ.9.30ಕ್ಕೆ.

ಸ್ಕ್ರೀನ್ 4 ದಿಲ್ ಪಸಂದ್ (ಕ): ಬೆ.10.40ಕ್ಕೆ, ಬನಾರಸ್ (ಕ): ಮ.1.45ಕ್ಕೆ, ಮಿರಲ್ (ತ):

ಪಿವಿಆರ್ ಸಿನಿಮಾಸ್
PVR CINEMAS
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಕಾಂತಾರ (ಕ): ಬೆ.9.20ಕ್ಕೆ, ಮ.12.30ಕ್ಕೆ, ಮ.1ಕ್ಕೆ, ಮ.3.40ಕ್ಕೆ, ಸಂ.6.35ಕ್ಕೆ, ರಾ.9.45ಕ್ಕೆ, ದಿ ಬ್ಲ್ಯಾಕ್ ಆಡಮ್ (ಇ): ಬೆ.9.55ಕ್ಕೆ, ಮ.12.45ಕ್ಕೆ, ಸ.7.05ಕ್ಕೆ, ರಾ.9.50ಕ್ಕೆ, ಪ್ರಿನ್ಸ್ (ತ): ಮ.12.40ಕ್ಕೆ, ರಾ.7.10ಕ್ಕೆ ಸರ್ದಾರ್ (ತ): ಬೆ. 9.15ಕ್ಕೆ ಮ.3.45ಕ್ಕೆ,

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ನಾನೇ ನರರಾಕ್ಷಸ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕಾಂತಾರ (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಡೇ ಅಂಡ್ ಸಮ್‌ಒನ್ (ತೆ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಬಿಹೈಂಡ್ ಸಮ್‌ಒನ್ (ತೆ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಸುನಾಮಿ 143 (ಕ)	4 ಪ್ರದರ್ಶನಗಳು
ಗಾಯಿತ್ರಿ	
ಮಠ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ನೈ ಸೇಕರ್ ರಿಟರ್ನ್ಸ್ (ತ)	4 ಪ್ರದರ್ಶನಗಳು
ಸಂಗಂ	
ಡಾ.56 (ಕ)	4 ಪ್ರದರ್ಶನಗಳು
ಲಿಡೋ	
ವಿಜಯಾನಂದ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಕಾಂತಾರ (ಕ)	4 ಪ್ರದರ್ಶನಗಳು
ಪ್ರಭಾ	
ಮೈಸೂರು ಡೈರಿಸ್ (ಕ)	4 ಪ್ರದರ್ಶನಗಳು



ಬನ್ನೂರಿನಲ್ಲಿ ಪ್ರಜ್ಞಾವಂತ ಯುವಕರ ಜಾಗೃತ ಸಮಿತಿಯಿಂದ ಹಮ್ಮಿಕೊಂಡಿದ್ದ ಸಂವಿಧಾನ ದಿನಾಚರಣೆ, ವಕೀಲ ದಿನಾಚರಣೆ ಮತ್ತು ವಿಶೇಷ ಚೇತನರ ದಿನಾಚರಣೆಯಲ್ಲಿ ಅಂಗವಿ ಕಲರಿಗೆ ಆಹಾರ ಕಿಟ್ ವಿತರಿಸಲಾಯಿತು. ವಕೀಲರಾದ ವಿ.ಪ್ರಕಾಶ್, ಕಿರಣ್‌ಕುಮಾರ್, ರವೀಂದ್ರ, ಗೋವಿಂದರಾಜು, ಪ್ರಸನ್ನ, ರವಿ, ಸುನೀಲ್ ಕುಮಾರ್, ಸ್ವಾಮಿ, ಲೋಕೇಶ್, ಪ್ರಭುದೇವ, ಸಿದ್ದರಾಜು, ಶಿವಕುಮಾರ್ ಇತರರಿದ್ದರು.

ಅರಕಲಗೂಡಿಂದ ಕಾಂಗ್ರೆಸ್ ಟಿಕೆಟ್‌ಗೆ ಎ.ಮಂಜು, ಶ್ರೀಧರ್‌ಗೌಡ, ಡಾ. ದಿನೇಶ್ ಭೈರೇಗೌಡ, ಕೃಷ್ಣೇಗೌಡ, ವಿಜಯಕುಮಾರ್ ಅರ್ಜಿ ಸಲ್ಲಿಕೆ


ಎ.ಮಂಜು


ಶ್ರೀಧರ್‌ಗೌಡ


ಡಾ.ದಿನೇಶ್


ಕೃಷ್ಣೇಗೌಡ

ಹಾಸನ, ಡಿ. 12– ಅರಕಲಗೂಡು ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಟಿಕೆಟ್‌ಗಾಗಿ ಹಾಲಿ ಬಿಜೆಪಿಯಲ್ಲಿರುವ ಮಾಜಿ ಸಚಿವ ಎ. ಮಂಜು ಅವರು ತಮ್ಮ ಸಹಾಯಕರ ಮೂಲಕ ಅರ್ಜಿ ಸಲ್ಲಿಸಿದ್ದಾರೆ. ಅವರು ಕಾಂಗ್ರೆಸ್ ಸೇರುವ ಸಾಧ್ಯತೆ ಇದ್ದು, ಅರ್ಜಿ ಸಲ್ಲಿಸಲು ಕೊನೆಯ ದಿನ ನಿಗದಿಪಡಿಸಿದ್ದರಿಂದ ಅಷ್ಟರೊಳಗಾಗಿ ಟಿಕೆಟ್‌ಗಾಗಿ ಕೆಪಿಸಿಸಿಗೆ ಅರ್ಜಿ ಸಲ್ಲಿಸಿದ್ದಾರೆ ಎಂದು ಹೇಳಲಾಗಿದೆ.


ಯೋಗ ರಮೇಶ್

ಎ.ಮಂಜು ಮಾತ್ರವಲ್ಲದೇ ಶ್ರೀಧರ್‌ಗೌಡ, ಕೃಷ್ಣೇಗೌಡ, ಡಾ. ದಿನೇಶ್ ಭೈರೇಗೌಡ, ಶೇಷೆಗೌಡ ಮತ್ತು ವಿಜಯಕುಮಾರ್ ಅವರು ಕಾಂಗ್ರೆಸ್ ಟಿಕೆಟ್‌ಗಾಗಿ ಅರ್ಜಿ ಸಲ್ಲಿಸಿದ್ದು, ಹೈಕಮಾಂಡ್ ಯಾರಿಗೆ ಟಿಕೆಟ್ ನೀಡಲಿದೆ ಎಂಬುದನ್ನು ಕಾದು ನೋಡಬೇಕಾಗಿದೆ.

ರೈಲಿಗೆ ಸಿಲುಕಿ ಅಪರಿಚಿತ ಯುವಕ ಸಾವು

ನಂಜನಗೂಡು, ಡಿ.12– ನಗರದ ದೇವರಾಜ ಅರಸು ಸೇತುವೆ ಸಮೀಪ ಸೋಮವಾರ ಚಲಿಸುತ್ತಿದ್ದ ರೈಲಿಗೆ ಸಿಲುಕಿ ಅಪರಿಚಿತ ಯುವಕ(30) ಸ್ಥಳದಲ್ಲೇ ಮೃತಪಟ್ಟಿದ್ದಾನೆ.

ಮೃತ ಯುವಕನ ಜೇಬಿನಲ್ಲಿ ಮೈಸೂರಿನ ಬಂಡಿಪಾಳ್ಯದಿಂದ ನಂಜನಗೂಡಿಗೆ ಸಾರಿಗೆ ಸಂಸ್ಥೆ ಬಸ್‌ನಲ್ಲಿ ಪ್ರಯಾಣಿಸಿದ ಟಿಕೆಟ್ ಲಭ್ಯವಾಗಿದೆ. ಮೃತನ ಬಲಗೈ ತೋಳಿನಲ್ಲಿ ಎಆರ್ ಎಂಬ ಹಚ್ಚೆ, ಎದೆ ಭಾಗದಲ್ಲಿ RANJU ಎಂಬ ಹಚ್ಚೆ ಇದೆ. ವಾರಸುದಾರರು ಇದ್ದಲ್ಲಿ ರೈಲ್ವೆ ಪೊಲೀಸರನ್ನು ಸಂಪರ್ಕಿಸಬೇಕಾಗಿ ಪ್ರಕಟಣೆ ತಿಳಿಸಿದೆ.

ಏರ್ ಪಿಸ್ತೂಲ್: ಟಿ.ಎಸ್.ದಿವ್ಯಾಗೆ ಚಿನ್ನ



ಭೋಪಾಲ್: ಕರ್ನಾಟಕದ ಟಿ.ಎಸ್.ದಿವ್ಯಾ, 65ನೇ ರಾಷ್ಟ್ರೀಯ ಶೂಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ ಗೆದ್ದರು. ಸೋಮವಾರ ನಡೆದ ಮಹಿಳೆಯರ 10 ಮೀ. ಏರ್ ಪಿಸ್ತೂಲ್ ವಿಭಾಗದ ಫೈನಲ್‌ನಲ್ಲಿ 16–14 ಪಾಯಿಂಟ್ಸ್‌ಗಳಿಂದ ಉತ್ತರ ಪ್ರದೇಶದ ಸಂಸ್ಕೃತಿ ಬನಾ ವಿರುದ್ಧ ಗೆದ್ದರು. ಹರಿಯಾಣದ ರಿದಂ ಸಂಗ್ವಾನ್ ಕಂಚಿನ ಪದಕ ಪಡೆದುಕೊಂಡರು. ಒಲಿಂಪಿಯನ್ ಮನು ಭಾಕರ್, ಜೂನಿಯರ್ ಮಹಿಳೆಯರ ಏರ್ ಪಿಸ್ತೂಲ್ ವಿಭಾಗದಲ್ಲಿ ಚಿನ್ನ ಗೆದ್ದರು. ಫೈನಲ್‌ನಲ್ಲಿ 17–13ರಲ್ಲಿ ತೆಲಂಗಾಣದ ಇಶಾ ಸಿಂಗ್ ಅವರನ್ನು ಮಣಿಸಿದರು. ದಿವ್ಯಾ (578) ಮತ್ತು ಸಂಸ್ಕೃತಿ (577) ಕ್ರಮವಾಗಿ ಮೂರು ಹಾಗೂ 4ನೇ ಸ್ಥಾನ ಗಳಿಸಿದ್ದರು. ಬಳಿಕ ನಡೆದ ರ‍್ಯಾಂಕಿಂಗ್ ವಿಭಾಗದಲ್ಲಿ ಕ್ರಮವಾಗಿ ಮೊದಲ ಎರಡು ಸ್ಥಾನಗಳನ್ನು ಪಡೆದ ದಿವ್ಯಾ (254.2) ಮತ್ತು ಸಂಸ್ಕೃತಿ (251.6) ಅವರು ಚಿನ್ನದ ಪದಕಕ್ಕೆ ಪೈಪೋಟಿ ನಡೆಸಲು ಅರ್ಹತೆ ಗಿಟ್ಟಿಸಿಕೊಂಡಿದ್ದರು.

11ನೇ ವರ್ಷದ ಪುಣ್ಯಸ್ಮರಣೆ



ವಿನಯ್‌ಕುಮಾರ್
ನಿಧನ: 13.12.2011

ನೀವು ನಮ್ಮನ್ನಗಲಿ ಇಂದಿಗೆ 11 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ
ದುಃಖಿತಪ್ತರು:
ತಂದೆ: ಪಿ.ವೆಂಕಟೇಶ್
ತಾಯಿ: ವಿ.ಕೋಮಲ
ಅಕ್ಕಂದಿರು ಮತ್ತು & ಭಾವಂದಿರು
ಲಷ್ಕರ್ ಮೊಹಲ್ಲಾ ಮೈಸೂರು

6ನೇ ವರ್ಷದ ಪುಣ್ಯಸ್ಮರಣೆ



ಶ್ರೀಮತಿ H.C. ಜಯಲಕ್ಷ್ಮಿ
ನಿಧನ: 13.12.2016

ನೀವು ನಮ್ಮನ್ನಗಲಿ ಇಂದಿಗೆ ಆರು ವರ್ಷ ಕಳೆದರೂ ನಿಮ್ಮ ನೆನಪು ಸದಾ ನಮ್ಮ ಮನದಲ್ಲಿದೆ.
ದುಃಖತಪ್ತ:
ಪತಿ: ಪಿ. ಹೇಮಚಂದ್ರ
ಮಕ್ಕಳು: ಅರುಣ್, ಕಿರಣ್, ಆರತಿ ಮತ್ತು ಮೊಮ್ಮಕ್ಕಳು.



ಹಸಿರು ನಮ್ಮ ಉಸಿರು

ಹಾಡ್ಯ ಗ್ರಾಮ ಪಂಚಾಯ್ತಿ ಕಾರ್ಯಾಲಯ

ಹಾಡ್ಯ, ಹುಲ್ಲಹಳ್ಳಿ ಹೋ, ನಂಜನಗೂಡು ತಾ॥, ಮೈಸೂರು ಜಿಲ್ಲೆ

ಪತ್ರ ಸಂಖ್ಯೆ:ಹ.ಗ್ರಾ.ಪಂಕಾ:01/2022–23 ದಿನಾಂಕ: 08–12–2022

ಕೆರೆಗಳ ಮೀನುಪಾಶುವಾರು ಹಕ್ಕಿನ ಟೆಂಡರ್ ಕಂ ಬಹಿರಂಗ ಹರಾಜು ಪ್ರಕಟಣೆ

ನಂಜನಗೂಡು ತಾಲ್ಲೂಕು ಹುಲ್ಲಹಳ್ಳಿ ಹೋಬಳಿ ಹಾಡ್ಯ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಸಾರ್ವಜನಿಕರುಗಳಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಹಾಡ್ಯ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹಾಡ್ಯ ಗ್ರಾಮದ ದೊಡ್ಡ ಕೆರೆ ಮತ್ತು ಚಿಕ್ಕ ಕೆರೆಗಳನ್ನು ದಿನಾಂಕ 16–12–2022 ರಂದು 11 ಗಂಟೆಗೆ ಮತ್ತು 12 ಗಂಟೆಗೆ ಮೀನುಪಾಶುವಾರು ಟೆಂಡರ್ ಕಂ ಬಹಿರಂಗ ಹರಾಜು ಮಾಡುತ್ತಿದ್ದು, ಕೆರೆಗಳ ಮಾಹಿತಿ ಮತ್ತು ನಿಬಂಧನೆಗಳಿಗೆ ಹಾಡ್ಯ ಗ್ರಾಮ ಪಂಚಾಯಿತಿ ಕಾರ್ಯಾಲಯವನ್ನು ಸಂಪರ್ಕಿಸಲು ಕೋರಿದೆ.

ಸಹಿ/– ಅಧ್ಯಕ್ಷರು, ಹಾಡ್ಯ ಗ್ರಾಮ ಪಂಚಾಯಿತಿ, ನಂಜನಗೂಡು ತಾಲ್ಲೂಕು
ಸಹಿ/– ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಹಾಡ್ಯ ಗ್ರಾಮ ಪಂಚಾಯ್ತಿ, ನಂಜನಗೂಡು ತಾಲ್ಲೂಕು.

ಮೈಸೂರು ಮಿತ್ರ 43
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು



